24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 111 | ನವದೆಹಲಿ | ಬೆಲೆ ₹10 | ಅಕ್ಟೋಬರ್, 17, 2026, ಶನಿವಾರ

## ಒಳಪುಟಗಳಲ್ಲಿ

ಕನಾಟ್ ಪ್ಲೇಸ್‌ನಲ್ಲಿ ವ್ಯಾಪಾರ ಬಂದ್ ಆತಂಕ ಎನ್‌ಡಿಎಂಸಿಗೆ ಸುಪ್ರೀಂ ಕೋರ್ಟ್ ಎಚ್ಚರಿಕೆ - ಪು.43

ಪೊಲೀಸ್ ಸಿಬ್ಬಂದಿ ಬೆನ್ನುಮೂಳೆ ಆರೋಗ್ಯ ರಕ್ಷಣೆಗೆ ಬ್ಯಾಕ್ ದ ಬ್ಯಾಕ್‌ಬೋನ್ ಅಭಿಯಾನಕ್ಕೆ ಚಾಲನೆ - ಪು.5

ಸಿದ್ದರಾಮಯ್ಯ ಚಾರಿತ್ರ್ಯಹರಣಕ್ಕೆ ಯತ್ನ ಖಂಡನೀಯ: ಕೆ.ಸ್.ಶಿವರಾಮು - ಪು.6

# ಹೊಸ ಮತದಾರರ ಸೇರ್ಪಡೆ: 17 ರಾಜ್ಯ, ಕೇಂದ್ರಾಡಳಿತ ಪ್ರದೇಶದಲ್ಲಿ ಎಸ್‌ಎಸ್‌ಆರ್

**ನವದೆಹಲಿ, ಅ.16:** ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತು ವಿರೋಧ ಪಕ್ಷಗಳ ತೀವ್ರ ಆಕ್ಷೇಪ ಮತ್ತು ಪ್ರತಿಭಟನೆಗಳ ನಡುವೆಯೇ ಕೇಂದ್ರ ಚುನಾವಣಾ ಆಯೋಗ ಎರಡು ಮಹತ್ವದ ನಿರ್ಧಾರಗಳನ್ನು ಪ್ರಕಟಿಸಿದೆ. ಹೊಸ ಮತದಾರರನ್ನು ಸೇರ್ಪಡೆಗೊಳಿಸಲು 17 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ (ಎಸ್‌ಎಸ್‌ಆರ್) ನಡೆಸಲು ನಿರ್ಧರಿಸಿದ್ದು, ರಾಜಕೀಯ ಪಕ್ಷಗಳಿಗೆ ಮತದಾರರ ಪಟ್ಟಿಯ ಓದಬಹುದಾದ ಪಿಡಿಎಫ್ ಪ್ರತಿಗಳನ್ನು ಒದಗಿಸಲು ಮುಂದಾಗಿದೆ.

ಚುನಾವಣಾ ಆಯೋಗದ ಈ ಕ್ರಮಗಳು ಎಸ್‌ಐಆರ್ ಪ್ರಕ್ರಿಯೆ ಕುರಿತು ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ನಡೆಸುತ್ತಿರುವ ಪ್ರತಿಭಟನೆಗಳ ನಡುವೆಯೇ ಹೊರಬಿದ್ದಿವೆ. ಮತದಾರರ ಪಟ್ಟಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಹೆಸರುಗಳನ್ನು ಕೈಬಿಡಲಾಗಿದೆ ಮತ್ತು ಪರಿಷ್ಕರಣೆಯಲ್ಲಿ ಅಕ್ರಮಗಳು ನಡೆದಿವೆ ಎಂಬುದು ವಿರೋಧ ಪಕ್ಷಗಳ ಆರೋಪವಾಗಿದೆ. ಆದರೆ, ಈ ಆರೋಪಗಳನ್ನು ಚುನಾವಣಾ ಆಯೋಗ ಒಪ್ಪಿಕೊಂಡಿಲ್ಲ.

**17 ರಾಜ್ಯಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ:** ಹೊಸ ಮತದಾರರನ್ನು ನೋಂದಾಯಿಸುವ ಉದ್ದೇಶದಿಂದ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕೈಗೊಳ್ಳಲಾಗುತ್ತಿದೆ. 2027ರ ಜನವರಿ 1 ಅನ್ನು ಅರ್ಹತಾ ದಿನಾಂಕವಾಗಿ ನಿಗದಿಪಡಿಸಲಾಗಿದೆ. ಉತ್ತರಪ್ರದೇಶ, ಉತ್ತರಾಖಂಡ, ಪಂಜಾಬ್, ಗೋವಾ ಮತ್ತು ಮಣಿಪುರ ಸೇರಿದಂತೆ ಮುಂದಿನ ವರ್ಷ ವಿಧಾನಸಭಾ ಚುನಾವಣೆ ನಡೆಯಲಿರುವ ರಾಜ್ಯಗಳೂ ಈ ಪ್ರಕ್ರಿಯೆಯಲ್ಲಿ ಸೇರಿವೆ. ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡಿರುವ ಅಥವಾ ನಿರ್ದಿಷ್ಟ ಪರಿಷ್ಕರಣೆ ಅನ್ವಯವಾಗುವ ರಾಜ್ಯಗಳಲ್ಲಿ ಮತದಾರರ ಪಟ್ಟಿಯನ್ನು ನವೀಕರಿಸುವುದು ಇದರ ಉದ್ದೇಶವಾಗಿದೆ.




ಎಸ್‌ಐಆರ್ ಮತ್ತು ಎಸ್‌ಎಸ್‌ಆರ್ ಪ್ರಕ್ರಿಯೆಗಳ ನಡುವೆ ವ್ಯತ್ಯಾಸವಿದೆ. ಎಸ್‌ಐಆರ್‌ನಲ್ಲಿ ಮತದಾರರ ಹಿಂದಿನ ದಾಖಲೆಗಳ ಪರಿಶೀಲನೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಎಸ್‌ಎಸ್‌ಆರ್ ಪ್ರಕ್ರಿಯೆಯಲ್ಲಿ ಈಗಿರುವ ಮತದಾರರ ಪಟ್ಟಿಯನ್ನು ಪರಿಶೀಲಿಸಿ, ಅರ್ಹ ಹೊಸ ಮತದಾರರನ್ನು ಸೇರ್ಪಡೆಗೊಳಿಸುವುದು ಹಾಗೂ ವಿವರಗಳನ್ನು ನವೀಕರಿಸುವುದು ಮುಖ್ಯ ಉದ್ದೇಶವಾಗಿದೆ.

### ಮತದಾರರ ಪಟ್ಟಿ ಪರಿಷ್ಕರಣೆ: ಚುನಾವಣಾ ಆಯೋಗದ ಮಹತ್ವದ ನಿರ್ಧಾರ

### ರಾಜಕೀಯ ಪಕ್ಷಗಳಿಗೆ ಓದಬಹುದಾದ ಪಿಡಿಎಫ್ ರೂಪದಲ್ಲಿ ಮತದಾರರ ಪಟ್ಟಿ

**ರಾಜಕೀಯ ಪಕ್ಷಗಳಿಗೆ ಓದಬಹುದಾದ ಪಿಡಿಎಫ್:** ಚುನಾವಣಾ ಆಯೋಗದ ಮತ್ತೊಂದು ಪ್ರಮುಖ ನಿರ್ಧಾರವೆಂದರೆ ರಾಜಕೀಯ ಪಕ್ಷಗಳಿಗೆ ಮತದಾರರ ಪಟ್ಟಿಯ ಓದಬಹುದಾದ ಡಿಜಿಟಲ್ ಪ್ರತಿಗಳನ್ನು ನೀಡುವುದು. ಈವರೆಗೆ ಮತದಾರರ ಪಟ್ಟಿಯನ್ನು ಚಿತ್ರ ರೂಪದ ಪಿಡಿಎಫ್‌ನಲ್ಲಿ ನೀಡಲಾಗುತ್ತಿತ್ತು. ಇಂತಹ ಪ್ರತಿಗಳಲ್ಲಿನ ಹೆಸರುಗಳನ್ನು ನೇರವಾಗಿ ಹುಡುಕುವುದು, ಆಯ್ಕೆ ಮಾಡುವುದು ಅಥವಾ ನಕಲಿಸುವುದು ಕಷ್ಟವಾಗಿತ್ತು.

ಹೊಸ ವ್ಯವಸ್ಥೆಯಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಕರಡು ಮತ್ತು ಅಂತಿಮ ಮತದಾರರ ಪಟ್ಟಿಗಳ ಓದಬಹುದಾದ ಪಿಡಿಎಫ್ ಪ್ರತಿಗಳನ್ನು ನೀಡಲಾಗುತ್ತದೆ. ಮತದಾರರ ಸೇರ್ಪಡೆ, ಹೆಸರುಗಳ ಅಳಿಸುವಿಕೆ ಮತ್ತು ವಿವರಗಳ ಬದಲಾವಣೆಗೆ ಸಂಬಂಧಿಸಿದ ಪಟ್ಟಿಗಳನ್ನೂ ಹಂಚಿಕೊಳ್ಳಲು ಸೂಚಿಸಲಾಗಿದೆ. ಇದರಿಂದ ಮತದಾರರ ಪಟ್ಟಿಯಲ್ಲಿನ ಬದಲಾವಣೆಗಳನ್ನು ಪರಿಶೀಲಿಸುವುದು ಮತ್ತು ದೋಷಗಳನ್ನು ಗುರುತಿಸುವುದು ಸುಲಭವಾಗಲಿದೆ. ಡಿಜಿಟಲ್ ಪ್ರತಿಗಳಲ್ಲಿ ಮತದಾರರ ಛಾಯಾಚಿತ್ರಗಳು ಇರುವುದಿಲ್ಲ.

ಮತದಾರರ ಪಟ್ಟಿಯ ಡಿಜಿಟಲ್ ರೂಪದಲ್ಲಿ ಓದಬಹುದಾದ ಪ್ರತಿಗಳನ್ನು ನೀಡಬೇಕೆಂಬ ಬೇಡಿಕೆಯನ್ನು ಕಾಂಗ್ರೆಸ್ ಹಲವು ವರ್ಷಗಳಿಂದ ಮುಂದಿಟ್ಟಿತ್ತು. ರಾಹುಲ್ ಗಾಂಧಿ ಕೂಡ ಮತದಾರರ ಪಟ್ಟಿಯಲ್ಲಿನ ನಕಲಿ ಹೆಸರುಗಳು ಮತ್ತು ಅಕ್ರಮಗಳನ್ನು ಸುಲಭವಾಗಿ ಪತ್ತೆಹಚ್ಚಲು ಸಾಧ್ಯವಾಗುವಂತೆ ಮಾಡಬೇಕೆಂದು ಒತ್ತಾಯಿಸಿದ್ದರು.

# ನೂತನ ರಾಜ್ಯಪಾಲರಾಗಿ ಡಾ.ಸುಧಾ ಯಾದವ್ ಅಧಿಕಾರ ಸ್ವೀಕಾರ

### ಕರ್ನಾಟಕದ 22ನೇ ಹಾಗೂ 2ನೇ ಮಹಿಳಾ ರಾಜ್ಯಪಾಲೆ, ದೇವರ ಹೆಸರಲ್ಲಿ ಪ್ರಮಾಣವಚನ

**ಬೆಂಗಳೂರು, ಅ.16:** ಕರ್ನಾಟಕ ರಾಜ್ಯದ 22ನೇ ಹಾಗೂ 2ನೇ ಮಹಿಳಾ ರಾಜ್ಯಪಾಲರಾಗಿ ಡಾ.ಸುಧಾ ಯಾದವ್ ಅವರು ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದರು. ಬೆಂಗಳೂರಿನ ಲೋಕಭವನದಲ್ಲಿ ನಡೆದ ಸಮಾರಂಭದಲ್ಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರು ಸುಧಾ ಯಾದವ್ ಅವರಿಗೆ ರಾಜ್ಯಪಾಲರ ಹುದ್ದೆಯ ಪ್ರತಿಜ್ಞಾವಿಧಿ ಬೋಧಿಸಿದರು.

ಇದರೊಂದಿಗೆ ಥಾವರ್‌ಚಂದ್ ಗೆಹ್ಲೋತ್ ಅವರ ಅಧಿಕಾರಾವಧಿ ಅಂತ್ಯಗೊಂಡಿದ್ದು, ಅವರ ಸ್ಥಾನದಲ್ಲಿ ಸುಧಾ ಯಾದವ್ ಕಾರ್ಯಭಾರ ವಹಿಸಿಕೊಂಡಿದ್ದಾರೆ.

ಕರ್ನಾಟಕದ ರಾಜ್ಯಪಾಲರಾಗಿ ಸಂವಿಧಾನ ರಕ್ಷಣೆ, ರಾಜ್ಯದ ಜನರಿಗೆ ಸೇವೆ ಸಲ್ಲಿಸುತ್ತೇನೆ. ಕಾನೂನು ಪಾಲನೆ ಮಾಡುತ್ತೇನೆ ಎಂದು ಸುಧಾ ಯಾದವ್ ಅವರು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ನಂತರ ಜವಾಬ್ದಾರಿ ವಹಿಸಿಕೊಳ್ಳುವ ದಾಖಲೆಗಳಿಗೆ ಸಹಿ ಹಾಕಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಿರ್ಗಮಿತ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್, ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೂತನ ರಾಜ್ಯಪಾಲರಿಗೆ ಹೂ ಗುಚ್ಛ ನೀಡಿ ಅಭಿನಂದಿಸಿದರು. ಅಶ್ವಾರೋಹಿ ದಳದ ಬೆಂಗಾವಲಿನಲ್ಲಿ ತೆರಳಿದ ರಾಜ್ಯಪಾಲರು ಪೊಲೀಸ್ ಗೌರವರಕ್ಷೆಯನ್ನು ಸ್ವೀಕರಿಸಿದರು. ಲೋಕಭವನದ ಕಚೇರಿಗೆ ತೆರಳಿ, ಅಧಿಕೃತವಾಗಿ ಕಾರ್ಯಭಾರ ಆರಂಭಿಸಿದರು. ಲೋಕಭವನದಲ್ಲಿ ಗಣ್ಯರೊಂದಿಗೆ ನಿಂತು ಫೋಟೋಗೆ ಪೋಸ್ ನೀಡಿದರು. ನಂತರ ರಾಜ್ಯಪಾಲರು ಉಪಹಾರ ಕೂಟದಲ್ಲಿ ಭಾಗವಹಿಸಿದ್ದರು.



ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕಾರ್ಯಕ್ರಮ ನಿರೂಪಿಸಿದರು. ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಸಂಪುಟದ ಸಚಿವರು, ವಿರೋಧ ಪಕ್ಷ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣ ಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಶಾಸಕರು ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಮೈಸೂರು ರಾಜ್ಯದಲ್ಲಿ ಆರು ಹಾಗೂ ಏಕೀಕರಣ ಮತ್ತು ಮರು ನಾಮಕರಣದ ಬಳಿಕ ರಚನೆಯಾದ ಕರ್ನಾಟಕ ರಾಜ್ಯದಲ್ಲಿ 16 ರಾಜ್ಯಪಾಲರು ಕೆಲಸ ನಿರ್ವಹಿಸಿದ್ದಾರೆ. ಈವರೆಗೆ ಒಟ್ಟು 21 ರಾಜ್ಯಪಾಲರು ಸೇವೆ ಸಲ್ಲಿಸಿದ್ದು, ಸುಧಾಯಾದವ್ ಅವರು 22ನೇ ರಾಜ್ಯಪಾಲರಾಗಿದ್ದಾರೆ.

### ಡಾ. ಸುಧಾ ಯಾದವ್ ಪರಿಚಯ

ಡಾ. ಸುಧಾ ಯಾದವ್ ಅವರು ಕರ್ನಾಟಕದ 2ನೇ ಮಹಿಳಾ ರಾಜ್ಯಪಾಲರಾಗಿ ಅಧಿಕಾರ ಅಲಂಕರಿಸಿದ್ದು, ಈ ಹಿಂದೆ 1999ರಲ್ಲಿ ವಿ.ಎಸ್. ರಮಾದೇವಿ ಅವರು ರಾಜ್ಯದ ಮೊದಲ ಮಹಿಳಾ ರಾಜ್ಯಪಾಲೆಯಾಗಿ ಸೇವೆ ಸಲ್ಲಿಸಿದ್ದರು. ಡಾ. ಸುಧಾ ಯಾದವ್ ಅವರ ಪತಿ ಸುಖಬೀರ್ ಸಿಂಗ್ ಯಾದವ್ ಅವರು ಗಡಿ ಭದ್ರತಾ ಪಡೆಯ ಉಪ ಕಮಾಂಡೆಂಟ್ ಆಗಿದ್ದು, 1999ರ ಕಾರ್ಗಿಲ್ ಯುದ್ಧದಲ್ಲಿ ಪಾಕಿಸ್ತಾನಿ ಪಡೆಗಳ ಫಿರಂಗಿ ದಾಳಿಗೆ ಎದುರಾಗಿ ಹೋರಾಡಿ ಹುತಾತ್ಮರಾಗಿದ್ದರು. ಅವರಿಗೆ ಮರಣೋತ್ತರವಾಗಿ ಸೇನಾ ಪದಕ ನೀಡಿ ಗೌರವಿಸಲಾಗಿತ್ತು. ಸುಧಾ ಯಾದವ್ ಅವರು ಐಐಟಿ ರೂರ್ಕಿಯಲ್ಲಿ ರಸಾಯನಶಾಸ್ತ್ರ ವಿಷಯದಲ್ಲಿ ಎಂ.ಎಸ್ಸಿ ಮುಗಿಸಿ ಚಿನ್ನದ ಪದಕ ಗಳಿಸಿದ್ದು, ಪಿಎಚ್‌ಡಿ ಪದವೀಧರೆಯಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಪ್ರೇರಣೆಯಿಂದ ರಾಜಕೀಯ ಪ್ರವೇಶಿಸಿದ ಇವರು, 1999 ರಿಂದ 2004 ರವರೆಗೆ ಹರ್ಯಾಣದ ಮಹೇಂದ್ರಗಢ ಲೋಕಸಭಾ ಕ್ಷೇತ್ರದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಬಿಜೆಪಿ ಸಂಸದೀಯ ಮಂಡಳಿಗೆ ಆಯ್ಕೆಯಾದ 2ನೇ ಮಹಿಳೆ (ಸುಷ್ಮಾ ಸ್ವರಾಜ್ ನಂತರ) ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಜೊತೆಗೆ ಬಿಜೆಪಿ ಒಬಿಸಿ ಮೋರ್ಚಾದ ರಾಷ್ಟ್ರೀಯ ಉಸ್ತುವಾರಿಯಾಗಿ ಹಾಗೂ ಕೇಂದ್ರ ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗದ ಸದಸ್ಯೆಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

# ಹೊಸ ಉತ್ಸಾಹದೊಂದಿಗೆ ಒಟ್ಟಾಗಿ ಕೆಲಸ ಮಾಡೋಣ

## 2ನೇ ಮಹಿಳಾ ರಾಜ್ಯಪಾಲರನ್ನು ಪಡೆದಿದ್ದು ಕರ್ನಾಟಕಕ್ಕೆ ಮಹತ್ವದ ದಿನ: ಸಿಎಂ ಡಿ.ಕೆ. ಶಿವಕುಮಾರ್





**ಬೆಂಗಳೂರು, ಅ.16:** ಕರ್ನಾಟಕ ಎರಡನೇ ಮಹಿಳಾ ರಾಜ್ಯಪಾಲರನ್ನು ಪಡೆದಿದ್ದು, ರಾಜ್ಯದ ಪಾಲಿಗೆ ಇಂದು ಮಹತ್ವದ ದಿನವಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ನಡೆದ ನೂತನ ರಾಜ್ಯಪಾಲೆ ಡಾ. ಸುಧಾ ಯಾದವ್ ಅವರ ಸ್ವಾಗತ ಹಾಗೂ ನಿಕಟಪೂರ್ವ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅವರ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿ, ಈ ಮೊದಲು ಕರ್ನಾಟಕದ ಮೊದಲ ಮಹಿಳಾ ರಾಜ್ಯಪಾಲರಾಗಿದ್ದ ರಮಾದೇವಿ ಜತೆ ಕೆಲಸ ಮಾಡಿದ್ದೇವೆ. ಈಗ ಡಾ. ಸುಧಾ ಯಾದವ್ ಅವರೊಂದಿಗೆ ಕೆಲಸ ಮಾಡುವ ಅವಕಾಶ ಒದಗಿದೆ. ಹೊಸ ಉತ್ಸಾಹದೊಂದಿಗೆ ಒಟ್ಟಾಗಿ ಕೆಲಸ ಮಾಡೋಣ. ಜನ್ಮದಿನದಂದೇ ಅವರು ರಾಜ್ಯಪಾಲರಾಗಿ ಪ್ರಮಾಣವಚನ ಸ್ವೀಕರಿಸಿರುವುದು ವಿಶೇಷ ಎಂದು ಶುಭ ಕೋರಿದರು.

ನಿಕಟಪೂರ್ವ ರಾಜ್ಯಪಾಲ ಥಾವರ್‌ಸಿಂಗ್ ಗೆಹ್ಲೋತ್ ಅವರೊಂದಿಗೆ 5 ವರ್ಷ ಉತ್ತಮವಾಗಿ ಕಾರ್ಯನಿರ್ವಹಿಸಿದ್ದು, ಅವರು ನಮ್ಮೊಂದಿಗೆ ಸಹಕರಿಸಿದ್ದಾರೆ. ಕರ್ನಾಟಕ ತನ್ನ ಶ್ರೀಮಂತ ಸಂಸ್ಕೃತಿಗೆ ಹೆಸರುವಾಸಿಯಾಗಿದ್ದು, ಗೆಹ್ಲೋತ್ ಅವರ ಅವಧಿಯಲ್ಲಿ ಅವರಿಗೆ ರಾಜ್ಯದ ಉತ್ತಮ ಆಡಳಿತ, ಸಂಸ್ಕೃತಿ, ಪರಂಪರೆ ಹಾಗೂ ರಾಜ್ಯದ ಜನರ ಕುರಿತು ಪರಿಚಯವಾಗಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೂತನ ರಾಜ್ಯಪಾಲರ ನೇಮಕದ ಬಗ್ಗೆ ನನಗೆ ದೂರವಾಣಿಯ ಮೂಲಕ ತಿಳಿಸಿದರು. ರಾಜ್ಯಪಾಲರ ನಿರ್ಧಾರಗಳನ್ನು ರಾಜ್ಯ ಸರ್ಕಾರ ಬಹುತೇಕ ಸ್ವೀಕಾರ ಮಾಡಿದೆ ಎಂದು ಅವರಿಗೆ ತಿಳಿಸಿದ್ದೇನೆ" ಎಂದರು.

ನಮ್ಮ ಸಂಸ್ಕೃತಿ, ಪರಂಪರೆಯ ಪ್ರತಿಬಿಂಬವಾಗಿರುವ ನಾಡಹಬ್ಬ ದಸರಾ ಮಹೋತ್ಸವಕ್ಕೆ ಮೈಸೂರಿಗೆ ಆಗಮಿಸಬೇಕು ಎಂದು ಸಿಎಂ ನೂತನ ರಾಜ್ಯಪಾಲರಿಗೆ ಆಹ್ವಾನಿಸಿದರು.

### ಥಾವರ್‌ಚಂದ್ ಗೆಹ್ಲೋತ್‌ಗೆ ಧನ್ಯವಾದ

ಗೆಹ್ಲೋತ್ ಅವರನ್ನು ಅನೇಕ ವಿಷಯಗಳ ಬಗ್ಗೆ ನಾವು ಸಾಕಷ್ಟು ತೊಂದರೆ ನೀಡಿದ್ದರೂ ಅವರು ಸರ್ಕಾರಕ್ಕೆ ಬೆಂಬಲ ನೀಡಿದ್ದಲ್ಲದೆ, ರಾಜ್ಯದ ಜನರ ಜೀವನ ಸುಧಾರಣೆ ಮಾಡುವ ನಿಟ್ಟಿನಲ್ಲಿ ಮಾರ್ಗದರ್ಶನವನ್ನು ಕೂಡ ಮಾಡಿದ್ದರು. ಕರ್ನಾಟಕ ಆರ್ಥಿಕ, ತಾಂತ್ರಿಕ, ಉತ್ತಮ ಆಡಳಿತ ಸೇರಿದಂತೆ ಎಲ್ಲಾ ವಲಯಗಳಲ್ಲಿಯೂ ದೇಶಕ್ಕೆ ಬಹುದೊಡ್ಡ ಶಕ್ತಿ ಮತ್ತು ಕೊಡುಗೆ ನೀಡುತ್ತಿದೆ" ಎಂದರು. ರಾಜ್ಯದ ಅಧಿಕಾರಿ ವರ್ಗವೂ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಆಡಳಿತ ವ್ಯವಸ್ಥೆ ನೀಡುವಲ್ಲಿ ಶ್ರಮಿಸುತ್ತಿದ್ದಾರೆ. ನಾವೆಲ್ಲರೂ ನಿಮ್ಮೊಂದಿಗೆ ಇದ್ದು, ನಿಮ್ಮ ಸಹಕಾರಕ್ಕೆ ಧನ್ಯವಾದಗಳು" ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

# ಕರ್ನಾಟಕದಲ್ಲೂ ಎಸ್‌ಐಆರ್ ವಿರುದ್ಧ ಹೋರಾಟ: ಬಿ.ಕೆ.ಹರಿಪ್ರಸಾದ್



**ಬೆಂಗಳೂರು, ಅ.16:** ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ಪ್ರತಿಯೊಬ್ಬ ನಾಗರಿಕನ ಮತದಾನದ ಹಕ್ಕಿನ ರಕ್ಷಣೆಗಾಗಿ 'ಮತ ಉಳಿಸಿ–ದೇಶ ಉಳಿಸಿ' ಘೋಷಣೆಯಡಿ ಕರ್ನಾಟಕದಲ್ಲಿ ಸಂಘಟಿತ ಹೋರಾಟ ರೂಪಿಸಲು ಇಂಡಿಯಾ ಮೈತ್ರಿಕೂಟದ ಮಿತ್ರಪಕ್ಷಗಳು ನಿರ್ಧರಿಸಿವೆ. ಈ ಸಂಬಂಧ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ನೇತೃತ್ವದಲ್ಲಿ ಶಾಸಕರ ಭವನದಲ್ಲಿ ಶುಕ್ರವಾರ ನಡೆದ ರಾಜ್ಯಮಟ್ಟದ ಸಭೆಯಲಿ ವಿಸ್ತೃತ ಚರ್ಚೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಬಿ.ಕೆ.ಹರಿಪ್ರಸಾದ್, ಮತದಾನದ ಹಕ್ಕು ಪ್ರಜಾಪ್ರಭುತ್ವದ ಅಡಿಪಾಯ. ಯಾವುದೇ ಕಾರಣಕ್ಕೂ ನೈಜ ಹಾಗೂ ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು. ದೇಶಾದ್ಯಂತ ಸುಮಾರು 13 ಕೋಟಿ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ, ಅರ್ಹ ಮತದಾರರ ಹೆಸರುಗಳನ್ನು ಮರುಸೇರ್ಪಡೆಗೊಳಿಸಬೇಕು. ಸಿಇಸಿ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು ಎಂಬುದು ಇಂಡಿಯಾ ಮೈತ್ರಿಕೂಟದ ಸ್ಪಷ್ಟ ನಿಲುವಾಗಿದೆ ಎಂದು ತಿಳಿಸಿದರು.

ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸಬೇಕಾದ ಚುನಾವಣಾ ಆಯೋಗವು ರಾಜಕೀಯ ಪಕ್ಷವೊಂದರ ಪರವಾಗಿ ನಡೆದುಕೊಳ್ಳುತ್ತಿದೆ. ಮತದಾರರ ಹಕ್ಕುಗಳನ್ನು ಕಸಿದುಕೊಳ್ಳುವ ಯಾವುದೇ ಪ್ರಯತ್ನದ ವಿರುದ್ಧ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಿ ಹೋರಾಡಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಎಐಸಿಸಿ ಕಾರ್ಯದರ್ಶಿ ಗೋಪಿನಾಥ್ ಪಳನಿಯಪ್ಪನ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್, ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, ಸಮಾಜವಾದಿ ಪಕ್ಷದ ರಾಜ್ಯಾಧ್ಯಕ್ಷ ಮಂಜಪ್ಪ ಯಾದವ್ ಸೇರಿದಂತೆ ಸಿಪಿಐ(ಎಂಎಲ್) ಲಿಬರೇಶನ್, ಫಾರ್ವರ್ಡ್ ಬ್ಲಾಕ್ ಹಾಗೂ ಇಂಡಿಯಾ ಮೈತ್ರಿಕೂಟದ ವಿವಿಧ ಮಿತ್ರಪಕ್ಷಗಳ ಮುಖಂಡರು ಮತ್ತು ಪ್ರತಿನಿಧಿಗಳು ಭಾಗವಹಿಸಿದ್ದರು.

### ಇಂಡಿಯಾ ಮೈತ್ರಿಕೂಟದ ಸಮನ್ವಯ ಸಮಿತಿ ರಚನೆಗೆ ತೀರ್ಮಾನ

ರಾಜ್ಯದಲ್ಲಿ ಇಂಡಿಯಾ ಮೈತ್ರಿಕೂಟದ ಹೋರಾಟವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಸಂಘಟಿಸಲು ಕಾಂಗ್ರೆಸ್, ಸಿಪಿಐ, ಸಿಪಿಐ(ಎಂ), ಸಿಪಿಐ(ಎಂಎಲ್) ಲಿಬರೇಶನ್, ಸಮಾಜವಾದಿ ಪಕ್ಷ ಹಾಗೂ ಫಾರ್ವರ್ಡ್ ಬ್ಲಾಕ್ ಸೇರಿ ಮಿತ್ರಪಕ್ಷಗಳ ಪ್ರತಿನಿಧಿಗಳನ್ನ ಒಳಗೊಂಡ ಸಮನ್ವಯ ಸಮಿತಿ ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಸಮಿತಿಯ ಮೂಲಕ ರಾಜ್ಯಾದ್ಯಂತ ಹೋರಾಟದ ರೂಪುರೇಷೆಗಳನ್ನು ಸಿದ್ಧಪಡಿಸಿ ಜನಾಂದೋಲನ ರೂಪಿಸಲು ನಿರ್ಧರಿಸಲಾಯಿತು. ನವೆಂಬರ್ 1ರಂದು ನವದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆಯಲಿರುವ ಬೃಹತ್ ಪ್ರತಿಭಟನೆಯಲ್ಲಿ ಕರ್ನಾಟಕದ ಇಂಡಿಯಾ ಮೈತ್ರಿಕೂಟದ ಎಲ್ಲ ಮಿತ್ರಪಕ್ಷಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇದರ ಮುಂದುವರೆದ ಭಾಗವಾಗಿ ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿ, ನಂತರ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿಯೂ ಹೋರಾಟವನ್ನು ವಿಸ್ತರಿಸಲಾಗುವುದು. ಬೆಂಗಳೂರಿನ ಪ್ರತಿಭಟನೆಗೆ ನವೆಂಬರ್ 5ರಂದು ದಿನಾಂಕ ನಿಗದಿಪಡಿಸಲಾಗಿದೆ ಎಂದು ಹರಿಪ್ರಸಾದ್ ತಿಳಿಸಿದರು.

# ಕಬ್ಬು ದರ ನಿಗದಿಗೆ ಸೋಮವಾರ ಕೇಂದ್ರ ಸಮಿತಿ ಮೊದಲ ಸಭೆ: ಪ್ರಲ್ಹಾದ ಜೋಶಿ



**ಗದಗ, ಅ.16:** ಕಬ್ಬಿನ ದರ ನಿಗದಿ ಬಗ್ಗೆ ಸೋಮವಾರ ಸಮಿತಿ ಮೊದಲ ಸಭೆ ನಡೆಯಲಿದೆ. ಕಬ್ಬು ಬೆಳೆಗಾರರು ಹೋರಾಟ ಬಿಟ್ಟು ನಿಮ್ಮ ಕೆಲಸಕ್ಕೆ ತೆರಳಬೇಕು. ಎಲ್ಲಾ ವಿಚಾರವನ್ನು ಕೇಂದ್ರ ಸರ್ಕಾರದ ಸಮಿತಿಯೇ ನೋಡಿಕೊಳ್ಳಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಮೋದಿ ಅಧಿಕಾರಕ್ಕೆ ಬಂದ ಮೇಲೆ ಬಹಳ ಪರಿವರ್ತನೆಯಾಗಿದೆ. ಸಕ್ಕರೆ ಕಾರ್ಖಾನೆಗೆ ಕಬ್ಬು ಪೂರೈಸಿ ಬಿಲ್‌ಗಾಗಿ ಹೋರಾಡುತ್ತಿದ್ದರು. ಎಥೆನಾಲ್ ಆರಂಭವಾದ ಮೇಲೆ ರೈತರಿಗೆ ನಿರಂತರವಾಗಿ ಪಾವತಿ ಮಾಡಲಾಗುತ್ತಿದೆ. ಕಾಂಗ್ರೆಸ್ ಅಧಿಕಾರ ನೀಡಿದಾಗ ಎಥೆನಾಲ್ ಮಿಶ್ರಣ 1.5% ಇತ್ತು. ದೇಶದಲ್ಲಿ 38 ಕೋಟಿ ಲೀಟರ್ ಎಥೆನಾಲ್ ಖರೀದಿ ಆಗುತ್ತಿತ್ತು, ಇವಾಗ 1200 ಕೋಟಿ ಲೀಟರ್ ಎಥೆನಾಲ್ ಖರೀದಿಸುತ್ತಿದ್ದೇವೆ. ಕಬ್ಬಿನಿಂದ ಉತ್ಪಾದನೆ ಆಗುತ್ತಿರುವ ಎಥೆನಾಲ್ ಖರೀದಿ ಮಾಡುತ್ತಿದ್ದೇವೆ. ಎಂದರು.

ಎಥೆನಾಲ್ ಖರೀದಿಯಲ್ಲಿ ರಾಜ್ಯ ಸರ್ಕಾರ ತಮ್ಮ ಜಿಎಸ್‌ಟಿ ತೆಗೆದುಕೊಳ್ಳುತ್ತಾರೆ. ಕಬ್ಬು ತೂಕದಲ್ಲಿ ಆಗುತ್ತಿರುವ ಮೋಸ ತಡೆಯುವ ಕೆಲಸ ಮಾಡುತ್ತಿಲ್ಲ. ಹರಿಯಾಣ, ಪಂಜಾಬ್, ಉತ್ತರ ಖಂಡ್‌ನಲ್ಲಿ ಎಸ್‌ಎಪಿ ಕೊಟ್ಟಿದ್ದಾರೆ. ಆದರೆ ಕರ್ನಾಟಕದಲ್ಲಿ ರಾಜ್ಯ ಸರ್ಕಾರ ಎಎಸ್‌ಪಿ ಕೊಟ್ಟಿಲ್ಲ. ಎಂಎಸ್‌ಪಿ ಕೊಡಬೇಕೆಂದು ಕಬ್ಬು ಬೆಳೆಗಾರರು ಒತ್ತಾಯಿಸುತ್ತಿದ್ದಾರೆ. ನಾವು ಈಗಾಗಲೇ ಸಮಿತಿ ರಚಿಸಿದ್ದೇವೆ ಸೋಮವಾರ ಸಭೆ ನಡೆಯಲಿದೆ. ತುರ್ತು ನಿರ್ಣಯ ಕೈಗೊಳ್ಳುತ್ತಾರೆ. ಉಳಿದ ಸಮಸ್ಯೆ ಬಗೆಹರಿಸಲು ಅಧಿಕಾರಿಗಳನ್ನ ನಿಯೋಜನೆ ಮಾಡಿದ್ದೇವೆ. ಕೇಂದ್ರ ಸರ್ಕಾರ ರೈತರ ಪರವಾಗಿದೆ ಎಂದರು.

# ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವಾ ಕ್ಷೇತ್ರದಲ್ಲಿ ವಿದೇಶಿ ಸಂಸ್ಥೆಗಳ ಸ್ಪರ್ಧೆಗೆ ರಿಲಯನ್ಸ್ ಸ್ವಾಗತ

**ಮುಂಬೈ, ಅ.16:** ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆಗಳ ಕ್ಷೇತ್ರದಲ್ಲಿ ಸ್ಟಾರ್‌ಲಿಂಕ್ ಸೇರಿ ವಿದೇಶಿ ಕಂಪನಿಗಳ ಸ್ಪರ್ಧೆಯನ್ನು ಸ್ವಾಗತಿಸುವುದಾಗಿ ರಿಲಯನ್ಸ್ ಇಂಡಸ್ಟ್ರೀಸ್ ತಿಳಿಸಿದೆ.

ಭಾರತದಲ್ಲಿ ಕಾರ್ಯನಿರ್ವಹಿಸುವ ದೇಶಿ ಮತ್ತು ವಿದೇಶಿ ಕಂಪನಿಗಳಿಗೆ ಸರ್ಕಾರ ಒಂದೇ ರೀತಿಯ ನಿಯಮಗಳನ್ನು ಅನ್ವಯಿಸುತ್ತಿದ್ದು, ಪ್ರತಿಯೊಂದು ಸಂಸ್ಥೆಯೂ ದೇಶದ ಕಾನೂನು ಹಾಗೂ ನೀತಿಗಳನ್ನು ಪಾಲಿಸಬೇಕು ಎಂದು ಕಂಪನಿ ಸ್ಪಷ್ಟಪಡಿಸಿದೆ.

ಎಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಭಾರತದಲ್ಲಿ ಸೇವೆ ಆರಂಭಿಸಲು ಎದುರಿಸುತ್ತಿರುವ ವಿಳಂಬದ ಕುರಿತು ವಿವಾದ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ರಿಲಯನ್ಸ್ ಈ ಹೇಳಿಕೆ ನೀಡಿದೆ. ರಿಲಯನ್ಸ್ ಮುಖ್ಯಸ್ಥ ಮುಖೇಶ್ ಅಂಬಾನಿ ಅವರ ಉದ್ಯಮ ಹಿತಾಸಕ್ತಿಗಳು ಸ್ಟಾರ್‌ಲಿಂಕ್ ಪ್ರವೇಶಕ್ಕೆ ಅಡ್ಡಿಯಾಗುತ್ತಿವೆ ಎಂಬ ಆರೋಪಗಳನ್ನು ಮಸ್ಕ್ ಈ ಹಿಂದೆ ಮಾಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ರಿಲಯನ್ಸ್, ತಾನು ಎಂದಿಗೂ ಸ್ಪರ್ಧೆಗೆ ಹೆದರಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ.

### ವಿದೇಶಿ, ದೇಶಿ ಕಂಪನಿಗಳಿಗೆ ಒಂದೇ ನಿಯಮ: ಜಿಯೋ ಸೇವೆಗಳಿಗೂ ಅನುಮತಿ ಬಾಕಿ



### 53 ಕೋಟಿಗೂ ಅಧಿಕ ಜಿಯೋ ಗ್ರಾಹಕರು



2016ರಲ್ಲಿ ಭಾರತೀಯ ದೂರಸಂಪರ್ಕ ಮಾರುಕಟ್ಟೆಗೆ ಪ್ರವೇಶಿಸಿದ ಜಿಯೋ, ಆರಂಭದಲ್ಲಿ ಒಬ್ಬ ಗ್ರಾಹಕರನ್ನೂ ಹೊಂದಿರಲಿಲ್ಲ. ಆದರೆ ಹತ್ತು ವರ್ಷಗಳಲ್ಲಿ 53 ಕೋಟಿಗೂ ಅಧಿಕ ಗ್ರಾಹಕರ ವಿಶ್ವಾಸ ಗಳಿಸಿದೆ ಎಂದು ರಿಲಯನ್ಸ್ ತನ್ನ ಹೇಳಿಕೆಯಲ್ಲಿ ಉಲ್ಲೇಖಿಸಿದೆ. ಕೈಗೆಟುಕುವ ದರದಲ್ಲಿ ಡೇಟಾ ಮತ್ತು ಉತ್ತಮ ಡಿಜಿಟಲ್ ಮೂಲಸೌಕರ್ಯ ಒದಗಿಸಿರುವುದಾಗಿಯೂ ಕಂಪನಿ ತಿಳಿಸಿದೆ.

**ಎಲ್ಲರಿಗೂ ಒಂದೇ ಅನುಮತಿ ಪ್ರಕ್ರಿಯೆ:** ಭಾರತವು ದೇಶೀಯ ಹಾಗೂ ವಿದೇಶಿ ಹೂಡಿಕೆ ಮತ್ತು ನಾವೀನ್ಯತೆಗೆ ಅವಕಾಶ ನೀಡುವ ಮಾರುಕಟ್ಟೆಯಾಗಿದೆ. ಆದರೆ ಈ ಮುಕ್ತ ಅವಕಾಶವು ಕಾನೂನಿನ ಆಧಾರದ ಮೇಲೆ ಇರಬೇಕು. ಭಾರತೀಯ ಕಂಪನಿಯಾಗಿರಲಿ ಅಥವಾ ವಿದೇಶಿ ಕಂಪನಿಯಾಗಿರಲಿ, ಎಲ್ಲ ಅರ್ಜಿದಾರರಿಗೂ ಸರ್ಕಾರ ಒಂದೇ ರೀತಿ ಪ್ರಕ್ರಿಯೆಯನ್ನು ಅನುಸರಿಸುತ್ತದೆ ಎಂದು ರಿಲಯನ್ಸ್ ತಿಳಿಸಿದೆ. ತನ್ನದೇ ಆದ ಜಿಯೋ ಉಪಗ್ರಹ ಇಂಟರ್‌ನೆಟ್ ಸೇವೆಗಳಿಗೂ ಅಗತ್ಯ ಅನುಮತಿ ಇನ್ನೂ ಬಾಕಿ ಇವೆ ಎಂದು ಕಂಪನಿ ಹೇಳಿದೆ. ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವಲ್ಲಿ ಸ್ಪರ್ಧೆಯೇ ನಿಜವಾದ ಪರೀಕ್ಷೆ ಎಂಬುದು ರಿಲಯನ್ಸ್‌ನ ಅಭಿಪ್ರಾಯವಾಗಿದೆ.

### ಸ್ಟಾರ್‌ಲಿಂಕ್‌ಗೆ ಇನ್ನೂ ಭದ್ರತಾ ಅನುಮತಿ ಅಗತ್ಯ




ಭಾರತದಲ್ಲಿ ಉಪಗ್ರಹ ಸಂವಹನ ಸೇವೆ ಒದಗಿಸಲು ಸ್ಟಾರ್‌ಲಿಂಕ್ ಪರವಾನಗಿ ಪಡೆದಿದ್ದರೂ, ವಾಣಿಜ್ಯ ಸೇವೆ ಆರಂಭಿಸಲು ಅಗತ್ಯವಿರುವ ಭದ್ರತಾ ಅನುಮತಿಗಳು ಸೇರಿದಂತೆ ಇತರ ಪ್ರಕ್ರಿಯೆಗಳು ಪೂರ್ಣಗೊಳ್ಳಬೇಕಿದೆ. ಜಿಯೋ ಉಪಗ್ರಹ ಸಂವಹನ ಸೇವೆಗಳು ಮತ್ತು ಭಾರ್ತಿ ಸಮೂಹದ ಬೆಂಬಲ ಹೊಂದಿರುವ ಒನ್‌ವೆಬ್ ಕೂಡ ಅಗತ್ಯ ಅನುಮತಿಗಳಿಗಾಗಿ ಕಾಯುತ್ತಿವೆ. ಉಪಗ್ರಹ ಇಂಟರ್‌ನೆಟ್ ಸೇವೆಗಳು ಆರಂಭವಾದರೆ ಸಾಂಪ್ರದಾಯಿಕ ಬ್ರಾಡ್‌ಬ್ಯಾಂಡ್ ಸಂಪರ್ಕ ತಲುಪಲು ಕಷ್ಟವಾಗಿರುವ ಗ್ರಾಮೀಣ ಹಾಗೂ ದೂರದ ಪ್ರದೇಶಗಳಿಗೆ ಇಂಟರ್‌ನೆಟ್ ಸೌಲಭ್ಯ ವಿಸ್ತರಿಸಲು ನೆರವಾಗಬಹುದು. ಆದರೆ ಸೇವೆಗಳ ವಾಣಿಜ್ಯ ಆರಂಭವು ಅಗತ್ಯ ಸರ್ಕಾರಿ ಅನುಮತಿಗಳು ಮತ್ತು ನಿಯಂತ್ರಣ ಪ್ರಕ್ರಿಯೆಗಳ ಪೂರ್ಣಗೊಳಿಸುವಿಕೆಯನ್ನು ಅವಲಂಬಿಸಿದೆ.

## ನಿತ್ಯ ಪಂಚಾಂಗ 17.10.2026 ಶನಿವಾರ



**ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ**

**ಆಶ್ವಯುಜ ಶುದ್ಧ, ಸಪ್ತಮಿ, ಮೂಲ ನಕ್ಷತ್ರ, ಕಶ್ಯಪ ಜಯಂತಿ, ಕಾಳರಾತ್ರಿ, ಮಹಿಷಾಸುರ ಸಂಹಾರ, ತ್ರಿರಾತ್ರಾರಂಭ, ಕಾನಂಗಿ ಶ್ರೀನಿವಾಸ ರಥ, ಮುಜಂಗಾವು ತೀರ್ಥ**

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಸ್ಟಿಂಗ್ ಆಪರೇಷನ್ ಹಿಂದಿರುವ ಕೆಲವರ ಹೆಸರು, ಫೋಟೋ ಬಹಿರಂಗಪಡಿಸಿದ ಎಚ್‌ಡಿಕೆ



**ಬೆಂಗಳೂರು, ಅ.16:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವೈರಲ್ ಆಗಿದ್ದ ಸ್ಟಿಂಗ್ ಆಪರೇಷನ್ ಹಿಂದೆ ಇರುವವರು ಎನ್ನಲಾದ ಕೆಲವು ಹೆಸರುಗಳು ಮತ್ತು ಫೋಟೋ ಗಳನ್ನು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರ ಸ್ವಾಮಿ ಬಹಿರಂಗ ಪಡಿಸಿದ್ದಾರೆ.

ಈ ನಡುವೆ ತಮ್ಮ ಸಾರ್ವಜನಿಕ ಗೌರವಕ್ಕೆ ಧಕ್ಕೆ ತರುವ ಉದ್ದೇಶದಿಂದ ಈ ಕೃತ್ಯ ಎಸಗಲಾಗಿದೆ. ಈ ವಿಡಿಯೋ ಸೃಷ್ಟಿಸಿದವರು ಮತ್ತು ಪ್ರಸಾರ ಮಾಡಿದವರನ್ನು ಪತ್ತೆಹಚ್ಚುವಂತೆ ಸಿದ್ದರಾಮಯ್ಯ ಅವರು ಅ.6ರಂದು ದೂರು ನೀಡಿದ್ದು, ಸಿಸಿಬಿ ತನಿಖೆ ಚುರುಕುಗೊಳಿಸಿದೆ. ಈಗಾಗಲೇ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದ್ದು, ವಿಡಿಯೋವನ್ನು ಯಾರು ಸೃಷ್ಟಿಸಿದರು, ಯಾರು ಪ್ರಸಾರ ಮಾಡಿದರು ಮತ್ತು ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆಹಚ್ಚಲು ಸಿಸಿಬಿ ಅಧಿಕಾರಿಗಳು ಮುಂದಾಗಿದ್ದಾರೆ.

**ಮುಕ್ತ, ಪಾರದರ್ಶಕ ತನಿಖೆ: ಪ್ರಿಯಾಂಕ್ ಖರ್ಗೆ**

ಇನ್ನು ಪ್ರಕರಣದ ಬಗ್ಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಕೂಡ ಪ್ರತಿಕ್ರಿಯಿಸಿದ್ದು, ತನಿಖೆ ಮುಕ್ತವಾಗಿ ಮತ್ತು ಪಾರದರ್ಶಕವಾಗಿ ನಡೆಯಲಿದೆ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಸಿದ್ದರಾಮಯ್ಯ ಅವರ ಘನತೆ ಮತ್ತು ಗೌರವಕ್ಕಿಂತ ದೊಡ್ಡದು ಯಾವುದೂ ಇಲ್ಲ. ವೀಡಿಯೋ ಸುಳ್ಳು ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದು, ಇದರ ಹಿಂದೆ ಇರುವವರನ್ನು ಪತ್ತೆಹಚ್ಚುವಂತೆ ಹೇಳಿದ್ದಾರೆ. ಅದರಂತೆ ತನಿಖೆ ನಡೆಸುತ್ತಿದ್ದೇವೆ. ಅಗತ್ಯ ಬಿದ್ದರೆ ಪ್ರಕರಣವನ್ನು ಬೇರೆ ತನಿಖಾ ಸಂಸ್ಥೆಗೆ ವಹಿಸುವ ಬಗ್ಗೆಯೂ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

# ಸ್ಟಿಂಗ್ ಆಪರೇಷನ್: ವೀಡಿಯೋ ಮಾಡಿದವರು, ಹಂಚಿದವರ ವಿರುದ್ಧ ಪ್ರಕರಣ ದಾಖಲಿಸಿ

## ಸಿಎಂ ಡಿ.ಕೆ.ಶಿವಕುಮಾರ್‌ಗೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಒತ್ತಾಯ



**ರಾಮನಗರ, ಅ.16:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸ್ಟಿಂಗ್ ಆಪರೇಷನ್‌ನ ಹುಳು ಬಿಟ್ಟು ಸುಮ್ಮನಾದರೆ ಹೇಗೆ? ವಿಡಿಯೊ ಹಂಚಿದವರ ಬದಲು ವಿಡಿಯೊ ಮಾಡಿದವರ ಹಾಗೂ ಮಾಡಿಸಿದವರ ವಿರುದ್ಧ ಪ್ರಕರಣ ದಾಖಲಿಸಬೇಕು. ಇದರ ಹಿಂದಿರುವವರ ಹೆಸರು ಹೊರಬಂದರೆ ದೊಡ್ಡ ಕೋಲಾಹಲವಾಗುತ್ತದೆ. ಆಗ, ತಮ್ಮ ಬುಡಕ್ಕೆ ಬರುತ್ತದೆ ಎಂದು ಮುಖ್ಯಮಂತ್ರಿ ಜಾರಿಕೊಳ್ಳುತ್ತಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಭಾರಿ ಚರ್ಚೆಗೆ ಕಾರಣವಾಗಿರುವ ಸ್ಟಿಂಗ್ ಆಪರೇಷನ್ ಕುರಿತು ನಗರದಲ್ಲಿ ಶುಕ್ರವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ರಾಜಕೀಯ ವ್ಯಭಿಚಾರವಾಗಿರುವ ಸ್ಟಿಂಗ್ ಆಪರೇಷನ್ ವಿರುದ್ಧ ಸರ್ಕಾರ ಸೂಕ್ತ ತನಿಖೆ ನಡೆಸಬೇಕು. ಇದರಲ್ಲಿ ಯಾವುದೇ ಪಕ್ಷದವರಿದ್ದರೂ ಕ್ರಮ ಕೈಗೊಳ್ಳಬೇಕು. ಈ ಕೃತ್ಯಕ್ಕಾಗಿ ಸುಮಾರು 15 ಕೋಟಿ ಕಪ್ಪು ಹಣದ ವಹಿವಾಟು ನಡೆದಿದೆ. ಆ ಹಣ ಎಲ್ಲಿಂದ ಬಂತು ಎಂಬುದು ಗೊತ್ತಾಗಬೇಕು ಎಂದು ಒತ್ತಾಯಿಸಿದರು.

ಸಚಿವ ಸಂಪುಟ ಸಭೆಯಲ್ಲೇ ಈ ವಿಷಯ ಪ್ರಸ್ತಾಪಿಸಿ ಮುಖ್ಯಮಂತ್ರಿ ತಮ್ಮ ಮೌನ ಮುರಿಯಬೇಕು. ಹೇಗಿದ್ದರೂ ಇಂಟೆಲಿಜೆನ್ಸ್ ಅವರ ಬಳಿಯೇ ಇರುವುದರಿಂದ ಸೂಕ್ತ ತನಿಖೆ ಮಾಡಿಸಬೇಕು. ಆಗ ಇದರ ಹಿಂದೆ ಮಹಾ ನಾಯಕನಿದ್ದಾನೊ ಅಥವಾ ಚೋಟಾ ನಾಯಕನಿದ್ದಾನೊ ಎಂಬುದು ಗೊತ್ತಾಗಲಿದೆ ಎಂದು ಹೇಳಿದರು.

ರಾಜಕೀಯದ ಸಂಧ್ಯಾಕಾಲದಲ್ಲಿರುವ ಸಿದ್ದರಾಮಯ್ಯ ಅವರಿಗೆ ಈ ರೀತಿ ಆಗಿರುವುದು ಬಹಳ ನೋವಿನ ಸಂಗತಿ. ರಾಜಕೀಯವಾಗಿ ಏನೇ ದ್ವೇಷವಿದ್ದರೂ ಅದನ್ನು ರಾಜಕೀಯವಾಗಿಯೇ ಎದುರಿಸಬೇಕು. ಆದರೆ, ರೀತಿ ಮಾಡುವುದು ಸರಿಯಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

# ಬೈರಿ ವೆಂಕಟೇಶರಿಗೆ ಎಸ್‌ಸಿ/ಎಸ್‌ಟಿ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ಮನವಿ



**ನವದೆಹಲಿ, ಅ.16:** ತೆಲಂಗಾಣ ರಾಜ್ಯದ ಎಸ್‌ಸಿ/ಎಸ್‌ಟಿ ಕಮಿಷನ್ ಅಧ್ಯಕ್ಷರನ್ನಾಗಿ ತಮ್ಮನ್ನು ನೇಮಕ ಮಾಡುವಂತೆ, ಅತಿ ಹಿಂದುಳಿದ 57 ಉಪಕುಲಾಲ ಪೋರಾಟ ಸಮಿತಿ ಮತ್ತು ಹೋರಾಟಗಾರರಾದ ಪರಿಶಿಷ್ಟ ಜಾತಿ ಪಂಗಡದ ಹಕ್ಕುಗಳ ವೇದಿಕೆಯ ರಾಷ್ಟ್ರೀಯ ಅಧ್ಯಕ್ಷ ಬೈರಿ ವೆಂಕಟೇಶಮ್ ಅವರು ರಾಜ್ಯ ಸಭಾ ವಿರೋಧ ಪಕ್ಷದ ನಾಯಕರೂ ಅದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಲ್ಲಿ ಮನವಿ ಮಾಡಿದ್ದಾರೆ. ಬೈರಿ ವೆಂಕಟೇಶಮ್ ಅವರು ನವದೆಹಲಿಯಲ್ಲಿ ಖರ್ಗೆ ಅವರನ್ನು ಭೇಟಿಯಗಿ ಈ ಸಂಬಂಧ ಮನವಿ ಸಲ್ಲಿಸಿದ ಅವರು, ದಶಕಗಳಿಂದ ಅತಿ ಹಿಂದುಳಿದ ಎಸ್‌ಸಿ ಜನಾಂಗದ ಹಕ್ಕುಗಳಿಗಾಗಿ ಹೋರಾಟಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದು, ಕಟ್ಟಾ ಕಾಂಗ್ರೆಸ್ ಅನುಯಾಯಿಯಾಗಿ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಅಭಿಮಾನಿಯೂ ಆಗಿದ್ದು, ಪರಿಶಿಷ್ಟ ಜಾತಿ ಮೋಚಿ ಸಮುದಾಯದ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷನಾಗಿಯೂ ಕೆಲಸ ಮಾಡುತ್ತಾ ಬಂದಿದ್ದೇನೆ. ಆದ್ದರಿಂದ ತಮಗೆ ಪರಿಶಿಷ್ಟ ಜಾತಿ ಸಮುದಾಯದವರ ಮತ್ತು ಕಾಂಗ್ರೆಸ್ ಪಕ್ಷದ ಸೇವೆ ಮಾಡಲು ತೆಲಂಗಾಣ ರಾಜ್ಯದ ಎಸ್‌ಸಿ/ಎಸ್‌ಟಿ ಕಮಿಷನ್ ಅಧ್ಯಕ್ಷನನ್ನಾಗಿ ಮಾಡಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.




ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಶುಕ್ರವಾರ ಕಾರವಾರದಲ್ಲಿ ಭಾರತೀಯ ನೌಕಾಪಡೆಯ ಮೊದಲ ಸ್ವದೇಶಿ ಬಹು-ಉದ್ದೇಶದ ನೌಕೆ ಐಎನ್‌ಎಸ್ ಸಮರ್ಥಕ್ ಅನ್ನು ಲೋಕಾರ್ಪಣೆ ಮಾಡಿದರು.




ಗದಗ್‌ನ ವಿಠಲಾರೂಢ ಸಮುದಾಯ ಭವನದಲ್ಲಿ ಶುಕ್ರವಾರ ಭಾರತೀಯ ಜನತಾ ಪಕ್ಷದ ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯ ಪದಾಧಿಕಾರಿಗಳು, ಘಟನಾಯಕರು ಹಾಗೂ ಮುಖಂಡರ ಸಭೆಯಲ್ಲಿ ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಸಕರಾದ ಸಿ.ಸಿ ಪಾಟೀಲ್, ಮಹೇಶ ಟೆಂಗಿನಕಾಯಿ, ಅಭ್ಯರ್ಥಿ ಎಸ್.ವಿ ಸಂಕನೂರ, ಬಿಜೆಪಿಯ ಜಿಲ್ಲಾಧ್ಯಕ್ಷ ರಾಜು ಕುರಡಗಿ, ಮುಖಂಡರಾದ ಅನಿಲ ಮೆಣಸಿನಕಾಯಿ, ಜಯತೀರ್ಥ ಕಟ್ಟಿ, ಗೋವಿಂದಗೌಡ್ರ, ಮೋಹನ ಮಾಳಶೆಟ್ಟಿ ರವಿ ಗುಂಜಿಕರ, ನಾಗರಾಜ ಕುಲಕರ್ಣಿ ಮತ್ತಿತರರು ಹಾಜರಿದ್ದರು.

# ಸಂಕನೂರ ಪರ ಬಿಜೆಪಿ ಮತಯಾಚನೆ




ಗದಗ ಜಿಲ್ಲೆಯ ಮುಂಡರಗಿಯ ಅನ್ನದಾನೇಶ್ವರ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಭಾರತೀಯ ಜನತಾ ಪಕ್ಷದ ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದ ಅಭ್ಯರ್ಥಿ ಎಸ್.ವಿ.ಸಂಕನೂರ ಅವರ ಪರ ಮತಯಾಚನೆಯನ್ನು ಹಾವೇರಿ-ಗದಗ ಲೋಕಸಭಾ ಕ್ಷೇತ್ರ ಸದಸ್ಯ ಬಸವರಾಜ ಬೊಮ್ಮಾಯಿ ಮಾಡಿದರು. ಮಾಜಿ ಸಚಿವ ಕಳಕಪ್ಪ ಬಂಡಿ, ಶಾಸಕ ಡಾ.ಚಂದ್ರು ಲಮಾಣಿ, ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರಡಗಿ, ಡಂಬಳ ಮಂಡಳದ ಅಧ್ಯಕ್ಷ ಅಂದಪ್ಪ ಹಾರೋಗೇರಿ, ರೋಣ ಮಂಡಳದ ಅಧ್ಯಕ್ಷ ಉಮೇಶ ಮಲ್ಲಾಪುರ, ಮುಖಂಡರಾದ ಕರಬಸಪ್ಪ ಹಂಚಿನಾಳ, ಶಿವಕುಮಾರಗೌಡ ಪಾಟೀಲ, ಜಯತೀರ್ಥ ಕಟ್ಟಿ, ಎಂ.ಎಸ್.ಕರಿಗೌಡ್ರ, ಹೇಮಗಿರೀಶ ಹಾವಿನಾಳ, ಆನಂದಗೌಡ ಪಾಟೀಲ, ರವಿ ಉಪ್ಪಿನ ಬೇಟಗೇರಿ, ಫಕ್ಕಿರೇಶ ರಟ್ಟಿಹಳ್ಳಿ ಸೇರಿದಂತೆ ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

# ಜಿ.ಕೆ.ವಿ.ಕೆ.ಯಲ್ಲಿ ವಿಜೃಂಭಣೆಯ ವಿಶ್ವ ಆಹಾರ ದಿನಾಚರಣೆ

## ಸುಸ್ಥಿರ ಆಹಾರ ಭದ್ರತೆ, ವೈವಿಧ್ಯಮಯ ಪೌಷ್ಟಿಕ ಆಹಾರ ಸೇವನೆಗೆ ಕರೆ

ಬೆಂಗಳೂರು, ಅ.16: ಆಹಾರವು ಪ್ರತಿಯೊಬ್ಬ ಮನುಷ್ಯನ ಮೂಲಭೂತ ಅವಶ್ಯಕತೆಯಾಗಿದ್ದು, ಆಹಾರ ಉತ್ಪಾದನೆ, ಆಹಾರ ಭದ್ರತೆ ಮತ್ತು ಪೌಷ್ಟಿಕತೆಯ ಮಹತ್ವವನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ. ಉತ್ಪಾದಿಸಿದ ಆಹಾರವನ್ನು ಸಮರ್ಪಕವಾಗಿ ಸಂರಕ್ಷಿಸುವುದು ಮತ್ತು ಆಹಾರ ವ್ಯರ್ಥವನ್ನು ತಡೆಗಟ್ಟುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ವಿ.ಸುರೇಶ್ ಅವರು ತಿಳಿಸಿದರು.

ಕೃಷಿ ವಿಶ್ವವಿದ್ಯಾನಿಲಯ ವತಿಯಿಂದ ಬೆಂಗಳೂರಿನ ಜಿ.ಕೆ.ವಿ.ಕೆ. ಆವರಣದಲ್ಲಿ ಆಯೋಜಿಸಲಾದ ವಿಶ್ವ ಆಹಾರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಿರಿಧಾನ್ಯಗಳು, ಬೇಳೆಕಾಳುಗಳು, ಹಣ್ಣುಗಳು ಮತ್ತು ತರಕಾರಿಗಳು ಪೌಷ್ಟಿಕ ಆಹಾರದ ಪ್ರಮುಖ ಮೂಲಗಳಾಗಿದ್ದು, ಅವುಗಳ ಬಳಕೆಯನ್ನು ಹೆಚ್ಚಿಸಬೇಕು. ಅಕ್ಕಿ ಮತ್ತು ಗೋದಿಯ ಮೇಲಿನ ಹೆಚ್ಚಿನ ಅವಲಂಬನೆ ಕಡಿಮೆ ಮಾಡಿ, ಸಿರಿಧಾನ್ಯಗಳು ಹಾಗೂ ಬೇಳೆಕಾಳುಗಳ ಮೌಲ್ಯವರ್ಧನೆಯ ಮೂಲಕ ರೈತರಿಗೆ ಹೆಚ್ಚಿನ ಆದಾಯ ಒದಗಿಸುವುದರ ಜೊತೆಗೆ ಕೃಷಿ ಆಧಾರಿತ ಉದ್ಯೋಗಾವಕಾಶಗಳನ್ನು ಸೃಷ್ಟಿಸಬಹುದು" ಎಂದು ತಿಳಿಸಿದರು.




ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕ ಡಾ: ಅನುರಾ ವಿ. ಕೃಪಾದ್ ಮಾತನಾಡಿ, "ಜಾಗತಿಕ ಆಹಾರ ವ್ಯವಸ್ಥೆಯಲ್ಲಿನ ಸವಾಲುಗಳು ಹಾಗೂ ಸಾಂಪ್ರದಾಯಿಕ ಆಹಾರ ಪದ್ಧತಿಗಳ ಮಹತ್ವದ ಬಗ್ಗೆ ಬೆಳಕು ಚೆಲ್ಲಿದರು.

ಸಿರಿಧಾನ್ಯಗಳು ನಾರು, ಕಬ್ಬಿಣ, ಕ್ಯಾಲ್ಸಿಯಂ ಮತ್ತು ವಿವಿಧ ಖನಿಜಾಂಶಗಳ ಉತ್ತಮ ಮೂಲವಾಗಿದ್ದರೆ, ಬೇಳೆಕಾಳುಗಳು ಪ್ರೋಟೀನ್‌ಗಳ ಪ್ರಮುಖ ಮೂಲವಾಗಿವೆ. ಸಾಂಪ್ರದಾಯಿಕ ಆಹಾರ ಜ್ಞಾನವನ್ನು ಆಧುನಿಕ ಕೃಷಿ ವಿಜ್ಞಾನ ಮತ್ತು ಆಹಾರ ಸಂಸ್ಕರಣಾ ತಂತ್ರಜ್ಞಾನದೊಂದಿಗೆ ಸಂಯೋಜಿಸುವುದರಿಂದ ಉತ್ತಮ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ" ಎಂದು ತಿಳಿಸಿದರು.

**ಆಹಾರ ಪ್ರದರ್ಶನ ಮತ್ತು 'ದೀಕ್ಷಾರಂಭ':**

ವಿಶ್ವ ಆಹಾರ ದಿನಾಚರಣೆಯ ಅಂಗವಾಗಿ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ 'ದೀಕ್ಷಾರಂಭ' ಕಾರ್ಯಕ್ರಮ ಚಾಲನೆ ಪಡೆಯಿತು. ಜೊತೆಗೆ 'ಆಹಾರ ಪ್ರದರ್ಶನ'ವು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು. ಕೃಷಿ ವಿಶ್ವವಿದ್ಯಾನಿಲಯದಿಂದ ತರಬೇತಿ ಪಡೆದ ಉದ್ಯಮಿಗಳು ಹಾಗೂ ಫಲಾನುಭವಿಗಳು ವಿವಿಧ ಆಹಾರ ಮಳಿಗೆಗಳನ್ನು ಸ್ಥಾಪಿಸಿ, ಸಂಸ್ಕರಿಸಿದ ಹಾಗೂ ಮೌಲ್ಯವರ್ಧಿತ ಆಹಾರ ಉತ್ಪನ್ನಗಳನ್ನು ಪ್ರದರ್ಶಿಸಿ ಉದ್ಯಮಶೀಲತೆಯ ಅರಿವು ಮೂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿಕ್ಷಣ ನಿರ್ದೇಶಕ ಡಾ.ಪಿ.ವೆಂಕಟರವಣ ವಹಿಸಿದ್ದರು. ಕೃ.ವಿ.ವಿ. ವ್ಯವಸ್ಥಾಪನಾ ಮಂಡಳಿಯ ಸದಸ್ಯ ಡಾ: ಕೆ.ಎಸ್. ರಾಜಶೇಖರಪ್ಪ, ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್.ಎಲ್. ಹರೀಶ್, ಕಾರ್ಯಕ್ರಮದ ಸಂಯೋಜಕ ಡೀನ್ (ಕೃಷಿ) ಡಾ: ವೈ.ಎನ್. ಶಿವಲಿಂಗಯ್ಯ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

# ದೇಶದ್ರೋಹಿಗಳ ಜೊತೆ ಸೇರುವಷ್ಟು ಅಸಹಾಯಕರಾದರೇ ರಾಹುಲ್‌ಗಾಂಧಿ

## ಜನತೆ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದ್ದಾರೆ, ಆತ್ಮಾವಲೋಕನ ಮಾಡಿಕೊಳ್ಳುವುದು ಒಳ್ಳೆಯದು: ಬಿ.ವೈ. ವಿಜಯೇಂದ್ರ ತಾಕೀತು



ಬೆಂಗಳೂರು, ಅ.16: ನೇಹಾ ಬೋರಾಗೆ ಬಾಂಗ್ಲಾದೇಶ, ನೇಪಾಳ, ಫ್ರಾನ್ಸ್ ಗೊಂದಲವೇ ಮಾದರಿ. ರಾಹುಲ್ ಗಾಂಧಿಯವರು ಇಂಥ ದೇಶದ್ರೋಹಿಗಳ ಜೊತೆ ಸೇರಿ ಇಷ್ಟೊಂದು ಅಸಹಾಯಕರಾದುದು ಏಕೆ ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದ್ದಾರೆ.

ನಗರದಲ್ಲಿ ಶುಕ್ರವಾರ ಕಾರ್ಯಕ್ರಮವೊಂದರಲ್ಲಿ ಮಾಧ್ಯಮದವರಿಗೆ ಪ್ರತಿಕ್ರಯಿಸಿ, ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಸಾಧ್ಯವಿಲ್ಲ. ದೇಶದ ಜನರು ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದ್ದಾರೆ. ಕಾಂಗ್ರೆಸ್ ಪಕ್ಷ ದೇಶದ ಜನರಿಂದ ದೂರವಾದುದೇಕೆ ಎಂದು ಆತ್ಮಾವಲೋಕನ ಮಾಡಿಕೊಳ್ಳುವುದು ಒಳ್ಳೆಯದು ಎಂದು ಕಿವಿಮಾತು ಹೇಳಿದರು.

ಕಾಕ್ರೋಚ್ ಪಕ್ಷ ಮತ್ತು ಕಾಂಗ್ರೆಸ್ ಪಕ್ಷ ಎರಡೂ ಒಂದೇ ಎಂಬ ವಿಚಾರದಲ್ಲಿ ಯಾರಿಗೂ ಅನುಮಾನ ಉಳಿದಿಲ್ಲ. ರಾಹುಲ್ ಗಾಂಧಿಯವರು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲಾಗದೇ, ಮೋದಿಜೀ ಅವರ ಜನಪ್ರಿಯತೆಯಿಂದ ಹತಾಶರಾಗಿದ್ದಾರೆ. ಪ್ರಧಾನಿಯಾಗುವ ಕನಸು ಕಾಣುತ್ತಿದ್ದ ರಾಹುಲ್ ಗಾಂಧಿಯವರು ತಮ್ಮ ಕನಸು ಈಡೇರಿಸಿಕೊಳ್ಳಲು ಈಗ ಬೇರೆ ಸಂಘಟನೆಗಳೊಂದಿಗೆ ಪ್ರತಿಭಟನೆಗೆ ಇಳಿದಿದ್ದಾರೆ. ಕಾಂಗ್ರೆಸ್ ಪಕ್ಷ, ರಾಹುಲ್ ಗಾಂಧಿಯವರಿಗೆ ಇವಿಎಂ ಬಗ್ಗೆ, ಚುನಾವಣಾ ಆಯೋಗ, ಸುಪ್ರೀಂ ಕೋರ್ಟ್ ಬಗ್ಗೆ ವಿಶ್ವಾಸ ಇಲ್ಲ ಎಂದು ವಿಜಯೇಂದ್ರ ಕಿಡಿ ಕಾರಿದರು.

ಎಡಪಕ್ಷದ ಸಂಘಟನೆಗಳ ಜೊತೆ ಸೇರಿ ಇವರು ದಂಗೆ ಏಳಿಸುವ ಷಡ್ಯಂತ್ರ ಮಾಡುತ್ತಿದ್ದಾರೆ. ಮೋದಿಜೀ ಅವರು ದೇಶದ ಅಭಿವೃದ್ಧಿ ಮಾಡುತ್ತಿದ್ದಾರೆ. ಇವರದು ಅರಾಜಕತೆಯ ಪ್ರಯತ್ನ ಎಂದು ಟೀಕಿಸಿದರು.

ದಕ್ಷ ಅಧಿಕಾರಿಗಳನ್ನು ದೂರವಿಡಲು ಷಡ್ಯಂತ್ರ

ಕೆಪಿಎಸ್‌ಸಿ ಹಗರಣದ ತನಿಖಾಧಿಕಾರಿ ಅಲೋಕ್ ಕುಮಾರ್ ಅವರನ್ನು ದೂರ ಇಟ್ಟ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಹಿಂದೆ ಸಿದ್ದರಾಮಯ್ಯ ಅವರು ಲೋಕಾಯುಕ್ತವನ್ನು ಮುಚ್ಚಿಹಾಕಿದ್ದರು. ಎಸಿಬಿಯನ್ನು ರಚಿಸಿ ಆಯಕಟ್ಟಿನ ಸ್ಥಳಗಳಲ್ಲಿ ಅವರಿಗೆ ಬೇಕಾದ ಅಧಿಕಾರಿಗಳನ್ನು ನೇಮಿಸಿ ಕ್ಲೀನ್‌ಚಿಟ್ ಪಡೆದುದನ್ನು ನೋಡಿದ್ದೇವೆ. ಈಗಲೂ ಅದೇ ಪ್ರಯತ್ನ ನಡೆಯುತ್ತಿದೆ. ರಾಜ್ಯ ಹೈಕೋರ್ಟ್ ಕೆಲವು ಪ್ರಾಮಾಣಿಕ ಅಧಿಕಾರಿಗಳನ್ನು ನೇಮಿಸಿ ಎಸ್‌ಐಟಿ ರಚಿಸಿತ್ತು. ಆದರೆ, ಕಾಂಗ್ರೆಸ್ ಸರಕಾರ, ಪ್ರಿಯಾಂಕ್ ಖರ್ಗೆಯವರಿಗೆ ಆತಂಕವೇಕೆ ಎಂದು ವಿಜಯೇಂದ್ರ ಪ್ರಶ್ನಿಸಿದರು.

ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಿ ಅಲೋಕ್ ಕುಮಾರ್, ಇತರ ಪ್ರಾಮಾಣಿಕ ಅಧಿಕಾರಿಗಳನ್ನು ಕೈಬಿಡುವ ಷಡ್ಯಂತ್ರ ಮಾಡುತ್ತಿದ್ದಾರೆ. ಕೆಪಿಎಸ್‌ಸಿ ಹಗರಣದಲ್ಲಿ ಪ್ರಿಯಾಂಕ್ ಖರ್ಗೆ ಪಾತ್ರದ ಚರ್ಚೆ ಆಗುತ್ತಿತ್ತು. ಅದಕ್ಕೆ ಪುಷ್ಟಿ ಕೊಡುವ ಕೆಲಸವನ್ನು ಕಾಂಗ್ರೆಸ್ ಸರಕಾರವೇ ಮಾಡುತ್ತಿದೆ ಎಂದು ಟೀಕಿಸಿದರು. ಪ್ರಿಯಾಂಕ್ ಖರ್ಗೆಯವರು ಬಿಜೆಪಿ ಕಡೆ ಬೆಟ್ಟು ಮಾಡಿ ಆರೋಪ ಮಾಡುತ್ತಿದ್ದರು. ನಿಮಗೆ ನಿಜವಾದಲೂ ಪ್ರಾಮಾಣಿಕತೆ ಇದ್ದರೆ ಕೆಪಿಎಸ್ಸಿಯ ಹಗರಣದ ತನಿಖೆಯ ಇಚ್ಛಾಶಕ್ತಿ ಇದ್ದರೆ ಹೈಕೋರ್ಟ್ ಯಾವ ಅಧಿಕಾರಿಗಳನ್ನು ನೇಮಿಸಿದೆಯೋ ಅದೇ ಅಧಿಕಾರಿಗಳಿಂದ ತನಿಖೆ ಮಾಡಿಸಿ ಎಂದು ಆಗ್ರಹಿಸಿದರು. ಹಗರಣವನ್ನು ಮುಚ್ಚಿ ಹಾಕುವ ಷಡ್ಯಂತ್ರ ನಡೆದಿದೆ ಎಂದು ಆಕ್ಷೇಪಿಸಿದರು.

# ಯುವನಾಯಕರು ಹೊರಹೊಮ್ಮಲು ಯುವಸಂಸತ್ ಉತ್ತಮ ವೇದಿಕೆ

## ಸಂಸತ್ತು ದೇಶದ ಭವ್ಯ ಭವಿಷ್ಯ ನಿರ್ಧರಿಸುವ ಶಕ್ತಿ ಕೇಂದ್ರ: ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಹಾಗೂ ಶಾಸಕ ದಿನೇಶ್ ಗೂಳಿಗೌಡ ಅಭಿಪ್ರಾಯ

**28ನೇ ಪ್ರಾದೇಶಿಕ ಮಟ್ಟದ ಯುವ ಸಂಸತ್ ಸ್ಪರ್ಧೆ ಕಾರ್ಯಕ್ರಮ**

**ವಿದ್ಯಾರ್ಥಿಗಳಲ್ಲಿ ಸಂಸತ್ತಿನ ಕಾರ್ಯವಿಧಾನದ ಬಗೆಗಿನ ಅರಿವು ಮೂಡಿಸಲು ಸಹಕಾರಿ**




**ಮಂಡ್ಯ, ಅ.16:** ಸಂಸತ್ತು ಕೇವಲ ವಾದ-ವಿವಾದ ಮಾಡುವ, ಕಾನೂನು ರೂಪಿಸುವ ಸ್ಥಳವಲ್ಲ, ಅದು ದೇಶದ ಭವಿಷ್ಯವನ್ನು ನಿರ್ಧರಿಸುವ ಪ್ರಜಾಪ್ರಭುತ್ವದ ಶಕ್ತಿ ಕೇಂದ್ರ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಹಾಗೂ ಶಾಸಕ ದಿನೇಶ್ ಗೂಳಿಗೌಡ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಜವಾಹರ್ ನವೋದಯ ವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಂಡಿದ್ದ 28ನೇ ಪ್ರಾದೇಶಿಕ ಮಟ್ಟದ 'ಯುವ ಸಂಸತ್' ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಆರ್ಥಿಕ ಪರಿಸ್ಥಿತಿ ಸುಧಾರಣೆ, ಕೃಷಿ ನೀತಿಗಳು, ಕೈಗಾರಿಕೆಗಳ ಸ್ಥಾಪನೆ, ಉದ್ಯೋಗ ಸೃಷ್ಟಿ, ಆಧುನಿಕ ಎಐ ಕಾಲಘಟ್ಟದಲ್ಲಿ ತೊಡಗಿಕೊಳ್ಳುವ ಕುರಿತಂತೆ ಜನಪರ ಯೋಜನೆಗಳನ್ನು ಜಾರಿಗೆ ತರುವ ವೇದಿಕೆಯಾಗಿ ಸಂಸತ್ತು ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಯುವಕರಲ್ಲಿ ನಾಯಕತ್ವ ಗುಣಗಳ ಬೆಳವಣಿಗೆಗೆ ಹಾಗೂ ಸಂಸತ್ತಿನ ಕಾರ್ಯವಿಧಾನಗಳ ಬಗ್ಗೆ ತಿಳಿದುಕೊಳ್ಳಲು ಯುವ ಸಂಸತ್ ಸ್ಪರ್ಧಾ ಕಾರ್ಯಕ್ರಮ ಉತ್ತಮ ವೇದಿಕೆ ಒದಗಿಸಲಿದೆ. ಈ ಸ್ಪರ್ಧೆ ಕಾರ್ಯಕ್ರಮದ ಮುಖಾಂತರ ಸಂಸತ್ತು ಹೇಗೆ ಕಾರ್ಯನಿರ್ವಹಿಸುತ್ತದೆ, ದೇಶದ ಸಮಸ್ಯೆಗಳನ್ನು ಹೇಗೆ ಚರ್ಚಿಸಲಾಗುತ್ತದೆ ಹಾಗೂ ಕಾನೂನುಗಳು ಹೇಗೆ ರೂಪುಗೊಳ್ಳುತ್ತವೆ ಎಂಬುದನ್ನು ಶಾಲಾ ಹಂತದಲ್ಲೇ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು ಎಂದರು.

ಮುಂದಿನ ತಲೆಮಾರಿನ ನಾಯಕರಾಗುವ ವಿದ್ಯಾರ್ಥಿಗಳು, ದೇಶದ ಅಭಿವೃದ್ಧಿಗೆ ಏನು ಕೊಡುಗೆಗಳನ್ನು ನೀಡಬಹುದು ಎಂದು ಚರ್ಚಿಸಬೇಕು. ತಲಾದಾಯ ಹೆಚ್ಚಳ, ಸ್ವಉದ್ಯೋಗ ಸ್ಥಾಪನೆ, ಉದ್ಯೋಗಗಳ ಸೃಷ್ಟಿ, ಜಗತ್ತಿನ ಇತರೆ ರಾಷ್ಟ್ರಗಳೊಂದಿಗೆ ಭಾರತ ಯಾವ ರೀತಿ ಸ್ಪರ್ಧಿಸುತ್ತಿದೆ ಎಂಬುದರ ಕುರಿತು ಈಗಿನಿಂದಲೇ ಅಧ್ಯಯನ ನಡೆಸಬೇಕು. ಸಮಾಜದ ಕಟ್ಟಕಡೆಯ ಸಾಮಾನ್ಯ ನಾಗರಿಕನ ಸಂಕಷ್ಟಗಳನ್ನು ಗ್ರಹಿಸಿ, ಅದನ್ನು ಸಂಸದೀಯ ಚೌಕಟ್ಟಿನಲ್ಲಿ ಬಗೆಹರಿಸುವ ಕಲೆಯನ್ನು ಕರಗತ ಮಾಡಿಕೊಳ್ಳಬೇಕು ಎಂದು ಕರೆಕೊಟ್ಟರು.

ನಾಯಕತ್ವ ಎಂದರೆ ಕೇವಲ ಅಧಿಕಾರ ಚಲಾಯಿಸುವುದಲ್ಲ, ಬದಲಿಗೆ ಅದೊಂದು ಮಹತ್ತರವಾದ ಸಾಮಾಜಿಕ ಹೊಣೆಗಾರಿಕೆ. ಈ ನಿಟ್ಟಿನಲ್ಲಿ ಯಾವುದೇ ಪ್ರಮುಖ ವಿಷಯದ ಬಗ್ಗೆ ಆಳವಾದ ಅಧ್ಯಯನ ನಡೆಸಿ, ತನ್ನದೇ ಆದ ಸ್ಪಷ್ಟ ನಿಲುವು ರೂಪಿಸಿಕೊಂಡು ನಿರ್ಧಾರಗಳನ್ನು ತೆಗೆದುಕೊಳ್ಳುವ ನಾಯಕತ್ವದ ಗುಣಗಳು ಬೆಳೆಯಲು ಇಂತಹ ಕಾರ್ಯಕ್ರಮಗಳು ನೆರವಾಗಲಿದೆ ಎಂದು ಹೇಳಿದರು.

2011-12ರಲ್ಲಿಮೈಸೂರು ಎಓಗಿ ಶಾಲೆ ರಾಷ್ಟ್ರ ಮಟ್ಟದ ಯುವಸಂಸತ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಕ್ಕೆ ಕೀರ್ತಿ ತಂದಿತ್ತು. ಅದೇ ಪರಂಪರೆಯನ್ನು ಮುಂದುವರಿಸಿ, ಇಂದು ಮಂಡ್ಯದಲ್ಲಿ ನಡೆಯುತ್ತಿರುವ ಈ ಪ್ರಾದೇಶಿಕ ಸ್ಪರ್ಧೆಯಲ್ಲಿ ಭಾಗವಹಿಸಿರುವ ನಿಮ್ಮಲ್ಲೊಬ್ಬರು ಮುಂದಿನ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲೂ ವಿಜೇತರಾಗಿ ಹೊರಹೊಮ್ಮಬೇಕು ಎಂದು ಸ್ಫೂರ್ತಿ ತುಂಬಿದರು.

ಕೇವಲ ಪಠ್ಯಪುಸ್ತಕಗಳಿಗಷ್ಟೇ ಸೀಮಿತವಾಗದೆ ಇಂತಹ ಪಠ್ಯೇತರ ಚಟುವಟಿಕೆಗಳು ಹಾಗೂ ವೇದಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದರಿಂದ ನಿಮ್ಮ ಆತ್ಮವಿಶ್ವಾಸ ಇಮ್ಮಡಿಗೊಳ್ಳುತ್ತದೆ. ನಾಳೆ ನೀವುಗಳೆ ಸಂಸತ್ ಸದಸ್ಯರು, ಶಾಸಕರು, ಐಎಎಸ್ ಅಧಿಕಾರಿಗಳು ಹಾಗೂ ಮಹಾನ್ ನಾಯಕರಾಗಿ ಹೊರಹೊಮ್ಮಲಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹೈದರಾಬಾದ್ ನವೋದಯ ವಿದ್ಯಾಲಯದ ಸಹಾಯಕ ಆಯುಕ್ತರಾದ ಹೇಮಲತಾ, ತುಮಕೂರು ನವೋದಯ ವಿದ್ಯಾಲಯದ ಪ್ರಾಂಶುಪಾಲರಾದ ಸುಂದರ್ ಕುಮಾರ್, ಮಂಡ್ಯ ನವೋದಯ ವಿದ್ಯಾಲಯದ ಪ್ರಾಂಶುಪಾಲರಾದ ಪ್ರಸಾದ್ ಹಾಗೂ ಕೇರಳದ ವೈನಾಡು, ಹೈದರಾಬಾದ್, ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ಪ್ರಾದೇಶಿಕ ನವೋದಯ ವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಅಸ್ಸಾಂ ಭವನದಿಂದ ಕರ್ನಾಟಕ ಜೊತೆಗಿನ ಸಂಬಂಧ– ಸಮನ್ವಯತೆ ಸದೃಢ: ಅಸ್ಸಾಂ ಸಿಎಂ ಹಿಮಂತ್ ಬಿಸ್ವ ಶರ್ಮ

### ರಾಮೋಹಳ್ಳಿಯಲ್ಲಿ ಅಸ್ಸಾಂ ಭವನ ಉದ್ಘಾಟಿಸಿದ ಮುಖ್ಯಮಂತ್ರಿ ಡಾ. ಹಿಮಂತ ಬಿಸ್ವ ಶರ್ಮ






**ಬೆಂಗಳೂರು ಅ.16:** ಅಸ್ಸಾಂ ಭವನವು ಅಸ್ಸಾಂ ಜನತೆಗೆ ಪ್ರಮುಖ ಸೇವೆಗಳನ್ನು ಒದಗಿಸುವ ಜೊತೆಗೆ ಕರ್ನಾಟಕ ಮತ್ತು ಅಸ್ಸಾಂ ಜನರ ನಡುವಿನ ಸಂಬಂಧ ಹಾಗೂ ಸಮನ್ವಯತೆಯನ್ನು ಗಟ್ಟಿಗೊಳಿಸುತ್ತದೆ ಎಂದು ಅಸ್ಸಾಂ ಮುಖ್ಯಮಂತ್ರಿ ಡಾ. ಹಿಮಂತ ಬಿಸ್ವ ಶರ್ಮ ಅವರು ಅಭಿಪ್ರಾಯಪಟ್ಟರು.

ರಾಮೋಹಳ್ಳಿಯಲ್ಲಿ ನಿರ್ಮಾಣ ಮಾಡಲಾಗಿರುವ ಅಸ್ಸಾಂ ಭವನವನ್ನು ಉದ್ಘಾಟಿಸಿ, ಅಲ್ಲಿ ಉಪಸ್ಥಿತರಿದ್ದ ವಲಸಿಗ ಅಸ್ಸಾಮಿ ಜನರನ್ನು ಉದ್ದೇಶಿಸಿ ಅಸ್ಸಾಮಿ ಭಾಷೆಯಲ್ಲಿಯೇ ಮಾತನಾಡಿದರು.

ಅಸ್ಸಾಂ ಭವನದ ನಿರ್ಮಾಣವನ್ನು 2016ರಲ್ಲಿ ಆರಂಭಿಸಲಾಯಿತಾದರೂ, ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಕೆಲವು ತೊಡಕುಗಳಿಂದ ಭವನ ನಿರ್ಮಾಣ ಕಾರ್ಯವು ಸ್ಥಗಿತಗೊಂಡಿತ್ತು. ಆದರೆ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿದ ನಂತರ 2022 ರಲ್ಲಿ ನಿರ್ಮಾಣ ಕಾರ್ಯವು ಪುನರಾರಂಭಗೊಂಡು ಇಂದು ಭವನ ಉದ್ಘಾಟನೆಗೊಂಡಿದೆ. ಇದಕ್ಕಾಗಿ ಕರ್ನಾಟಕ ಸರ್ಕಾರಕ್ಕೆ ಧನ್ಯವಾದ ಹೇಳಲು ಬಯಸುತ್ತೇನೆ ಎಂದರು.

ಕರ್ನಾಟಕದಲ್ಲಿ ವಾಸಿಸುತ್ತಿರುವ ಅಸ್ಸಾಮಿ ಜನರು ಈ ಭವನದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಮತ್ತು ಸಭೆಗಳನ್ನು ಆಯೋಜಿಸಬಹುದು. ಅದೇರೀತಿ ಇಲ್ಲಿಗೆ ಭೇಟಿ ನೀಡುವವರು ಅಸ್ಸಾಂನ ಅಧಿಕೃತ ಹಾಗೂ ಸಾಂಪ್ರದಾಯಿಕ ಊಟದ ಸವಿಯನ್ನು ಪಡೆಯಬಹುದು. ಹಾಗೆಯೇ ಅಸ್ಸಾಂ ಭವನದಲ್ಲಿ ಅಸ್ಸಾಂ ರಾಜ್ಯದಿಂದ ಕರ್ನಾಟಕಕ್ಕೆ ಆಗಮಿಸುವ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಉಳಿದುಕೊಳ್ಳಲು ಅನುಕೂಲವಾಗಲಿದೆ ಎಂದರು.

ಹಿಂದೆ ಅಸ್ಸಾಂನಲ್ಲಿ 5 ಲಕ್ಷ ಕೋಟಿ ರೂ.ಗಳ ಹೂಡಿಕೆಗಳ ಒಪ್ಪಂದಗಳಿಗೆ ಸಹಿ ಹಾಕಲಾಗಿತ್ತು. ಅದರಲ್ಲಿ ಈಗಾಗಲೇ 4 ಲಕ್ಷ ಕೋಟಿ ರೂ.ಗಳ ಹೂಡಿಕೆ ಯೋಜನೆಗಳು ಪ್ರಗತಿಯಲ್ಲಿವೆ. ಹಾಗಾಗಿ ಮೂಲಭೂತ ಸೌಕರ್ಯಗಳ ವಲಯದಲ್ಲಿ ಅಸ್ಸಾಂ ರಾಜ್ಯವು ಮಹತ್ವದ ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಅಸ್ಸಾಂ ಸರ್ಕಾರದ ಕಂದಾಯ ಸಚಿವರಾದ ಕೇಶಬ್ ಮಹಂತ ಅವರು ಮಾತನಾಡಿ, ಬೆಂಗಳೂರಿನಲ್ಲಿ ಶೀಘ್ರದಲ್ಲೇ ಹೊಸ ಕೈಗಾರಿಕಾ ಎಸ್ಟೇಟ್ ಘೋಷಿಸಲಾಗುವುದು. ನಮ್ಮ ಭವನದ ಹತ್ತಿರದಲ್ಲೇ ಹಲವು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜು ಸೇರಿ ಶಿಕ್ಷಣ ಸಂಸ್ಥೆಗಳಿರುವುದರಿಂದ ವೈದ್ಯಕೀಯ ಚಿಕಿತ್ಸೆ ಹಾಗೂ ಶಿಕ್ಷಣಕ್ಕಾಗಿ ಅಸ್ಸಾಂನಿಂದ ಬರುವ ಜನರಿಗೆ ಭವನ ಅನುಕೂಲವಾಗಲಿದೆ. ಬೆಂಗಳೂರಿನಲ್ಲಿ ನೆಲೆಸಿರುವ ಅಂದಾಜು 4 ಲಕ್ಷ ಅಸ್ಸಾಮಿ ಜನರಿಗೆ ಇದು ವಿಶೇಷವಾಗಿ ನೆರವಾಗಲಿದೆ ಎಂದರು. ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಸ್ಸಾಂ ರಾಜ್ಯದ ಕಂದಾಯ ಇಲಾಖೆಯ ಕಾರ್ಯದರ್ಶಿ ನರಸಿಂಗ್ ಪವರ್, ಯಶವಂತಪುರ ವಿಧಾನಸಭಾ ಶಾಸಕರಾದ ಎಸ್.ಟಿ. ಸೋಮಶೇಖರ್ ಅವರು ಉಪಸ್ಥಿತರಿದ್ದರು. ಅಸ್ಸಾಂ ಜನರು ಇತರ ರಾಜ್ಯಗಳಿಗೆ ವಲಸೆ ಹೋಗುವುದು ಇಷ್ಟವಿಲ್ಲ

ಭದ್ರತಾ ಸಿಬ್ಬಂದಿಯಾಗಿ ನಮ್ಮ ರಾಜ್ಯದ ಯುವಕರು ಅನಿವಾರ್ಯವಾಗಿ ಇತರ ರಾಜ್ಯಗಳಿಗೆ ವಲಸೆ ಹೋಗುವುದು ನಮಗೆ ಯಾರಿಗೂ ಇಷ್ಟವಿಲ್ಲ. ಶ್ರದ್ಧಾಂಜಲಿ ಯೋಜನೆಯಡಿ ಪ್ರತಿ ತಿಂಗಳು ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಂದ 40ಕ್ಕೂ ಹೆಚ್ಚು ಮೃತದೇಹಗಳನ್ನು ಅಸ್ಸಾಂಗೆ ಮರಳಿ ತರಲಾಗುತ್ತಿದೆ. ಇದು ಅತ್ಯಂತ ದುಃಖಕರವಾದ ವಿಷಯವಾಗಿದೆ. ಅಸ್ಸಾಂನಲ್ಲಿ ನಡೆಯುತ್ತಿರುವ ಕೈಗಾರಿಕಾ ಅಭಿವೃದ್ಧಿಯು ರಾಜ್ಯದಲ್ಲೇ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಈ ಪರಿಸ್ಥಿತಿಯನ್ನು ಕೊನೆಗೊಳಿಸಲು ಸಹಾಯವಾಗಲಿದೆ ಎಂದು ಡಾ. ಹಿಮಂತ ಬಿಸ್ವ ಶರ್ಮ ತಿಳಿಸಿದರು.

**ಭವನದಲ್ಲಿ ಏನೇನಿದೆ?**

**ನಾಲ್ಕು ಅಂತಸ್ತಿನ ಈ ಅಸ್ಸಾಂ ಭವನವದಲ್ಲಿ ಐದು ಸಮ್ಮೇಳನ ಸಭಾಂಗಣಗಳನ್ನು, (ಕಾನ್ಫರೆನ್ಸ್ ಹಾಲ್), 3 ವಿವಿಐಪಿ ಹಾಗೂ ವಿಐಪಿ ಕೊಠಡಿಗಳು, 26 ಸಣ್ಣ ಕೊಠಡಿ, 36 ದೊಡ್ಡ ಕೊಠಡಿ, ಎರಡು ಬೆಡ್ ರೂಮ್ ಇರುವ ಎರಡು ಮನೆ ಸೇರಿದಂತೆ ಅತಿಥಿ ಗಳಿಗಾಗಿ ವಿಶೇಷ ಸೌಲಭ್ಯಗಳಲ್ಲದೆ, ರೆಸ್ಟೋರೆಂಟ್, ಜಿಮ್ ಮತ್ತು ಒಳಾಂಗಣ ಕ್ರೀಡಾ ಸೌಲಭ್ಯಗಳನ್ನು ಸಹ ಒದಗಿಸಲಾಗಿದೆ.**



ಭಾರತ ಮತ್ತು ಮಂಗೋಲಿಯಾದ ರಕ್ಷಣಾ ಸಚಿವಾಲಯಗಳ ನಡುವಿನ 14ನೇ ಜಂಟಿ ಕಾರ್ಯನಿರತ ಗುಂಪಿನ (Joint Working Group) ಸಭೆಯು ಶುಕ್ರವಾರ ಉಲಾನ್‌ಬಾತರ್‌ನಲ್ಲಿ ನಡೆಯಿತು.

# ಮಾದಕದ್ರವ್ಯ ವಿರುದ್ಧ ಹೋರಾಟಕ್ಕೆ ಇಡೀ ದೇಶ ಒಂದಾಗಬೇಕು: ಪ್ರಿಯಾಂಕ್ ಖರ್ಗೆ ಕರೆ






### ರಾಷ್ಟ್ರೀಯ ಏಕತಾ ದಿವಸ ಅಂಗವಾಗಿ ರಾಷ್ಟ್ರೀಯ ಮೋಟಾರ್‌ಸೈಕಲ್ ರ್‍ಯಾಲಿಗೆ ಚಾಲನೆ

**ಬೆಂಗಳೂರು, ಅ.16:** ಮಾದಕ ದ್ರವ್ಯಗಳ ವಿರುದ್ಧದ ಹೋರಾಟವು ಯಾವುದೇ ಒಂದು ರಾಜ್ಯ ಅಥವಾ ಸರ್ಕಾರಕ್ಕೆ ಸೀಮಿತವಾದುದಲ್ಲ. ಯುವಜನತೆಯ ಭವಿಷ್ಯವನ್ನು ರಕ್ಷಿಸುವ ಈ ಹೋರಾಟದಲ್ಲಿ ಇಡೀ ದೇಶ ಒಂದಾಗಿ ನಿಲ್ಲಬೇಕು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮುಂಭಾಗದಲ್ಲಿ ರಾಷ್ಟ್ರೀಯ ಏಕತಾ ದಿವಸ್ ಅಂಗವಾಗಿ ಕರ್ನಾಟಕ ಪೊಲೀಸ್ ಆಯೋಜಿಸಿರುವ ರಾಷ್ಟ್ರೀಯ ಮೋಟಾರ್‌ಸೈಕಲ್ ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿ, ಕರ್ನಾಟಕವಾಗಲಿ, ಕಾಶ್ಮೀರವಾಗಲಿ ಅಥವಾ ದೆಹಲಿಯಾಗಲಿ, ಸರ್ಕಾರಗಳು ಮತ್ತು ರಾಜ್ಯಗಳ ಭಿನ್ನತೆಗಳನ್ನು ಬದಿಗಿಟ್ಟು ಮಾದಕ ದ್ರವ್ಯಗಳ ವಿರುದ್ಧ ನಾವೆಲ್ಲರೂ ಒಗ್ಗಟ್ಟಿನಿಂದ ಹೋರಾಡಬೇಕು. ನಮ್ಮ ಯುವಜನರ ಭವಿಷ್ಯವನ್ನು ರಕ್ಷಿಸುವುದು ಎಲ್ಲರ ಸಾಮೂಹಿಕ ಜವಾಬ್ದಾರಿ. ಈ ರ್‍ಯಾಲಿಯ ಮೂಲಕ ದೇಶದ ಯುವಜನತೆಗೆ ಇದೇ ಸಂದೇಶವನ್ನು ತಲುಪಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

**3 ವರ್ಷದಲ್ಲಿ 37 ಸಾವಿರ ಜನರ ಬಂಧನ**

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ಮಾದಕ ದ್ರವ್ಯಗಳ ವಿರುದ್ಧದ ಕಾರ್ಯಾಚರಣೆಯಲ್ಲಿ ಸುಮಾರು 37 ಸಾವಿರ ಜನರನ್ನು ಬಂಧಿಸಲಾಗಿದ್ದು, 10 ಸಾವಿರ ಮಂದಿಗೆ ಶಿಕ್ಷೆಯಾಗಿದೆ. ಈ ಅಂಕಿ–ಅಂಶಗಳು ಮಾದಕ ದ್ರವ್ಯಗಳ ವಿರುದ್ಧದ ಹೋರಾಟದಲ್ಲಿ ರಾಜ್ಯ ಸರ್ಕಾರ ಮತ ಗಂಭೀರತೆ ಹಾಗೂ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ. ಮಾದಕ ದ್ರವ್ಯಗಳ ಸಮಸ್ಯೆ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿಯೂ ಹರಡುತ್ತಿದೆ. ಈ ಪಿಡುಗನ್ನು ಎದುರಿಸಲು ರಾಜ್ಯಗಳ ಗಡಿಗಳನ್ನು ಮೀರಿ ಸಮನ್ವಯದೊಂದಿಗೆ ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

**ಗುಜರಾತ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗಿ**

ದೇಶ ಎಲ್ಲ ರಾಜ್ಯಗಳಲ್ಲಿ ಆರಂಭವಾಗಿರುವ ಈ ರ್‍ಯಾಲಿಯ ಗುಜರಾತ್‌ನ ಏಕತಾ ನಗರದಲ್ಲಿ ಅ.31ರಂದು ನಡೆಯುವ ರಾಷ್ಟ್ರೀಯ ಏಕತಾ ದಿವಸ್ ಕಾರ್ಯಕ್ರಮದಲ್ಲಿ ಭಾಗವಹಿಸಲಿವೆ. ಕರ್ನಾಟಕದಿಂದ ಒಟ್ಟು 200 ಪೊಲೀಸ್ ಸಿಬ್ಬಂದಿ ರ್‍ಯಾಲಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಅಕ್ಟೋಬರ್ 15ರಂದು ಬೆಂಗಳೂರಿನಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರ್‍ಯಾಲಿ ಸಂಚರಿಸಿದ್ದು, ಅಕ್ಟೋಬರ್ 16ರಂದು ಏಕತಾ ನಗರಕ್ಕೆ ಪ್ರಯಾಣ ಮುಂದುವರಿಸಲಿದೆ.

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದ ಅಂಗವಾಗಿ ಪ್ರತಿವರ್ಷ ಅಕ್ಟೋಬರ್ 31ರಂದು ಆಚರಿಸಲಾಗುವ ರಾಷ್ಟ್ರೀಯ ಏಕತಾ ದಿವಸ್‌ನ ಆಶಯಕ್ಕೆ ಅನುಗುಣವಾಗಿ ರ್‍ಯಾಲಿ ಆಯೋಜಿಸಲಾಗಿದೆ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

# ಕ್ವಿನ್‌ಸಿಟಿ ಯೋಜನೆ ಪರಾಮರ್ಶನಾ ಸಭೆ: ಮಾರ್ಚ್ ಒಳಗೆ ನಿವೇಶನ ಹಂಚಿಕೆ ಗುರಿ

### ಸಮರೋಪಾದಿಯಲ್ಲಿ ಕೆಲಸ ಆರಂಭಿಸಬೇಕು, 15 ದಿನಕ್ಕೊಮ್ಮೆ ಪ್ರಗತಿ ವರದಿ ನೀಡಬೇಕು: ಸಚಿವ ಎಂ.ಬಿ. ಪಾಟೀಲ್ ಸೂಚನೆ



**ಬೆಂಗಳೂರು, ಸೆ.16:** ರಾಜ್ಯ ಸರಕಾರದ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಯಾಗಿರುವ ಕ್ವಿನ್ ಸಿಟಿ ಅಭಿವೃದ್ಧಿಯ ವಿಚಾರದಲ್ಲಿ ಮುಂಬರುವ ಫೆಬ್ರವರಿ–ಮಾರ್ಚ್ ವೇಳೆಗೆ ನಿರ್ಣಾಯಕ ಪ್ರಗತಿ ಆಗಬೇಕು. ಇದಕ್ಕೆ ಆಗಬೇಕಾಗಿರುವ ಕೆಲಸಗಳನ್ನು ಕೆಐಎಡಿಬಿ ಸಮರೋಪಾದಿಯಲ್ಲಿ ಕೂಡಲೇ ಆರಂಭಿಸಬೇಕು. ಜತೆಗೆ ಪ್ರತಿ 15 ದಿನಗಳಿಗೊಮ್ಮೆ ಯೋಜನೆಯ ಪ್ರಗತಿಗೆ ಸಂಬಂಧಿಸಿದ ವರದಿ ಕೊಡಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ನಗರದ ಖನಿಜ ಭವನದಲ್ಲಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಶುಕ್ರವಾರ ಯೋಜನೆಯ ಪರಾಮರ್ಶನಾ ಸಭೆ ನಡೆಸಿದರು.

ಈ ಬಗ್ಗೆ ಮಾತನಾಡಿದ ಅವರು, ಕ್ವಿನ್ ಸಿಟಿ ಯೋಜನೆ ನಮ್ಮ ಸರಕಾರದ ಕನಸಿನ ಕೂಸಾಗಿದೆ. ಇದರ ಸಾಕಾರಕ್ಕಾಗಿ ಕೈಗಾರಿಕಾ ಇಲಾಖೆಯು ಪ್ರತ್ಯೇಕ ತಂಡವನ್ನೇ ರಚಿಸಿ, ಇಡೀ ತಂಡದ ಸಿಬ್ಬಂದಿ ಯೋಜನಾ ಪ್ರದೇಶದಲ್ಲೇ ಕಾರ್ಯನಿರತವಾಗಬೇಕು. ಅಂದರೆ ಭೂಸ್ವಾಧೀನ, ಸಂಪರ್ಕ ರಸ್ತೆ, ಚರಂಡಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸ್ಥಳದಲ್ಲೇ ಪರಿಹಾರ ಕಂಡುಕೊಳ್ಳಲು ಸೂಚಿಸಿದ್ದಾರೆ.

ಕ್ವಿನ್ ಸಿಟಿ ಪ್ರದೇಶಕ್ಕೆ ಜಾಗತಿಕ ಮಟ್ಟದ ಉದ್ದಿಮೆಗಳು, ವಿಶ್ವವಿದ್ಯಾಲಯಗಳು, ಕಾನೂನು ಶಾಲೆಗಳು, ಐಐಎಸ್ಸಿ ತರಹದ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಆಸ್ಪತ್ರೆಗಳು, ನಾವೀನ್ಯತಾ ಸಂಸ್ಥೆಗಳು, ನವೋದ್ಯಮಗಳು ಬಂದು ಹೂಡಿಕೆ ಮಾಡಲಿವೆ. ಅಂದ ಮೇಲೆ ನಾವು ಇಲ್ಲಿ ಒದಗಿಸುವ ಸೌಕರ್ಯಗಳು ಕೂಡ ವಿಶ್ವದರ್ಜೆಯದೇ ಆಗಿರಬೇಕು. ಆದ್ದರಿಂದ ಯೋಜನೆಯ ವಿನ್ಯಾಸ ಸಂಸ್ಥೆಯ ಜತೆ ಸಮನ್ವಯ ಸಾಧಿಸಬೇಕು ಎಂದು ಸೂಚಿಸಿದ್ದಾರೆ.

ಇಲ್ಲಿಗೆ ಬರುವ ಹೂಡಿಕೆದಾರರಿಗೆ ಉತ್ಕೃಷ್ಟ ವಸತಿ ಸೌಕರ್ಯ, ಕಾಮನ್ ಫೆಸಿಲಿಟಿ ಸೆಂಟರ್, ಕ್ರೀಡಾ ಸಂಕೀರ್ಣ, ಸಂಪರ್ಕ ರಸ್ತೆಗಳು, ಉದ್ಯಾನ, ವಿದ್ಯುತ್ ಸಂಪರ್ಕ ಮುಂತಾದ ಮೂಲಸೌಕರ್ಯಗಳನ್ನು ಕೊಡಬೇಕಾಗಿದೆ. ಇವುಗಳನ್ನು ಸಮರೋಪಾದಿಯಲ್ಲಿ ಮುಗಿಸಲು ಅಗತ್ಯವೆನಿಸಿದರೆ ಮತ್ತೊಂದು ಚೀಫ್ ಎಂಜಿನಿಯರ್ ಹುದ್ದೆಯನ್ನು ಸೃಷ್ಟಿಸಲಾಗುವುದು ಎಂದು ಅವರು ವಿವರಿಸಿದ್ದಾರೆ.

ಒಟ್ಟಾರೆ ಯೋಜನೆಯು 5 ಸಾವಿರ ಎಕರೆ ಪ್ರದೇಶದಲ್ಲಿ ಜಾರಿಗೆ ಬರಲಿದೆ. ಇಲ್ಲಿಗೆ ಬರುವವರಲ್ಲಿ ಕೆಲವರು ಅವರೇ ತಮ್ಮ ಕಟ್ಟಡಗಳನ್ನು ನಿರ್ಮಿಸಿಕೊಳ್ಳಬಹುದು. ಇನ್ನು ಕೆಲವರು ಬಿಲ್ಡ್–ಟು–ಸೂಟ್ ಮಾದರಿಯ ವ್ಯವಸ್ಥೆಯನ್ನು ಬಯಸಬಹುದು. ಮತ್ತೆ ಕೆಲವರು ನಿರ್ಮಾಣ ಸಂಸ್ಥೆಗಳ ಜತೆ ಒಡಂಬಡಿಕೆ ಮಾಡಿಕೊಂಡು ಅರ್ಜಿ ಸಲ್ಲಿಸಬಹುದು. ಕೆಐಎಡಿಬಿ ಇವೆಲ್ಲಕ್ಕೂ ಸಿದ್ಧವಾಗಿರಬೇಕು. ಒಟ್ಟಿನಲ್ಲಿ ಐದು ತಿಂಗಳಲ್ಲಿ ಗರಿಷ್ಠ ಮಟ್ಟದ ಪ್ರಗತಿಯನ್ನು ಸಾಧಿಸಲೇಬೇಕು ಎಂದು ಅವರು ಗುರಿ ನಿಗದಿಪಡಿಸಿದ್ದಾರೆ.

ಹೂಡಿಕೆದಾರರಿಗೆ ಯೋಜನೆಯ ವೈಶಿಷ್ಟ್ಯವನ್ನು ಮನದಟ್ಟು ಮಾಡಿಕೊಟ್ಟು, ತ್ವರಿತವಾಗಿ ಅವರಿಗೆ ನಿವೇಶನ ಒದಗಿಸಬೇಕು. ನಿಧಾನ ಮಾಡಿದರೆ ಬಂಡವಾಳ ಹೂಡುವವರು ಬೇರೆ ಕಡೆಗೆ ಹೋಗುತ್ತಾರೆ. ಎರಡನೆಯ ಹಂತದ ಕೆಲಸಗಳನ್ನು ಕೂಡ ಬೇಗನೆ ಕೈಗೆತ್ತಿಕೊಳ್ಳಬೇಕು. ಒಟ್ಟಾರೆಯಾಗಿ ಇಲ್ಲಿ 50 ಸಾವಿರ ಕೋಟಿ ರೂಪಾಯಿ ಬಂಡವಾಳ ಹರಿದು ಬರುವಂತೆ ಎಲ್ಲರೂ ಶ್ರಮಿಸಬೇಕು ಎಂದು ಪಾಟೀಲರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸಭೆಯಲ್ಲಿ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಖುಷ್ಬೂ ಗೋಯೆಲ್, ಕೈಗಾರಿಕಾ ಸಚಿವರ ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ, ಕೆಐಎಡಿಬಿ ಸಿಇಒ ಗೋವಿಂದ ರೆಡ್ಡಿ, ವಿಶೇಷ ಜಿಲ್ಲಾಧಿಕಾರಿ ರಘುನಂದನ್, ಮುಖ್ಯ ಎಂಜಿನಿಯರ್ ವೀರಭದ್ರಯ್ಯ ಉಪಸ್ಥಿತರಿದ್ದರು.

# 17 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಆರಂಭ: ಸಚಿವ ಈಶ್ವರ ಖಂಡ್ರೆ



### ಶಿಕ್ಷಕರ ಒತ್ತಡ ನಿವಾರಣೆ ಹಾಗೂ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶ

**ಬೀದರ್, ಅ.16:** ರಾಜ್ಯದಲ್ಲಿ ಶಿಕ್ಷಕರ ಮೇಲಿನ ಕೆಲಸದ ಒತ್ತಡ ಕಡಿಮೆ ಮಾಡುವುದರ ಜೊತೆಗೆ, ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ 17 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗಿದೆ. ಈ ಪೈಕಿ ಕಲ್ಯಾಣ ಕರ್ನಾಟಕ ಭಾಗದಲ್ಲಿ 7 ಸಾವಿರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರು ಪರವಾಗಿ ಪ್ರಚಾರ ನಡೆಸಿದ ಅವರು, ಶಿಕ್ಷಕರ ಹಕ್ಕುಗಳು, ಹಿತಾಸಕ್ತಿ ಮತ್ತು ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಕುರಿತು ಮಹತ್ವದ ಮಾಹಿತಿಂ ನೀಡಿದ್ದಾರೆ.

**ಹೆಚ್ಚುವರಿ 5 ಸಾವಿರ ಶಿಕ್ಷಕರ ನೇಮಕಕ್ಕೆ ಮನವಿ**

ಈಗಾಗಲೇ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಆರಂಭವಾಗಿದ್ದು, ಕಲ್ಯಾಣ ಕರ್ನಾಟಕ ಭಾಗಕ್ಕೆ 7 ಸಾವಿರ ಹುದ್ದೆಗಳನ್ನು ಮೀಸಲಿಟ್ಟು ಭರ್ತಿ ಮಾಡಲಾಗುತ್ತಿದೆ. ಇದಲ್ಲದೆ, ರಾಜ್ಯದಲ್ಲಿ ಶಿಕ್ಷಕರ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಹೆಚ್ಚುವರಿಯಾಗಿ 5 ಸಾವಿರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿರುವುದಾಗಿ ಖಂಡ್ರೆ ತಿಳಿಸಿದ್ದಾರೆ. ಕಲ್ಯಾಣ ಕರ್ನಾಟಕಕ್ಕೆ 371(ಜೆ) ವಿಶೇಷ ಸ್ಥಾನಮಾನ ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ಅಲ್ಲಿನ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ವಿಶೇಷ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಸಂವಿಧಾನದ 371(ಜೆ) ವಿಧಿಗೆ ತಿದ್ದುಪಡಿ ತರಲಾಗಿದೆ. ಈ ವಿಶೇಷ ಸ್ಥಾನಮಾನದಿಂದ ಕಲ್ಯಾಣ ಕರ್ನಾಟಕದ ಜನರಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಸೇರಿ ಹಲವು ಅವಕಾಶಗಳು ದೊರೆಯುತ್ತಿವೆ ಎಂದು ಖಂಡ್ರೆ ತಿಳಿಸಿದರು.

# ಜೇವರ್ಗಿ, ರಾಯಚೂರಿನ ನೀರಿನ ಅಗತ್ಯ ಪೂರೈಸಲು ಆದ್ಯತೆ

**ಸಲಹಾ ಸಮಿತಿ ಸಭೆಯಲ್ಲಿ ಸಚಿವ ಡಾ. ಅಜಯ್ ಧರ್ಮಸಿಂಗ್ ಒತ್ತಾಯ**



**ಬೆಂಗಳೂರು, ಅ.16:** ಕೃಷ್ಣಾ ಮೇಲ್ದಂಡೆ ಯೋಜನೆಯ 2026–27ನೇ ಸಾಲಿನ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಜೇವರ್ಗಿ ವಿಧಾನಸಭಾ ಕ್ಷೇತ್ರ ಹಾಗೂ ರಾಯಚೂರು ಜಿಲ್ಲೆಯ ಕುಡಿಯುವ ನೀರಿನ ಅಗತ್ಯ ಮತ್ತು ಕೊನೆಯಂಚಿನ ರೈತರಿಗೆ ನೀರು ತಲುಪಿಸುವುದಕ್ಕೆ ವಿಶೇಷ ಆದ್ಯತೆ ನೀಡಬೇಕು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಅಜಯ್ ಧರ್ಮಸಿಂಗ್ ಒತ್ತಾಯಿಸಿದರು.

ವಿಕಾಸಸೌಧದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ವಿಜಯಾನಂದ ಕಾಶಪ್ಪನವರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳ ನೀರಿನ ಲಭ್ಯತೆ, ಮುಂಗಾರು ಅವಧಿಯ ಬಾಕಿ ನೀರು ಬಿಡುಗಡೆ, ಹಿಂಗಾರು ಹಂಗಾಮು ಹಾಗೂ ಬೇಸಿಗೆಯ ಕುಡಿಯುವ ನೀರಿನ ಅಗತ್ಯತೆ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಸಚಿವರಾದ ಎಂ.ಬಿ. ಪಾಟೀಲ್, ಡಾ. ಶರಣಪ್ರಕಾಶ್ ಪಾಟೀಲ್, ಮಾಜಿ ಸಚಿವ ಶರಣಬಸಪ್ಪ ದರ್ಶನಾಪುರ, ಸಂಸದ ಕುಮಾರ್ ನಾಯಕ್, ಶಾಸಕರಾದ ಉಮೇಶ್ ಮೇಟಿ, ಜೆ.ಟಿ. ಪಾಟೀಲ್, ಜಗದೀಶ್ ಗುಡಗುಂಟಿ, ಇತರೆ ಜನಪ್ರತಿನಿಧಿಗಳು ಹಾಗೂ ಕೃಷ್ಣಾಭಾಗ್ಯ ಜಲ ನಿಗಮದ ಅಧಿಕಾರಿ ಗಳು ಉಪಸ್ಥಿತರಿದ್ದರು.

ಹಿಂಗಾರು ಹಂಗಾಮಿಗೆ ಅಗತ್ಯವಿರುವಷ್ಟು ನೀರು ಲಭ್ಯವಿಲ್ಲದ ಕಾರಣ ಹಿಂಗಾರು ನೀರಾವರಿ ಪೂರೈಕೆ ಸಾಧ್ಯವಿಲ್ಲ ಎಂದು ಸಭೆ ತೀರ್ಮಾನಿಸಿದ್ದು, ಲಭ್ಯ ನೀರನ್ನು ಕುಡಿಯುವ ನೀರು, ಕೆರೆ ತುಂಬಿಸುವಿಕೆ ಹಾಗೂ ಇತರ ಅಗತ್ಯ ಬಳಕೆಗಳಿಗೆ ಕಾಯ್ದಿರಿಸಲು ನಿರ್ಧರಿಸಲಾಯಿತು. ಕೊನೆಯಂಚಿನ ರೈತರಿಗೆ ನೀರು ತಲುಪಲು ಅನಧಿಕೃತ ನೀರು ಎತ್ತುವಿಕೆಯನ್ನು ತಡೆಯಲು ಸಂಬಂಧಪಟ್ಟ ಇಲಾಖೆಗಳ ಸಮನ್ವಯದಲ್ಲಿ ನಿಗಾ ವಹಿಸಲು ಸೂಚಿಸಲಾಯಿತು. ಲಭ್ಯವಿರುವ ನೀರಿನ ಪ್ರತಿಯೊಂದು ಹನಿಯನ್ನೂ ಸಮರ್ಪಕವಾಗಿ ಬಳಸಬೇಕು. ಜೇವರ್ಗಿ ಮತ್ತು ರಾಯಚೂರು ಭಾಗದ ಜನರು, ಜಾನುವಾರುಗಳು ಹಾಗೂ ಕೊನೆಯಂಚಿನ ರೈತರಿಗೆ ಅಗತ್ಯ ನೀರು ತಲುಪಿಸುವುದು ನಮ್ಮ ಆದ್ಯತೆ. ಹಳೆಯ ಕಾಲುವೆಗಳ ಆಧುನೀಕರಣ ಹಾಗೂ ತಂತ್ರಜ್ಞಾನ ಆಧಾರಿತ ನೀರು ನಿರ್ವಹಣೆಯ ಮೂಲಕ ನೀರಿನ ಬಳಕೆಯ ದಕ್ಷತೆಯನ್ನು ಹೆಚ್ಚಿಸಬೇಕು ಎಂದು ಡಾ. ಅಜಯ್ ಧರ್ಮಸಿಂಗ್ ಹೇಳಿದರು.

**ಸಭೆಯ ಪ್ರಮುಖ ನಿರ್ಧಾರಗಳು**

- ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಲ್ಲಿ ಒಟ್ಟು 85.61 ಟಿಎಂಸಿ ಜೀವಜಲ ಲಭ್ಯವಿರುವ ಹಿನ್ನೆಲೆಯಲ್ಲಿ, ಈಗ ನಡೆಯುತ್ತಿರುವ ನೀರು ಬಿಡುಗಡೆಯನ್ನು ಅಕ್ಟೋಬರ್ 25ರವರೆಗೆ ವಿಸ್ತರಿಸಿ.
- ಅಕ್ಟೋಬರ್ 26ರಿಂದ ನವೆಂಬರ್ 2ರವರೆಗೆ ಕಾಲುವೆ ಸ್ಥಗಿತ ಮಾಡಿ.
- ನವೆಂಬರ್ 3ರಿಂದ 12ರವರೆಗೆ ಮತ್ತೆ 10 ದಿನ ನೀರು ಹರಿಸಲು ನಿರ್ಧರಿಸಲಾಯಿತು.

# ಕುಟುಂಬಕ್ಕೊಂದು ಸರ್ಕಾರಿ ಉದ್ಯೋಗ ಎಚ್.ಡಿ.ಕುಮಾರಸ್ವಾಮಿ ಹೊಸ ಚಿಂತನೆ

### ಮುಂದಿನ ದಿನಗಳಲ್ಲಿ ಅವಕಾಶ ಸಿಕ್ಕರೆ ನನ್ನ ಕನಸಿನ ಯೋಜನೆ ಅನುಷ್ಠಾನಗೊಳಿಸುವ ಉದ್ದೇಶ




**ಬೆಂಗಳೂರು, ಅ.16:** ಕೆಪಿಎಸ್‌ಸಿಯಲ್ಲಿ ನಡೆಯುತ್ತಿರುವ ಅಕ್ರಮ ನೇಮಕಾತಿ ಮತ್ತು ಮಿತಿಮೀರಿದ ಭ್ರಷ್ಟಾಚಾರದ ಕುರಿತಂತೆ ಮುಕ್ತ ಸಂವಾದದಲ್ಲಿ ಪಾಲ್ಗೊಂಡಿದ್ದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಈ ಸಂಸ್ಥೆಯನ್ನು ಸ್ವಚ್ಛಗೊಳಿಸುವುದು ಸೇರಿ ಭವಿಷ್ಯದಲ್ಲಿ ಉದ್ಯೋಗ ಸೃಷ್ಟಿ ಮಾಡುವ ಬಗೆ ಹಾಗೂ ಸರ್ಕಾರಿ ಉದ್ಯೋಗಗಳ ನೇಮಕದಲ್ಲಿ ತಮಗಿರುವ ಹೊಸ ಆಲೋಚನೆಯನ್ನು ಅನಾವರಣಗೊಳಿಸಿದ್ದಾರೆ.

ನಿಮ್ಮ ತಲೆಗೆ ಸ್ವಲ್ಪ ಕೆಲಸ ಕೊಡಿ ಎಂದು ಮಾತು ಶುರು ಮಾಡಿದ ಕುಮಾರಸ್ವಾಮಿ ಅವರು; ಒಮ್ಮೆ ಒಬ್ಬರು ಸರಕಾರಿ ಉದ್ಯೋಗಕ್ಕೆ ನೇಮಕವಾದರೆ ಅವರಿಗೆ 35 ವರ್ಷ ಸೇವಾವಧಿ ಇರುತ್ತದೆ. ಆದರೆ ಪ್ರತೀ ಕುಟುಂಬಕ್ಕೆ ತಲಾ ಒಂದು ಉದ್ಯೋಗ ಕಲ್ಪಿಸುವ ಉದ್ದೇಶದಿಂದ 35 ವರ್ಷದ ಸೇವಾವಧಿ ಬದಲಿಗೆ 10ರಿಂದ 15 ಅಥವಾ 20 ವರ್ಷಕ್ಕೆ ಇಳಿಸಬೇಕು. ಇಷ್ಟು ಮಿತಿಯನ್ನು ಹಾಕುವ ಮೂಲಕ ಉದ್ಯೋಗಗಳನ್ನು ಎಲ್ಲರಿಗೂ ಕೊಡುವ ಪ್ರಯತ್ನ ಮಾಡಬಹುದು ಎಂದು ಸಚಿವರು ಹೇಳಿದರು.

ಕೆಲಸದಿಂದ ನಿವೃತ್ತಿಯಾಗುವ ಉದ್ಯೋಗಿ ನಿವೃತ್ತಿ ಆದ ನಂತರ ದೊರೆಯುವ ಪಿಂಚಣಿ ಸೇರಿ ಎಲ್ಲಾ ಸೌಲಭ್ಯಗಳಿಗೆ ಅರ್ಹನಾಗಿರುತ್ತಾನೆ. ಇದರಿಂದ ಉದ್ಯೋಗ ಸಿಗದೇ ಇರುವವರಿಗೆ ಅವಕಾಶ ದೊರೆಯುತ್ತದೆ ಹಾಗೂ ನಿರುದ್ಯೋಗ ನಿವಾರಣೆಯಲ್ಲಿ ದೊಡ್ಡ ಪ್ರಯತ್ನ ಮಾಡಿದಂತೆ ಆಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮುಂದಿನ ದಿನಗಳಲ್ಲಿ ಅವಕಾಶ ಸಿಕ್ಕರೆ ನಾನು ಈ ಯೋಜನೆ ಅನುಷ್ಠಾನಕ್ಕೆ ತರುವ ಉದ್ದೇಶ ಹೊಂದಿದ್ದೇನೆ. ಯುವ ಜನರಿಗೆ ಉದ್ಯೋಗ ಕಲ್ಪಿಸುವ ದೃಷ್ಟಿಯಿಂದ ಇಂಥ ಯೋಚನೆ ಕಾರ್ಯರೂಪಕ್ಕೆ ಬಂದರೆ ಹೇಗೆ ಎಂದು ನಾನು ಆಲೋಚನೆ ಮಾಡುತ್ತಿದ್ದೇನೆ. ನನ್ನ ಪ್ರಕಾರ ಪ್ರತಿ ಮನೆಗೂ ಕನಿಷ್ಠ ಒಂದು ಸರ್ಕಾರಿ ಕೆಲಸವಾದರೂ ದೊರೆಯಬೇಕು. ನನ್ನ ಆಲೋಚನೆಯನ್ನು ಜನರ ಮುಂದೆ ಇರಿಸಿದ್ದೇನೆ. ಇದರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯಲಿ ಎಂದು ಸಚಿವರು ಹೇಳಿದರು.

ರಾಜ್ಯದಲ್ಲಿ ನವರಾತ್ರಿ ಹಬ್ಬದ ಸಂದರ್ಭವಿದು. ಈ ಒಳ್ಳೆಯ ಸಂದರ್ಭದಲ್ಲಿ ಯುವಜನರ ಭವಿಷ್ಯದ ಬಗ್ಗೆ ಆಲೋಚನೆ ಮಾಡು ತ್ತಿದ್ದೇನೆ. ಪ್ರಾಮಾಣಿಕವಾಗಿ ಚಿಂತನೆ ಮಾಡುತ್ತಿದ್ದೇನೆ. ನೀವೆಲ್ಲರೂ ನನ್ನ ಮಾತನ್ನು ನೆನಪಿಟ್ಟುಕೊಳ್ಳಿ. ಈ ಬಗ್ಗೆ ಚರ್ಚೆ ಮಾಡಿ, ಈ ಬಗ್ಗೆ ನಿಮ್ಮೆಲ್ಲರ ಅಭಿಪ್ರಾಯ ತಿಳಿಸಿ ಎಂದು ಕುಮಾರಸ್ವಾಮಿ ಹೇಳಿದರು.

**ಕೆಇಎಗೆ ಜವಾಬ್ದಾರಿ ಕೊಟ್ಟರೂ ಉಪಯೋಗವಿಲ್ಲ**

ಕೆಪಿಎಸ್‌ಸಿಯಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಜವಾಬ್ದಾರಿ ಕೊಟ್ಟರು ಯಾವುದೇ ಉಪಯೋಗ ಆಗುವುದಿಲ್ಲ. ಅಲ್ಲಿಗೂ ಗ್ಯಾನೆಂದ್ರ ಅವರಂತಹ ಅಪ್ರಾಮಾಣಿಕ ಅಧಿಕಾರಿಗಳು ಬಂದರೆ ಏನಾಗುತ್ತದೆ? ಸರ್ಕಾರದ ಮನಸ್ಥಿತಿ ಬದಲಾಗದೇ ಇರುವುದರಿಂದ ಅಧಿಕಾರಿಗಳು ಕೂಡ ಭ್ರಷ್ಟರಾಗುತ್ತಿದ್ದಾರೆ. ಇಂತಹ ವ್ಯವಸ್ಥೆಯಲ್ಲಿ ಬಡ ಮತ್ತು ಅರ್ಹ ಅಭ್ಯರ್ಥಿಗಳಿಗೆ ಅವಕಾಶಗಳು ಸಿಗುತ್ತಿಲ್ಲ. ಕೆಪಿಎಸ್ಸಿಯಲ್ಲಿ ಕೂತಿರುವ ಸದಸ್ಯರು, ಅಧ್ಯಕ್ಷರು, ಅಧಿಕಾರಿಗಳು ಮತ್ತು ಅವರ ಜೊತೆ ಸಂಬಂಧ ಹೊಂದಿರುವ ದಲ್ಲಾಳಿಗಳು ಇಡೀ ವ್ಯವಸ್ಥೆಯನ್ನು ಹಾಳು ಮಾಡುತ್ತಿದ್ದಾರೆ ಎಂದು ಅಭ್ಯರ್ಥಿಗಳು ಆರೋಪಿಸಿದರು.

ಇನ್ನೂ ಅನೇಕ ಅಭ್ಯರ್ಥಿಗಳು ಸಚಿವ ಕುಮಾರಸ್ವಾಮಿ ಅವರಿಗೆ ತಮ್ಮ ಅಳಲನ್ನು ತೋಡಿಕೊಂಡರು. ಜತೆಗೆ ಪ್ರಶ್ನೆಗಳನ್ನು ಕೇಳಿ, ಸಮರ್ಪಕ ಉತ್ತರಗಳನ್ನು ಕೂಡ ಪಡೆದುಕೊಂಡರು. ಕೆಪಿಎಸ್ಸಿ ಅಕ್ರಮದ ಕುರಿತಂತೆ ನಾವೆಲ್ಲರೂ ಕೇವಲ ಈ ಚರ್ಚೆಯ ಮೂಲಕ ವಿರಮಿಸುವುದು ಬೇಡ. ಮುಂದಿನ ದಿನಗಳಲ್ಲಿ ಬಹುದೊಡ್ಡ ಹೋರಾಟಗಳನ್ನು ಸಂಘಟಿಸೋಣ. ನಾನು ನಿಮ್ಮ ಜೊತೆ ನಿಲ್ಲುತ್ತೇನೆ ಎಂದು ಸಚಿವರು ಭರವಸೆ ನೀಡಿದರು.

ಭವಿಷ್ಯದಲ್ಲಿ ನೀವು ಹೆದರಬೇಕಾಗಿಲ್ಲ. ನಿಮ್ಮ ಕಾಳಜಿ ಮತ್ತು ಕನಸುಗಳನ್ನು ಗೌರವಿಸುವ ನಾಯಕರಿಗೆ ಮಣೆ ಹಾಕಿ. ನಿಮ್ಮ ಭಾವನೆಗಳಿಗೆ ದನಿಯಾಗುವ ವ್ಯಕ್ತಿಗಳಿಗೆ ಅವಕಾಶ ನೀಡಿ ಎಂದು ಕುಮಾರಸ್ವಾಮಿ ಅವರು ಮನವಿ ಮಾಡಿದರು.

# ಮೊಬೈಲ್ ಹಿಡಿದವರೆಲ್ಲಾ ಜರ್ನಲಿಸ್ಟ್ ಆಗಲು ಸಾಧ್ಯವೇ?

## ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪತ್ರಿಕೋದ್ಯಮದ ಗಡಿಗಳ ಬಗ್ಗೆ ಸಿಜೆಐ ಪೀಠ ಮಹತ್ವದ ಪ್ರಶ್ನೆ

**ನವದೆಹಲಿ, ಅ.16:** ಪ್ರತಿಯೊಬ್ಬರೂ ಪತ್ರಕರ್ತರೆಂದು ಹೇಳಿಕೊಂಡರೆ ಹಲವು ಸಮಸ್ಯೆಗಳು ಎದುರಾಗಬಹುದು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಪ್ರತಿಭಟನೆಗಳನ್ನು ವರದಿ ಮಾಡುವ ಸ್ವತಂತ್ರ ಪತ್ರಕರ್ತರು ಮತ್ತು ಸಾಮಾಜಿಕ ಮಾಧ್ಯಮದ ಕಂಟೆಂಟ್ ಕ್ರಿಯೇಟರ್‌ಗಳಿಗೆ ರಕ್ಷಣೆ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ವೇಳೆ ನ್ಯಾಯಾಲಯ ಈ ವಿಷಯವನ್ನು ಪ್ರಸ್ತಾಪಿಸಿದೆ.

ಪ್ರತಿಭಟನೆಗಳನ್ನು ವರದಿ ಮಾಡುವ ಸ್ವತಂತ್ರ ಪತ್ರಕರ್ತರಿಗೆ ಪೊಲೀಸರು ಅಡ್ಡಿಪಡಿಸಬಾರದು ಎಂದು ಕೋರಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಿತು. ಹಿರಿಯ ವಕೀಲೆ ಇಂದಿರಾ ಜೈಸಿಂಗ್, ಮಾಧ್ಯಮ ಸಂಸ್ಥೆಗಳ ಗುರುತಿನ ಚೀಟಿ ಹೊಂದಿರುವ ಪತ್ರಕರ್ತರು ತಮ್ಮ ವೃತ್ತಿಪರ ಕೆಲಸ ಮಾಡಲು ಅವಕಾಶ ನೀಡುವಂತೆ ಪೊಲೀಸರಿಗೆ ಮಾರ್ಗಸೂಚಿ ರೂಪಿಸಬೇಕು ಎಂದು ವಾದಿಸಿದರು. ಈ ವೇಳೆ, ಎಲ್ಲರೂ



ಪತ್ರಕರ್ತರಾಗಲು ಆರಂಭಿಸಿದರೆ ಸಮಸ್ಯೆಗಳು ಎದುರಾಗಬಹುದು ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

ನ್ಯಾಯಮೂರ್ತಿ ಜೋಯ್‌ಮಾಲ್ಯ ಬಾಗ್ಚಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬ ನಾಗರಿಕನಿಗೂ ಪತ್ರಕರ್ತನಾಗುವ ಹಕ್ಕು ನೀಡುತ್ತದೆಯೇ ಎಂಬುದನ್ನು ಪರಿಶೀಲಿಸಬೇಕಿದೆ ಎಂದರು. ಮಾನ್ಯತೆ ಪಡೆದ ಪತ್ರಕರ್ತರು, ಮಾಧ್ಯಮ ಸಂಸ್ಥೆಗಳಲ್ಲಿ ಕೆಲಸ ಮಾಡುವವರು, ಸ್ವತಂತ್ರ ಪತ್ರಕರ್ತರು ಮತ್ತು ಸಾಮಾಜಿಕ ಮಾಧ್ಯಮದ ಕಂಟೆಂಟ್ ಕ್ರಿಯೇಟರ್‌ಗಳಿಗೆ ಯಾವ ರೀತಿಯ ರಕ್ಷಣೆ ನೀಡಬೇಕು ಎಂಬುದನ್ನು ನ್ಯಾಯಾಲಯ ಪರಿಗಣಿಸಬೇಕಿದೆ.

**ಸಿಜೆಐ ಸೂರ್ಯಕಾಂತ್ ಎಚ್ಚರಿಕೆ:**

ಈ ವಾದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನಾವು ಈ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಪ್ರತಿಯೊಬ್ಬರೂ ತಾವೇ ಪತ್ರಕರ್ತರೆಂದು ಹೇಳಿಕೊಳ್ಳಲು ಶುರುಮಾಡಿದರೆ ಅದು ಎಲ್ಲರಿಗೂ ತಲೆನೋವಾಗಿ ಪರಿಣಮಿಸುತ್ತದೆ ಎಂದರು. ಕೇಂದ್ರ ಸರ್ಕಾರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಇಂದಿನ ಡಿಜಿಟಲ್ ಕಾಲದಲ್ಲಿ ಕೈಯಲ್ಲೊಂದು ಸ್ಮಾರ್ಟ್‌ಫೋನ್ ಇದ್ದರೆ ಸಾಕು, ತಾವೇ ಪತ್ರಕರ್ತರೆಂದು ಹೇಳಿಕೊಳ್ಳುತ್ತಿದ್ದಾರೆ. ಕೇವಲ ಲೈಕ್ಸ್, ವ್ಯೂಸ್ ಮತ್ತು ಹಣ ಗಳಿಸಲು ಘಟನೆಗಳನ್ನು ತಿರುಚಿ ಸಂವೇದನಾಶೀಲ ರೀಲ್ಸ್‌ಗಳನ್ನು ಮಾಡುತ್ತಿದ್ದಾರೆ. ಇಂಥವರಿಗೂ ಪತ್ರಕರ್ತರ ಸ್ಥಾನಮಾನ ಮತ್ತು ರಕ್ಷಣೆ ನೀಡಲು ಸಾಧ್ಯವಿಲ್ಲ. ಮಹಿಳಾ ಪತ್ರಕರ್ತರ ಘನತೆ ಕಾಪಾಡುವಷ್ಟೇ ಸಮಾನವಾಗಿ ಕರ್ತವ್ಯದಲ್ಲಿರುವ ಮಹಿಳಾ ಪೊಲೀಸ್ ಸಿಬ್ಬಂದಿಯ ಸುರಕ್ಷತೆಯನ್ನೂ ರಕ್ಷಿಸಬೇಕು ಎಂದು ವಾದಿಸಿದರು.

# ದೆಹಲಿ ರಾಮಲೀಲಾದಲ್ಲಿ ರಾವಣನ ಜೊತೆ 30 ಅಡಿ ಎತ್ತರದ ಜಿರಳೆ ಪ್ರತಿಕೃತಿ ದಹನಕ್ಕೆ ನಿರ್ಧಾರ

**ಸ್ವಚ್ಛ ಭಾರತ, ಸ್ವಚ್ಛ ದೆಹಲಿ ಅಭಿಯಾನಕ್ಕೆ ಒತ್ತು; ರಾಜಕೀಯ ಉದ್ದೇಶವಿಲ್ಲ ಎಂದ ಆಯೋಜಕರು**

**ನವದೆಹಲಿ, ಅ.16:** ದೆಹಲಿಯ ರಾಮಲೀಲಾ ಕಾರ್ಯಕ್ರಮದಲ್ಲಿ ಈ ಬಾರಿ ರಾವಣ, ಕುಂಭಕರ್ಣ ಮತ್ತು ಮೇಘನಾದರ ಪ್ರತಿಕೃತಿಗಳ ಜೊತೆಗೆ 30 ಅಡಿ ಎತ್ತರದ ಜಿರಳೆಯ ಪ್ರತಿಕೃತಿಯನ್ನೂ ದಹಿಸಲು ನಿರ್ಧರಿಸಲಾಗಿದೆ. ದೆಹಲಿಯ ಪೀತಂಪುರದಲ್ಲಿ ರಾಮಲೀಲಾ ಆಯೋಜಿಸುವ ಶ್ರೀ ಕೇಶವ ರಾಮಲೀಲಾ ಸಮಿತಿಯು ಈ ವಿನೂತನ ನಿರ್ಧಾರ ಕೈಗೊಂಡಿದೆ.

ಜಿರಳೆಯು ಕೊಳಕು ಮತ್ತು ಅನೈರ್ಮಲ್ಯದ ಸಂಕೇತವಾಗಿದೆ. ಮನೆಗಳು, ಸುತ್ತಮುತ್ತಲಿನ ಪರಿಸರ ಹಾಗೂ ಸಮಾಜದಲ್ಲಿನ ಕೊಳಕನ್ನು ತೊಡೆದುಹಾಕುವ ಸಂದೇಶ



ಸಾರುವುದು ಈ ನಿರ್ಧಾರದ ಉದ್ದೇಶ ಎಂದು ಸಮಿತಿಯ ಅಧ್ಯಕ್ಷ ಹಾಗೂ ಬಿಜೆಪಿ ಶಾಸಕ ಅಶೋಕ್ ಗೋಯಲ್ ತಿಳಿಸಿದ್ದಾರೆ. ಸ್ವಚ್ಛ ಭಾರತ ಮತ್ತು ಸ್ವಚ್ಛ ದೆಹಲಿ ಅಭಿಯಾನಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ವಿಜಯದಶಮಿಯು ಕೆಟ್ಟದ್ದರ ವಿರುದ್ಧ ಒಳ್ಳೆಯದರ ವಿಜಯವನ್ನು ಸಾರುತ್ತದೆ. ಇದೇ ಸಂದೇಶವನ್ನು ಬಲಪಡಿಸುವ ಉದ್ದೇಶದಿಂದ ಜಿರಳೆಯ ಪ್ರತಿಕೃತಿ ದಹಿಸಲು ನಿರ್ಧರಿಸಲಾಗಿದೆ. ಈ ನಿರ್ಧಾರದ ಹಿಂದೆ ಯಾವುದೇ ರಾಜಕೀಯ ಉದ್ದೇಶವಿಲ್ಲ ಎಂದು ಆಯೋಜಕರು ಸ್ಪಷ್ಟಪಡಿಸಿದ್ದಾರೆ. ರಾವಣನ ಸೇನೆಯಲ್ಲಿನ ಅಸುರರ ಪ್ರತಿನಿಧಿಯಾಗಿಯೂ ಜಿರಳೆಯ ಪ್ರತಿಕೃತಿಯನ್ನು ಪ್ರದರ್ಶಿಸಲಾಗುತ್ತದೆ ಎಂದು ಸಮಿತಿಯ ಅಧ್ಯಕ್ಷರು ತಿಳಿಸಿದ್ದಾರೆ.

ದೆಹಲಿಯಲ್ಲಿ ಸಿಜೆಪಿ ನಡೆಸುತ್ತಿರುವ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಈ ನಿರ್ಧಾರ ಗಮನ ಸೆಳೆದಿದೆ. ಈ ಸಂಘಟನೆಯು ಈ ಹಿಂದೆ ಕೇಂದ್ರದ ಮಾಜಿ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ವಿರುದ್ಧ ಪ್ರತಿಭಟನೆ ನಡೆಸಿತ್ತು. ಇದೀಗ ಸಿಇಸಿ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪದೊಂದಿಗೆ ಪ್ರತಿಭಟನೆ ನಡೆಸುತ್ತಿದೆ. ಈ ನಡುವೆ ಈ ಬೆಳವಣಿಗೆ ಕುತೂಹಲಕಾರಿಯಾಗಿದೆ.

# ಕನಾಟ್ ಪ್ಲೇಸ್‌ನಲ್ಲಿ ವ್ಯಾಪಾರ ಬಂದ್ ಆತಂಕ ಎನ್‌ಡಿಎಂಸಿಗೆ ಸುಪ್ರೀಂ ಕೋರ್ಟ್ ಎಚ್ಚರಿಕೆ

**ನವದೆಹಲಿ, ಅ.16: ದೆಹಲಿಯ ಕನಾಟ್** ಪ್ಲೇಸ್‌ನ ಸೆಂಟ್ರಲ್ ಪಾರ್ಕ್ ಮುಚ್ಚುವ ಮೂಲಕ ವ್ಯಾಪಾರ ಚಟುವಟಿಕೆಗಳಿಗೆ ಅಡ್ಡಿಯಾಗಿರುವ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಗಂಭೀರ ಕಳವಳ ವ್ಯಕ್ತಪಡಿಸಿದೆ. ಕಾಕ್ರೋಚ್ ಜನತಾ ಪಾರ್ಟಿ ಆಯೋಜಿಸಲು ಉದ್ದೇಶಿಸಿರುವ ತಿರಂಗಾ ಪ್ರತಿಭಟನೆಯ ಹಿನ್ನೆಲೆಯಲ್ಲಿ ನವದೆಹಲಿ ನಗರಸಭೆ ಸೆಂಟ್ರಲ್ ಪಾರ್ಕ್ ಅನ್ನು ಎರಡು ದಿನ ಕಾಲ ಮುಚ್ಚಲು ನಿರ್ಧರಿಸಿದೆ. ಈ ನಿರ್ಬಂಧದಿಂದ ವ್ಯಾಪಾರಿಗಳಿಗೆ ಕಾನೂನುಬಾಹಿರವಾಗಿ ನಷ್ಟ ಉಂಟಾದರೆ, ಪರಿಹಾರ ಒದಗಿಸಲು ನ್ಯಾಯಾಲಯ ತನ್ನ ಅಧಿಕಾರ ಬಳಸಲಿದೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಲ್ಯ ಬಾಗ್ಚಿ ಅವರ ಪೀಠ ಎಚ್ಚರಿಕೆ ನೀಡಿದೆ.

ವ್ಯಾಪಾರಿಗಳು ಸಲ್ಲಿಸಿರುವ ಅರ್ಜಿ ವಿಚಾರಣೆಯ ವೇಳೆ, ವ್ಯಾಪಾರಿಗಳ ಪರ ವಕೀಲ ಜೈ ಅನಂತ್ ದೇಹದ್ರಾಯ್ ಅವರು ದೆಹಲಿ ಕಿರಾಣಿ ಸಮಿತಿ ಹಾಗೂ ದೆಹಲಿ ಐರನ್ ಆಂಡ್ ಹಾರ್ಡ್‌ವೇರ್ ಮರ್ಚೆಂಟ್ಸ್ ಅಸೋಸಿಯೇಷನ್ ಪರವಾಗಿ ವಿಷಯವನ್ನು ನ್ಯಾಯಾಲಯದ ಗಮನಕ್ಕೆ ತಂದರು. ಎನ್‌ಡಿಎಂಸಿ ಗುರುವಾರ ರಾತ್ರಿ ಹೊರಡಿಸಿದ ಸೂಚನೆಯಿಂದ ಸೆಂಟ್ರಲ್ ಪಾರ್ಕ್ ಮುಚ್ಚಲ್ಪಟ್ಟಿದ್ದು, ಮಧ್ಯ ದೆಹಲಿಯ ವ್ಯಾಪಾರ ವಹಿವಾಟಿನ ಮೇಲೆ ಗಂಭೀರ ಪರಿಣಾಮ ಉಂಟಾಗಲಿದೆ ಎಂದು ಅವರು ವಾದಿಸಿದರು. ಪ್ರತಿಭಟನೆಯಿಂದ ಪ್ರತಿದಿನ ಸುಮಾರು 200 ಕೋಟಿ ರೂಪಾಯಿ ಮೌಲ್ಯದ ವ್ಯಾಪಾರಕ್ಕೆ ಅಡಚಣೆಯಾಗಬಹುದು ಎಂದೂ ತಿಳಿಸಿದರು.

**ಸಣ್ಣ ವ್ಯಾಪಾರಿಗಳ ಜೀವನೋಪಾಯದ ಬಗ್ಗೆ ಕಳವಳ**

ಹಬ್ಬಗಳ ಋತು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ವ್ಯಾಪಾರಕ್ಕೆ ತೊಂದರೆಯಾದರೆ ಸಣ್ಣ ಅಂಗಡಿಕಾರರು, ಬೀದಿ ವ್ಯಾಪಾರಿಗಳು ಹಾಗೂ ಇತರ ವ್ಯಾಪಾರಸ್ಥರ ಜೀವನೋಪಾಯಕ್ಕೆ ಹೊಡೆತ ಬೀಳಲಿದೆ ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿತು. ಎಲ್ಲರೂ ವಿವೇಚನೆಯಿಂದ ನಡೆದುಕೊಳ್ಳುತ್ತಾರೆ ಎಂಬ ಆಶಯವಿದೆ. ಸಣ್ಣ ವ್ಯಾಪಾರಿಗಳು ಈ ದಿನಗಳಲ್ಲಿ ಗಳಿಸುವ ಆದಾಯದ ಮೇಲೆಯೇ ಅವಲಂಬಿತರಾಗಿದ್ದಾರೆ. ಇದರಿಂದ ಅವರ ಕುಟುಂಬಗಳು ಎದುರಿಸಬಹುದಾದ ಕಷ್ಟಗಳು ನಮಗೆ ತಿಳಿದಿವೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅಭಿಪ್ರಾಯಪಟ್ಟರು.

ನ್ಯಾಯಮೂರ್ತಿ ಜಾಯ್‌ಮಲ್ಯ ಬಾಗ್ಚಿ ಅವರು ಪ್ರತಿಭಟನೆ ನಡೆಸುವವರ ಹಕ್ಕು, ವ್ಯಾಪಾರ ಮಾಡುವವರ ಜೀವನೋಪಾಯ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಅಗತ್ಯ ಇವೆಲ್ಲವೂ ಪರಸ್ಪರ ಸಂಬಂಧ ಹೊಂದಿವೆ. ಯಾರೋ ಪ್ರತಿಭಟನೆ ನಡೆಸಲು ಬಯಸುತ್ತಾರೆ, ಇನ್ನು ಕೆಲವರು ವ್ಯಾಪಾರ ಮಾಡಲು ಬಯಸುತ್ತಾರೆ, ಮತ್ತೊಂದೆಡೆ ಕಾನೂನು ಸುವ್ಯವಸ್ಥೆ ಕಾಪಾಡಬೇಕಿದೆ. ಈ ಎಲ್ಲ ವಿಚಾರಗಳನ್ನು ಒಟ್ಟಾಗಿ ಪರಿಗಣಿಸಬೇಕು ಎಂಬುದು ನ್ಯಾಯಪೀಠದ ಅಭಿಪ್ರಾಯವಾಗಿತ್ತು.

**ಅಕ್ಟೋಬರ್ 26 ಅಥವಾ 27ರಂದು ಮುಂದಿನ ವಿಚಾರಣೆ**

ಎನ್‌ಡಿಎಂಸಿ ವಿಧಿಸಿರುವ ನಿರ್ಬಂಧಗಳು ಅಗತ್ಯಕ್ಕಿಂತ ಹೆಚ್ಚು ಕಠಿಣವಾಗಿವೆ ಎಂದು ನ್ಯಾಯಾಲಯಕ್ಕೆ ಕಂಡುಬಂದರೆ, ಸಾರ್ವಜನಿಕ ಕಾನೂನಿನ ಅಡಿಯಲ್ಲಿ ಪರಿಹಾರ ನೀಡುವ ಅಧಿಕಾರವನ್ನು ಬಳಸಬಹುದು ಎಂದು ನ್ಯಾಯಮೂರ್ತಿ ಬಾಗ್ಚಿ ಸ್ಪಷ್ಟಪಡಿಸಿದರು. ವ್ಯಾಪಾರಕ್ಕೆ ನಷ್ಟ ಉಂಟಾಗಿರುವುದು ಕಾನೂನುಬಾಹಿರ ಎಂದು ಸಾಬೀತಾದರೆ, ಸಂವಿಧಾನಾತ್ಮಕ ಪರಿಹಾರದ ತತ್ವಗಳ ಅನ್ವಯ ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ ಎಂದು ಹೇಳಿದರು. ಆದರೆ, ತಕ್ಷಣದ ವಿಚಾರಣೆಗೆ ಸಂಬಂಧಿಸಿದ ಮನವಿಯನ್ನು ನ್ಯಾಯಾಲಯ ಪರಿಗಣಿಸಲಿಲ್ಲ. ದಸರಾ ರಜೆಯ ಬಳಿಕ ಅಕ್ಟೋಬರ್ 26 ಅಥವಾ 27ರಂದು ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡಲು ಒಪ್ಪಿಗೆ ಸೂಚಿಸಿತು. ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಶುಕ್ರವಾರ ಸಂಜೆ 5 ಗಂಟೆಗೆ ಕನಾಟ್ ಪ್ಲೇಸ್‌ನ ಸೆಂಟ್ರಲ್ ಪಾರ್ಕ್‌ನಲ್ಲಿ ತ್ರಿವರ್ಣ ಧ್ವಜದೊಂದಿಗೆ ಪ್ರತಿಭಟನೆ ನಡೆಸಲು ಕರೆ ನೀಡಿದ್ದರು.

# ಲಡಾಖ್ ನಾಯಕರ ಜತೆ ಕೇಂದ್ರದ ಮಾತುಕತೆ ಅಪೂರ್ಣ: ದೆಹಲಿಯಲ್ಲಿ ಅ.22ಕ್ಕೆ ಮತ್ತೆ ಸಭೆ

ನವದೆಹಲಿ, ಅ.16: ಕೇಂದ್ರ ಗೃಹ ಸಚಿವಾಲಯ ಹಾಗೂ ಲಡಾಖ್‌ನ ಪ್ರಾತಿನಿಧಿಕ ಸಂಸ್ಥೆಗಳ ನಡುವೆ ಲೇಹ್‌ನಲ್ಲಿ ಗುರುವಾರ ನಡೆದ ಮಹತ್ವದ ಸಭೆಯಲ್ಲಿ ಅಂತಿಮ ನಿರ್ಧಾರ ಅಥವಾ ಪ್ರಗತಿ ಸಾಧ್ಯವಾಗಿಲ್ಲ. ಹೀಗಾಗಿ, ಎರಡೂ ಕಡೆಗಳ ನಡುವಿನ ಮುಂದಿನ ಸುತ್ತಿನ ಮಾತುಕತೆಯನ್ನು ಅಕ್ಟೋಬರ್ 22ರಂದು ನವದೆಹಲಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಲೇಹ್ ಉನ್ನತ ಮಂಡಳಿ ಮತ್ತು ಕಾರ್ಗಿಲ್ ಡೆಮಾಕ್ರಟಿಕ್ ಅಲಯನ್ಸ್ ಪ್ರತಿನಿಧಿಗಳೊಂದಿಗೆ ಕೇಂದ್ರ ಗೃಹ ಸಚಿವಾಲಯದ ಹಿರಿಯ ಅಧಿಕಾರಿಗಳ ತಂಡ ಸುದೀರ್ಘ ಚರ್ಚೆ ನಡೆಸಿತು. ಈ ಸಭೆಯಲ್ಲಿ ಗೃಹ ಸಚಿವಾಲಯವು ಸುಮಾರು 15 ರಿಂದ 20 ಪುಟಗಳ ಕರಡು ಪ್ರಸ್ತಾವನೆಯನ್ನು ಪವರ್ ಪಾಯಿಂಟ್ ಪ್ರಸ್ತುತಿಯೊಂದಿಗೆ ನೀಡಿದೆ. ಇದೇ ವೇಳೆ, ಲಡಾಖ್ ನಾಯಕರು ಸಹ ತಮ್ಮ ಬೇಡಿಕೆಗಳನ್ನೊಳಗೊಂಡ ಸ್ವಂತ ಕರಡನ್ನು ಸರ್ಕಾರಕ್ಕೆ ಸಲ್ಲಿಸಿದರು.

ಆದರೆ, ಗೃಹ ಸಚಿವಾಲಯ ನೀಡಿದ ಪ್ರಸ್ತಾವನೆಯು ಲಡಾಖ್ ಜನರ ಆಕಾಂಕ್ಷೆಗಳಿಗೆ ಸೂಕ್ತವಾಗಿಲ್ಲ, ಎರಡೂ ಪ್ರಸ್ತಾವನೆಗಳ ನಡುವೆ ಭಾರಿ ಅಂತರವಿದೆ ಎಂದು ಎಲ್‌ಎಬಿ ಮತ್ತು ಕೆಡಿಎ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ, ಲಡಾಖ್‌ಗೆ ಪೂರ್ಣ ಪ್ರಮಾಣದ ಶಾಸನಸಭೆ ನೀಡುವುದು, 371–ಕೆ ವಿಧಿಯ ಮಾದರಿಯಲ್ಲಿ ಸಂವಿಧಾನಾತ್ಮಕ ರಕ್ಷಣೆ ಮತ್ತು ಸ್ಥಳೀಯರಿಗೆ ಹೆಚ್ಚಿನ ಅಧಿಕಾರ ನೀಡುವ ವಿಚಾರಗಳಲ್ಲಿ ಸಮ್ಮತಿ ಮೂಡಿಲ್ಲ.

ಮಾತುಕತೆ ಬಳಿಕ ಮಾತನಾಡಿದ ಎಲ್‌ಎಬಿ ಅಧ್ಯಕ್ಷ ಚೆರಿಂಗ್ ದೋರ್ಜೆ ಲಕ್ರುಕ್ ಮತ್ತು ಸಾಮಾಜಿಕ ಹೋರಾಟಗಾರ ಸೋನಮ್ ವಾಂಗ್ಚುಕ್, ಸದ್ಯದ ಪ್ರಸ್ತಾವನೆ ಅಸಮಾಧಾನಕರ 'ವಾಗಿದೆ. ಆದರೆ ಚರ್ಚೆಯನ್ನು ನಾವು ವಿಫಲವೆಂದು ಪರಿಗಣಿಸದೆ, ಸಂಭಾಷಣೆಯ ಮುಂದುವರಿದ ಭಾಗವಾಗಿ ನೋಡುತ್ತಿದ್ದೇವೆ. ಅಕ್ಟೋಬರ್ 22 ರಂದು ದೆಹಲಿಯಲ್ಲಿ ನಡೆಯಲಿರುವ ಸಭೆಯಲ್ಲಿ ಗೃಹ ಸಚಿವಾಲಯವು ಮತ್ತೊಂದು ಪರಿಷ್ಕೃತ ಕರಡನ್ನು ಸಲ್ಲಿಸುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ.

# ವೈಎಸ್‌ಆರ್ ಕಾಂಗ್ರೆಸ್–ಟಿಡಿಪಿ ನಡುವೆ ಘರ್ಷಣೆ

**ಅಮರಾವತಿ, ಅ.16:** ಆಂಧ್ರಪ್ರದೇಶದ ಪುಂಗನೂರು ಪುರಸಭೆಯ ಬಳಿ ಹೈಡ್ರಾಮಾ ನಡೆದಿದೆ. ಯುವಜನ ಶ್ರಮಿಕ ರೈತು ಕಾಂಗ್ರೆಸ್ ಪಾರ್ಟಿ (ವೈಎಸ್‌ಆರ್‌ಸಿಪಿ) ವಾಹನಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿ, ಕಲ್ಲು ತೂರಾಟ, ಕಬ್ಬಿಣದ ರಾಡ್‌ನಿಂದ ದಾಳಿ ಮಾಡಿದ್ದಾರೆ ಎನ್ನಲಾಗಿದೆ. ತೆಲುಗು ದೇಶಂ ಪಕ್ಷ (ಟಿಡಿಪಿ) ಬೆಂಬಲಿಗರೇ ಈ ಕೃತ್ಯವೆಸಗಿದ್ದಾರೆ ಎಂದು ಸಂಸದ ಮಿಥುನ್ ರೆಡ್ಡಿ ಗಂಭೀರ ಆರೋಪ ಮಾಡಿದ್ದಾರೆ ಆಂಧ್ರಪ್ರದೇಶದ ಪುಂಗನೂರು ಪುರಸಭೆಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ನಾಮಪತ್ರ ಸಲ್ಲಿಕೆ ವೇಳೆ ಗುರುವಾರ ವೈಎಸ್‌ಆರ್‌ಸಿಪಿ ಲೋಕಸಭೆಯ ಫ್ಲೋರ್ ಲೀಡರ್ ಹಾಗೂ ರಾಜಂಪೇಟೆ ಸಂಸದ ಪಿ.ವಿ. ಮಿಥುನ್ ರೆಡ್ಡಿ ಅವರ ಬೆಂಗಾವಲು ಪಡೆ ಮೇಲೆ ಟಿಡಿಪಿ ಕಾರ್ಯಕರ್ತರು ಮಾರಕ ದಾಳಿ ನಡೆಸಿದ್ದಾರೆ ಎಂದು ವೈಎಸ್‌ಆರ್‌ಸಿಪಿ ಗಂಭೀರ ಆರೋಪ ಮಾಡಿದೆ. ಪುಂಗನೂರು ಕ್ಷೇತ್ರದಲ್ಲಿ ಸಂಸದ ಮಿಥುನ್ ರೆಡ್ಡಿ ವೈಎಸ್‌ಆರ್‌ಸಿಪಿ ಅಭ್ಯರ್ಥಿಗಳೊಂದಿಗೆ



ನಾಮಪತ್ರ ಸಲ್ಲಿಸಲು ತೆರಳುತ್ತಿದ್ದ ವೇಳೆ, ಟಿಡಿಪಿ ಕಾರ್ಯಕರ್ತರು ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿ, ಕೋಲು ಹಾಗೂ ಕಬ್ಬಿಣದ ರಾಡ್ಗಳಿಂದ ದಾಳಿ ನಡೆಸಿದ್ದಾರೆ ಎನ್ನಲಾಗಿದೆ.

ಎಕ್ಸ್‌ನಲ್ಲಿ ವೈರಲ್ ಆದ ವಿಡಿಯೋ ಪ್ರಕಾರ, ಕಚೇರಿಯೊಂದರ ಮುಂದೆ ಗುಂಪು ಗಲಾಟೆ ನಡೆಸಿದೆ. ಮತ್ತೊಂದು ಕಡೆ..ಹೊರಗಡೆ ನಿಂತಿದ್ದ ದುಬಾರಿ ಕಾರುಗಳಿಗೆ ಬೆಂಕಿ ಹಚ್ಚಲಾಗಿದೆ. ಪೊಲೀಸರು ದಾಳಿ ಕೋರರನ್ನು ತಡೆಯಲು ಯತ್ನಿಸಿರುವುದು ವಿಡಿಯೋದಲ್ಲಿ ಇದೆ.

ಎಸ್‌ಆರ್‌ಸಿಪಿ ಅಭ್ಯರ್ಥಿಗಳು ನಾಮಪತ್ರ ಕೇಂದ್ರಕ್ಕೆ ತಲುಪದಂತೆ ಟಿಡಿಪಿ ನಾಯಕರು ಮತ್ತು ಕಾರ್ಯಕರ್ತರು ಬೆಂಗಾವಲು ಪಡೆಯನ್ನು ತಡೆದು, ವಾಹನಗಳನ್ನು ಧ್ವಂಸಗೊಳಿಸಿದ್ದಾರೆ. ಸ್ಥಳದಲ್ಲಿದ್ದ ಪೊಲೀಸರು ದಾಳಿಕೋರರನ್ನು ತಡೆಯುವಲ್ಲಿ ವಿಫಲರಾಗಿದ್ದಾರೆ ಎಂದು ಮಿಥುನ್ ರೆಡ್ಡಿ ಆರೋಪಿಸಿದರು. ತಿರುಪತಿ ವೈಎಸ್‌ಆರ್‌ಸಿಪಿ ಸಂಸದ ಡಾ. ಎಂ. ಗುರುಮೂರ್ತಿ ಅವರು ಮಿಥುನ್ ರೆಡ್ಡಿ ಅವರ ಮೇಲಿನ ಹಲ್ಲೆ ಯತ್ನವನ್ನು ತೀವ್ರವಾಗಿ ಖಂಡಿಸಿದ್ದು, ವಿರೋಧ ಪಕ್ಷದ ಅಭ್ಯರ್ಥಿಗಳ ಧ್ವನಿ ಅಡಗಿಸಲು ಹಾಗೂ ಚುನಾವಣಾ ಪ್ರಕ್ರಿಯೆಯನ್ನು ಅಸ್ತವ್ಯಸ್ತಗೊಳಿಸಲು ಟಿಡಿಪಿ ಸರ್ಕಾರ ತನ್ನ ಕಾರ್ಯಕರ್ತರಿಗೆ ಹಿಂಸಾಚಾರ ನಡೆಸಲು ಅವಕಾಶ ನೀಡಿದೆ ಎಂದು ಆರೋಪಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ತಕ್ಷಣ ಕ್ರಿಮಿನಲ್ ಪ್ರಕರಣ ದಾಖಲಿಸಿ ಬಂಧಿಸಬೇಕು, ಕರ್ತವ್ಯಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಅಭ್ಯರ್ಥಿಗಳಿಗೆ ಸೂಕ್ತ ರಕ್ಷಣೆ ನೀಡಿ ಸುರಕ್ಷಿತವಾಗಿ ನಾಮಪತ್ರ ಸಲ್ಲಿಸಲು ವ್ಯವಸ್ಥೆ ಕಲ್ಪಿಸಬೇಕೆಂದು ಮಾಜಿ ಟಿಟಿಡಿ ಅಧ್ಯಕ್ಷ ಭೂಮನ ಕರುಣಾಕರ ರೆಡ್ಡಿ ರಾಜ್ಯ ಚುನಾವಣಾ ಆಯೋಗವನ್ನು ಆಗ್ರಹಿಸಿದ್ದಾರೆ.




ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ, ಶುಕ್ರವಾರ ನವದೆಹಲಿಯ ಇಂಡಿಯಾ ಹ್ಯಾಬಿಟ್ ಸೆಂಟರ್‌ನಲ್ಲಿರುವ ಸ್ಟೈನ್ ಆಡಿಟೋರಿಯಂನಲ್ಲಿ, ವಿಕಸಿತ ಭಾರತದತ್ತ ಹಾದಿಗಳು (Pathways to Viksit Bharat) ಎಂಬ ವಿಷಯದ ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

# ಭಾರತ–ಅಮೆರಿಕ ಸಭೆ: ಕೇಂದ್ರಕ್ಕೆ ರಾಹುಲ್ ಗಾಂಧಿ ಪ್ರಶ್ನೆ

**ನವದೆಹಲಿ, ಅ.16:** ಮುಂದಿನ ವಾರ ಮುಂಬೈನಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರು ಭಾರತ ಸರ್ಕಾರದ ಅಧಿಕಾರಿಗಳೊಂದಿಗೆ ನಡೆಸಲು ಉದ್ದೇಶಿಸಿರುವ ಸಭೆಯ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸರ್ಕಾರಕ್ಕೆ ಪ್ರಶ್ನೆಗಳನ್ನು ಕೇಳಿದ್ದಾರೆ.ತಮ್ಮ ಎಕ್ಸ್‌ನಲ್ಲಿ ಶುಕ್ರವಾರ ಮಾಹಿತಿ ಹಂಚಿಕೊಂಡಿರುವ ಅವರು, ರೂಬಿಯೊ ಅವರು ತಮ್ಮ ಉದ್ಯೋಗಿಯನ್ನು ಮುಂಬೈಗೆ ಕರೆಸಿಕೊಂಡಿದ್ದಾರೆ. ಮೋದಿ, ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿರುವ ನಿಮ್ಮ ಅಧಿಕಾರಿಗಳಿಗೆ ಏನು ನಡೆಯುತ್ತಿದೆ ಎಂಬುದು ಅರ್ಥವಾಗದೆ ಗೊಂದಲದಲ್ಲಿದ್ದಾರೆ. ನೀವು ಬಹುಶಃ ಈ ಬಗ್ಗೆ ಸ್ಪಷ್ಟನೆ ನೀಡಬೇಕೇನೋ ಅಥವಾ, ನಾನೇ ವಿವರಿಸಬೇಕೆಂದು ನೀವು ಬಯಸುತ್ತೀರಾ ಎಂದು ಪ್ರಶ್ನಿಸಿದ್ದಾರೆ. ತಾವು ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕಾರಿಗಳು "ಗೊಂದಲ"ಕ್ಕೀಡಾಗಿದ್ದಾರೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಈ ಬಗ್ಗೆ ಸ್ಪಷ್ಟನೆ ನೀಡಬೇಕಾಗಬಹುದು ಎಂದೂ ತಿಳಿಸಿದ್ದಾರೆ.

ಅಮೆರಿಕದ ಪ್ರತಿನಿಧಿ ಸೆರ್ಜಿಯೊ ಗೋರ್, ರೂಬಿಯೊ ಮುಂಬೈನಲ್ಲಿ ಭಾರತ ಸರ್ಕಾರದ ಅಧಿಕಾರಿಗಳನ್ನು ಭೇಟಿಯಾಗಲಿದ್ದಾರೆ ಮತ್ತು "ಸಚಿವ ಡಾ. ಎಸ್. ಜೈಶಂಕರ್ ಅವರು ಅಲ್ಲಿ ಉಪಸ್ಥಿತರಿರುತ್ತಾರೆ ಎಂದು ನಾವು ನಿರೀಕ್ಷಿಸುತ್ತೇವೆ" ಎಂದು ಹೇಳಿದ ಮರುದಿನವೇ ಕಾಂಗ್ರೆಸ್ ನಾಯಕರ ಈ ಹೇಳಿಕೆ ಹೊರಬಿದ್ದಿದೆ. ರಾಹುಲ್ ಗಾಂಧಿಯವರ ಈ ಹೇಳಿಕೆಗೆ ಸರ್ಕಾರ ಅಥವಾ ಬಿಜೆಪಿ ಕಡೆಯಿಂದ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಗುರುವಾರವಷ್ಟೇ ಕಾಂಗ್ರೆಸ್ ಪಕ್ಷ, ರೂಬಿಯೊ ಅವರ ಭಾರತ ಭೇಟಿಯ ವಿಷಯವನ್ನು ಮುಂದಿಟ್ಟುಕೊಂಡು ಮೋದಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿತ್ತು. ಮುಂಬೈನಲ್ಲಿ ಅಮೆರಿಕದ ನಾಯಕರೊಂದಿಗೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ನಡೆಸಲಿರುವ "ರಹಸ್ಯ" ಭೇಟಿ ಕುರಿತು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಏಕೆ ಮೌನ ವಹಿಸಿದೆ ಎಂದು ಕಾಂಗ್ರೆಸ್ ಪ್ರಶ್ನಿಸಿತ್ತು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ ವಿಭಾಗ) ಜೈರಾಮ್ ರಮೇಶ್ ಅವರು, ರೂಬಿಯೊ ಅವರ ಮುಂಬೈ ಭೇಟಿಯ ಕುರಿತು ಸೆರ್ಜಿಯೊ ಗೋರ್ ಹೆಚ್ಚಿನ ವಿವರಗಳನ್ನು ನೀಡಿರುವುದು ಆಶ್ಚರ್ಯವೇನಲ್ಲ ಎಂದು ಹೇಳಿದ್ದರು. "ರೂಬಿಯೊ ಅವರು ಮುಂಬೈನಲ್ಲಿ ಭಾರತ ಸರ್ಕಾರದ ಅಧಿಕಾರಿಗಳನ್ನು ಭೇಟಿಯಾಗಲಿದ್ದಾರೆ ಎಂದು ಅವರು ಹೇಳಿರುವುದು ಅಷ್ಟೇನೂ ಆಶ್ಚರ್ಯದ ಸಂಗತಿಯಲ್ಲ. ಆದರೆ, 'ಸಚಿವ ಡಾ. ಜೈಶಂಕರ್ ಅವರು ಇತರ ವ್ಯಕ್ತಿಗಳೊಂದಿಗೆ ನಮ್ಮೊಂದಿಗೆ ಸೇರಿಕೊಳ್ಳಲಿದ್ದಾರೆ ಎಂದು ನಾವು ನಿರೀಕ್ಷಿಸುತ್ತೇವೆ' ಎಂದು ಅವರು ನೀಡಿರುವ ಹೇಳಿಕೆ ಮಾತ್ರ ಅತ್ಯಂತ ಅಸಾಮಾನ್ಯವಾಗಿದೆ," ಎಂದು ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಬರೆದಿದ್ದರು.

# ಮತದಾರರ ಪಟ್ಟಿ ಪರಿಷ್ಕರಣೆ: ಅಮೆರಿಕ ಸಂಸದೆ ಹೇಳಿಕೆಗೆ ಭಾರತ ತಿರುಗೇಟು

**ನವದೆಹಲಿ, ಅ.16:** ಭಾರತದ ಮತದಾರರ ಪಟ್ಟಿಗಳ ಪರಿಷ್ಕರಣೆ ಕುರಿತು ಅಮೆರಿಕದ ಸಂಸದೆ ಪ್ರಮೀಳಾ ಜಯಪಾಲ್ ನೀಡಿದ ಹೇಳಿಕೆಯನ್ನು ಭಾರತ ತೀವ್ರವಾಗಿ ತಳ್ಳಿಹಾಕಿದೆ. ಅವರ ಹೇಳಿಕೆ ಅನಗತ್ಯ ಹಾಗೂ ಅಪೂರ್ಣ ಮಾಹಿತಿಯ ಆಧಾರಿತವಾಗಿದ್ದು, ಮತ್ತೊಂದು ಪ್ರಜಾಪ್ರಭುತ್ವ ರಾಷ್ಟ್ರದ ಚುನಾವಣಾ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುವಂತಿದೆ ಎಂದು ವಿದೇಶಾಂಗ ಸಚಿವಾಲಯ ಶುಕ್ರವಾರ ತಿರುಗೇಟು ನೀಡಿದೆ.



ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸದಸ್ಯೆಯ ಹೇಳಿಕೆ ಅನಗತ್ಯ ಹಾಗೂ ಮಾಹಿತಿಯ ಕೊರತೆಯಿಂದ ಕೂಡಿದೆ. ಇದು ಸಹ ಪ್ರಜಾಪ್ರಭುತ್ವ ರಾಷ್ಟ್ರದ ಚುನಾವಣಾ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುವಂತಿದೆ. ಇಂತಹ ನಡೆ ಪ್ರಜಾಪ್ರಭುತ್ವವನ್ನೇ ದುರ್ಬಲಗೊಳಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

**13 ಕೋಟಿ ಜನರ ಹೆಸರು ಅಳಿಸುವ ಯತ್ನ**

ಡೆಮಾಕ್ರಟಿಕ್ ಪಕ್ಷದ ಸಂಸದೆ ಪ್ರಮೀಳಾ ಜಯಪಾಲ್ ಗುರುವಾರ ಸಾಮಾಜಿಕ ಜಾಲತಾಣದಲ್ಲಿ ಭಾರತದ ಮತದಾರರ ಪಟ್ಟಿಗಳ ಪರಿಷ್ಕರಣೆ ಕುರಿತು ಕಳವಳ ವ್ಯಕ್ತಪಡಿಸಿದ್ದರು. 1.30 ಕೋಟಿ ಅಲ್ಲ, 13 ಕೋಟಿ ಜನರನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ಉದ್ದೇಶದ ಕ್ರಮಗಳು ನಡೆಯುತ್ತಿವೆ ಎಂದು ಅವರು ಆರೋಪಿಸಿದ್ದರು. ಭಾರತದಲ್ಲಿ ನಡೆಯುತ್ತಿರುವ ಈ ಪ್ರಕ್ರಿಯೆಯು ಅಮೆರಿಕದ ಟ್ರಂಪ್ ಆಡಳಿತ ಮತದಾನದ ಹಕ್ಕುಗಳನ್ನು ದುರ್ಬಲಗೊಳಿಸಲು ಅನುಸರಿಸುತ್ತಿರುವ ಕ್ರಮಗಳಿಗೆ ಹೋಲುತ್ತದೆ ಎಂದು ಹೇಳಿದ್ದರು.

**ಭಾರತೀಯರಿಗೆ ಮುಕ್ತ, ನ್ಯಾಯಸಮ್ಮತ ಚುನಾವಣೆ ಬೇಕು:**

ಪ್ರಜಾಪ್ರಭುತ್ವವನ್ನು ಎಲ್ಲೆಡೆ ರಕ್ಷಿಸುವುದು ಅತ್ಯಗತ್ಯ. ಅಮೆರಿಕನ್ನರಂತೆ ಭಾರತೀಯರಿಗೂ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳ ಹಕ್ಕಿದೆ. ಇಂತಹ ಸಂದರ್ಭದಲ್ಲಿ ಅಹಿಂಸಾತ್ಮಕ ಪ್ರತಿಭಟನೆ ಅಗತ್ಯ. ಭಾರತದಲ್ಲಿ ಪ್ರಜಾಪ್ರಭುತ್ವ ವಿರೋಧಿ ಪ್ರಯತ್ನಗಳ ವಿರುದ್ಧ ಶಾಂತಿಯುತವಾಗಿ ಪ್ರತಿಭಟಿಸುತ್ತಿರುವ ಜನರ ಪರ ನಾನೂ ನಿಲ್ಲುತ್ತೇನೆ ಎಂದು ಜಯಪಾಲ್ ಹೇಳಿದ್ದರು. ಭಾರತದಲ್ಲಿ ಎಸ್‌ಐಆರ್ ವಿರುದ್ಧ ಸಿಜೆಪಿ ಹಾಗೂ ಪ್ರತಿಪಕ್ಷಗಳು ಪ್ರತಿಭಟನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಅವರ ಈ ಹೇಳಿಕೆ ಹೊರಬಿದ್ದಿದೆ. ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಲಕ್ಷಾಂತರ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ.

**2019ರಲ್ಲೂ ಜಯಪಾಲ್ ವಿರುದ್ಧ ಜೈಶಂಕರ್ ಅಸಮಾಧಾನ:**

ಪ್ರಮೀಳಾ ಜಯಪಾಲ್ ಹೇಳಿಕೆ ಇದೇ ಮೊದಲ ವಿವಾದವಲ್ಲ. 2019ರ ಡಿಸೆಂಬರ್‌ನಲ್ಲಿ ಅಮೆರಿಕದ ಸಂಸದೀಯ ನಿಯೋಗದೊಂದಿಗೆ ನಡೆಯಬೇಕಿದ್ದ ಸಭೆಯನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ರದ್ದುಗೊಳಿಸಿದ್ದರು. ಜಯಪಾಲ್ ಅವರನ್ನು ಸಭೆಯಿಂದ ಹೊರಗಿಡಲು ಒಪ್ಪದ ಹಿನ್ನೆಲೆಯಲ್ಲಿ ಈ ಬೆಳವಣಿಗೆ ನಡೆದಿತ್ತು. ಆ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದಾದ ಬಳಿಕ ಹೇರಲಾಗಿದ್ದ ನಿರ್ಬಂಧಗಳನ್ನು ಜಯಪಾಲ್ ಟೀಕಿಸಿದ್ದರು. ಮುಕ್ತ ಮನಸ್ಸಿನಿಂದ ಚರ್ಚೆಗೆ ಸಿದ್ಧರಾಗಿರುವ, ವಸ್ತುನಿಷ್ಠ ವ್ಯಕ್ತಿಗಳನ್ನು ಭೇಟಿಯಾಗಲು ನನಗೆ ಆಸಕ್ತಿ ಇದೆ. ಈಗಾಗಲೇ ತಮ್ಮ ನಿರ್ಧಾರ ಮಾಡಿಕೊಂಡಿರುವವರನ್ನು ಭೇಟಿಯಾಗಲು ಆಸಕ್ತಿ ಇಲ್ಲ ಎಂದು ಜೈಶಂಕರ್ ಹೇಳಿದ್ದರು. ಜಮ್ಮು ಮತ್ತು ಕಾಶ್ಮೀರದಲ್ಲಿ ಸಂವಹನದ ಮೇಲಿನ ಎಲ್ಲ ನಿರ್ಬಂಧ ತೆರವಿಗೆ ಒತ್ತಾಯಿಸಿ ಜಯಪಾಲ್ ಅಮೆರಿಕದ ಪ್ರತಿನಿಧಿ ಸಭೆಯಲ್ಲಿ ನಿರ್ಣಯ ಮಂಡಿಸಿದ್ದರು.

# ಪತಿ ವಿರುದ್ಧ ಉತ್ತರಾಖಂಡ್ ಸಚಿವೆ ರೇಖಾ ಎಫ್‌ಐಆರ್



**ಉತ್ತರಾಖಂಡ, ಅ.16:** ವಂಚನೆ, ಹಲ್ಲೆ, ಜಾತಿ ನಿಂದನೆ ಹಾಗೂ ಕೊಲೆಗೆ ಸಂಚು ರೂಪಿಸಿದ ಆರೋಪದ ಮೇಲೆ ಉತ್ತರಾಖಂಡ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ರೇಖಾ ಆರ್ಯ ತಮ್ಮ ಪತಿ ಗಿರಿಧಾರಿ ಲಾಲ್ ಸಾಹು ಅಲಿಯಾಸ್ ಪಪ್ಪು ಗಿರಿಧಾರಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಡೆಹ್ರಾಡೂನ್‌ನ ಕ್ಯಾಂಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೂರಿನಲ್ಲಿ ಪತಿ ಗಿರಿಧಾರಿ ಲಾಲ್ ಸಾಹು ಅವರು ತಾನು ಅವಿವಾಹಿತ ಎಂದು ಹೇಳಿ ನನ್ನನ್ನು ಮದುವೆ ಮಾಡಿಕೊಂಡು ವಂಚಿಸಿದ್ದರು ಎಂದು ಆರೋಪಿಸಿದ್ದಾರೆ. ಎಫ್‌ಐಆರ್ ಪ್ರಕಾರ, 2004 ಆರ್ಯ ಜುಲೈ 6ರಂದು ಉತ್ತರ ಪ್ರದೇಶದ ಬರೇಲಿ ನಿವಾಸಿ ಸಾಹು ಅವರನ್ನು ನಾನು ಹಿಂದೂ ಆಚರಣೆಗಳ ಪ್ರಕಾರ ವಿವಾಹವಾಗಿದ್ದೇನೆ. ಆದರೆ ಮದುವೆಯ ಸಮಯದಲ್ಲಿ ಪತಿ ಗಿರಿಧಾರಿ ಲಾಲ್ ಸಾಹು ಅವರು ತಾನು ಅವಿವಾಹಿತ ಎಂದು ವಂಚನೆ ಮಾಡಿದ್ದರು ಎಂದು ಆರೋಪಿಸಿದ್ದಾರೆ. ಕೆಲವು ವರ್ಷಗಳ ಬಳಿಕ ಸಾಹು ಈಗಾಗಲೇ ಮದುವೆಯಾಗಿದ್ದಾನೆ ಮತ್ತು ಆತನಿಗೆ ಮಕ್ಕಳಿದ್ದಾರೆ ಎಂದು ತಿಳಿಯಿತು. ಕುಟುಂಬ ಸದಸ್ಯರ ಸಲಹೆಯ ಮೇರೆಗೆ ಮತ್ತು ತನ್ನ ಸ್ವಂತ ಮಕ್ಕಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ತಾನು ಮೌನವಾಗಿದ್ದೇನೆ. ಆದರೆ ಪತಿಗೆ ಇತರೆ ಮಹಿಳೆಯರೊಂದಿಗೂ ಅಕ್ರಮ ಸಂಬಂಧವಿದೆ ಎಂದು ಆರೋಪಿಸಿದ್ದು, ಇದನ್ನು ಪ್ರಶ್ನಿಸಿದ್ದಕ್ಕೆ, ಆರಂಭದಲ್ಲಿ ತಪ್ಪನ್ನು ಒಪ್ಪಿಕೊಂಡು, ಕ್ಷಮೆಯಾಚಿಸಿದ್ದರಿಂದ ಸುಮ್ಮನಾದೆ. ಅಲ್ಲದೇ ಈಗಲೂ ಅದೇ ವರಸೆಯನ್ನು ಮುಂದುವರಿಸಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಅಕ್ರಮ ಸಂಬಂಧದ ಬಗ್ಗೆ ಪ್ರಶ್ನಿಸಿದ್ದಕ್ಕೆ ಪತಿ ತನ್ನನ್ನು ಹೊಡೆದಿದ್ದು, ನಿಂದಿಸಿ, ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾರೆ. ತಾನು ಉತ್ತರಾಖಂಡದ ಅಧಿಸೂಚಿತ ಪರಿಶಿಷ್ಟ ಜಾತಿಗೆ ಸೇರಿದ್ದೇನೆ ಎಂದು ಹೇಳಿದ ಸಚಿವೆ ರೇಖಾ ಆರ್ಯ, ಅಧಿಕೃತ ನಿವಾಸದಲ್ಲಿ, ಸಿಬ್ಬಂದಿಗಳ ಮುಂದೆಯೂ ಸೇರಿದಂತೆ ಹಲವಾರು ಸಂದರ್ಭಗಳಲ್ಲಿ ತನ್ನ ವಿರುದ್ಧ ಜಾತಿ ನಿಂದನೆ ಮಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಜಮೀರ್ ಅವರೇ ವಿಡಿಯೋ ಹರಿಬಿಟ್ಟಿರಬಹುದಲ್ಲವೇ: ಎಚ್.ಡಿ. ಕುಮಾರಸ್ವಾಮಿ

# ಆಪ್ತರಿಂದಲೇ ಸಿದ್ದರಾಮಯ್ಯ ವಿರುದ್ಧ ವ್ಯವಸ್ಥಿತ ಸಂಚು

**ಬೆಂಗಳೂರು, ಅ.16:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ವ್ಯವಸ್ಥಿತ ಸಂಚು ನಡೆದಿರುವ ಗುಮಾನಿ ಇದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವರ ಮಾತಿನ ನಡವಳಿಕೆ ನೋಡಿದರೆ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ವ್ಯವಸ್ಥಿತ ಸಂಚು ನಡೆದಿರುವ ಅನುಮಾನ ಬರುತ್ತದೆ. ಸಿದ್ದರಾಮಯ್ಯ ಅವರ ಜೊತೆಯಲ್ಲೇ ಇದ್ದು ಬೆನ್ನಿಗೆ ಚೂರಿ ಹಾಕಿದ್ದಾರೋ ಅಥವಾ ಮುಂದಿನಿಂದ ಹಾಕಿದ್ದಾರೋ ಎಂಬುದನ್ನು ನೋಡೋಣ ಎಂದರು.

ಸ್ಟಿಂಗ್ ಆಪರೇಷನ್ ವಿಚಾರ ಪ್ರಸ್ತಾಪವಾಗಿ ಹತ್ತು ಹದಿನೈದು ದಿನ ಕಳೆದ ನಂತರ ಸಿಎಂ ಡಿ.ಕೆ.ಶಿವಕುಮಾರ್ ಅವರು ಇಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದಾರೆ. ಭೇಟಿಯಾಗಿ ಅವರ ಕ್ಷಮೆ ಕೋರಿದ್ದಾರೋ, ಇಲ್ಲವೋ? ಭೇಟಿ ಫಲಪ್ರದವಾಯಿತೋ? ವಿಫಲವಾಯಿತೋ ಎಂಬುದು ಗೊತ್ತಾಗಲಿಲ್ಲ ಎಂದು ಟೀಕಿಸಿದರು.

ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಮತ್ತೆ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬಾರದು. ಸೇರ್ಪಡೆ ಮಾಡಿಕೊಂಡ ನಂತರ ಸಂಪುಟದಿಂದ ಕೈಬಿಡಬೇಕು ಎಂದು ಸಿದ್ದರಾಮಯ್ಯ ಏಕೆ ಒತ್ತಾಯಿಸಿದ್ದರು. ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಜಮೀರ್ ಅವರು ಸ್ಟಿಂಗ್ ಆಪರೇಷನ್ ವಿಚಾರದಲ್ಲಿ ನನ್ನ ಮೇಲೆ



ಆರೋಪ ಮಾಡುವುದಿರಲಿ, ವಿಡಿಯೋವನ್ನು ಜಮೀರ್ ಅವರೇ ಏಕೆ ಬಿಟ್ಟಿರಬಾರದು ಎಂಬ ಚರ್ಚೆಯೂ ಆಗುತ್ತಿದೆ ಎಂದು ಆರೋಪಿಸಿದರು.

**2 ದಿನ ಗಡುವು:** ಸ್ಟಿಂಗ್ ಆಪರೇಷನ್ ರೂವಾರಿ ರಾಜಾರೋಷವಾಗಿ ಓಡಾಡಿಕೊಂಡಿದ್ದಾರೆ. ಅವರನ್ನು ಕೂಡಲೇ ಬಂಧಿಸಬೇಕು. ನ್ಯಾಯಯುತ ತನಿಖೆಯಾಗಬೇಕು ಎಂದು ಒತ್ತಾಯಿಸಿದ್ದೇನೆ. ಎರಡು ದಿನ ಗಡುವನ್ನೂ ನೀಡಿದ್ದೇನೆ. ಏನು ಮಾಡುತ್ತಾರೋ ಕಾದು ನೋಡಬೇಕು ಎಂದರು. ಪ್ರಿಯಾಂಕ್ ಖರ್ಗೆಯವರಿಂದ ನೈತಿಕತೆಯ ಪಾಠ ಕಲಿಯಬೇಕಿಲ್ಲ. ಗುರುಮಠ್ಕಲ್ ಮೀಸಲು ಕ್ಷೇತ್ರದಿಂದ ಮಲ್ಲಿಕಾರ್ಜುನ ಖರ್ಗೆಯವರು 8 ಬಾರಿ ಗೆದ್ದಿದ್ದವರು. ಆ ಕ್ಷೇತ್ರ ಸಾಮಾನ್ಯ ಕ್ಷೇತ್ರವಾದ ಮೇಲೆ ಅಲ್ಲಿ ನಿಲ್ಲಲು ರಾಜಕೀಯ ಹಾಗೂ ಆರ್ಥಿಕ ಶಕ್ತಿ ಇರಲಿಲ್ಲವೇ, ಚಿತ್ತಾಪುರ ಕ್ಷೇತ್ರದಲ್ಲಿ ಸ್ಪರ್ಧಿಸಿ ಬೇರೆ ದಲಿತರಿಗೆ ಸಿಗಬೇಕಾಗಿದ್ದ ಮೀಸಲಾತಿ ಕೈತಪ್ಪಿಲಿಲ್ಲವೇ ಎಂದು ಎಚ್‌ಡಿಕೆ ಪ್ರಶ್ನಿಸಿದರು.



ಮೈಸೂರಿನಲ್ಲಿ ಶುಕ್ರವಾರ ಮೈಸೂರು ದಸರಾ ಅಂಗವಾಗಿ 'ರೈತ ದಸರಾ'ಕ್ಕೆ ಚಾಲನೆ ನೀಡಲಾಯಿತು; ಇಲ್ಲಿ ನಡೆದ ಮೆರವಣಿಗೆಯು ಜನರ ಗಮನ ಸೆಳೆಯಿತು.

# ಇಂದು ವಾರ್ತಾ ಕಾರ್ಯಾಗಾರ ಯೋಗೇಶ್ ಕುಮಾರ್ ಭಾಗಿ

**ಬೆಂಗಳೂರು, ಅ.16:** ಕೇಂದ್ರ ವಾರ್ತಾ ಶಾಖೆ (ಪಿಐಬಿ) ಬೆಂಗಳೂರು ವತಿಯಿಂದ ಶನಿವಾರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿಯ ಸಭಾಂಗಣದಲ್ಲಿ ವಾರ್ತಾ ಕಾರ್ಯಾಗಾರ ಆಯೋಜಿಸಲಾಗಿದ್ದು, ಪ್ರೆಸ್ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾದ ಪ್ರಧಾನ ಮಹಾನಿರ್ದೇಶಕ ಯೋಗೇಶ್ ಕುಮಾರ್ ಬವೇಜಾ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ಜೊತೆಗೆ ಮುದ್ರಣ ಮತ್ತು ನಿಯತಕಾಲಿಕೆಗಳ ನೋಂದಣಿ ಕಾಯ್ದೆ, 2023 (ಪಿ.ಆರ್.ಪಿ. ಕಾಯ್ದೆ, 2023) ಮತ್ತು ಪ್ರೆಸ್ ಸೇವಾ ಪೋರ್ಟಲ್ ಕುರಿತು ಮಾಹಿತಿ ನೀಡಲಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಜೆ. ಮಂಜುನಾಥ್ ಹಾಗೂ ಕರ್ನಾಟಕ ಸರ್ಕಾರದ ಪೊಲೀಸ್ ಉಪ ಮಹಾನಿರೀಕ್ಷಕ ಮತ್ತು ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಎಂ.ಎನ್. ಅನುಚೇತ್ ಅವರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಪತ್ರಿಕೆ, ನಿಯತಕಾಲಿಕೆಗಳ ನೋಂದಣಿ, ಶೀರ್ಷಿಕೆ ಪರಿಶೀಲನೆ, ಅರ್ಜಿ ಸಲ್ಲಿಕೆ, ಪ್ರೆಸ್ ಸೇವಾ ಪೋರ್ಟಲ್ ಕಾರ್ಯನಿರ್ವಹಣೆ ಹಾಗೂ ಮುದ್ರಣ ಮತ್ತು ನಿಯತಕಾಲಿಕೆಗಳ ನೋಂದಣಿ ಕಾಯ್ದೆ, 2023ರ ನಿಬಂಧನೆಗಳಿಗೆ ಸಂಬಂಧಿಸಿದ ವಿಷಯಗಳ ಕುರಿತು ಸಂವಾದ ನಡೆಯಲಿದ್ದು, ಇದು ಮಾಧ್ಯಮ ಪ್ರತಿನಿಧಿಗಳಿಗೆ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅವಕಾಶ ಒದಗಿಸಲಿದೆ.

ಹೊಸದಾಗಿ ಜಾರಿಗೆ ಬಂದ ಮುದ್ರಣ ಮತ್ತು ನಿಯತಕಾಲಿಕೆಗಳ ನೋಂದಣಿ ಕಾಯ್ದೆ, 2023ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತದ ಪ್ರೆಸ್ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ, ಶೀರ್ಷಿಕೆಗಳ ಹಂಚಿಕೆ ಮತ್ತು ನಿಯತಕಾಲಿಕೆಗಳ



ನೋಂದಣಿ ಸುಲಭಗೊಳಿಸುವ ಶಾಸನಬದ್ಧ ಪ್ರಾಧಿಕಾರವಾಗಿದೆ. ಮುದ್ರಣ ಮತ್ತು ನಿಯತಕಾಲಿಕೆಗಳ ನೋಂದಣಿ ಕಾಯ್ದೆ, 2023ರ ಅನುಷ್ಠಾನದ ಒಂದು ಭಾಗವಾಗಿ, ವೃತ್ತಪತ್ರಿಕೆಗಳು ಮತ್ತು ನಿಯತ ಕಾಲಿಕೆಗಳ ಪ್ರಕಾಶಕರಿಗೆ ಅನುಕೂಲ ಒದಗಿಸಲು ಪ್ರೆಸ್ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಕಚೇರಿಯು ಪ್ರೆಸ್ ಸೇವಾ ಪೋರ್ಟಲ್ https://presssewa.prgi.gov.in ಅಭಿವೃದ್ಧಿಪಡಿಸಿದೆ.

# ಅಂಕಿತಾ ಭಂಡಾರಿ ಪ್ರಕರಣದ ಸಂಪೂರ್ಣ ಸತ್ಯಾಂಶ ಬಹಿರಂಗವಾಗಲಿ: ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸಲು ನಿಷ್ಪಕ್ಷಪಾತ ತನಿಖೆ ನಡೆಸಿ: ಡಾ. ಆನಂದಕುಮಾರ್

ನವದೆಹಲಿ, ಅ.16: ಉತ್ತರಾಖಂಡದ ಅಂಕಿತಾ ಭಂಡಾರಿ ಅವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತ ಕುಟುಂಬವು ವ್ಯಕ್ತಪಡಿಸಿರುವ ಅನುಮಾನಗಳಿಗೆ ಸೂಕ್ತ ಉತ್ತರ ದೊರೆಯಬೇಕು ಹಾಗೂ ಪ್ರಕರಣದ ಸಂಪೂರ್ಣ ಸತ್ಯಾಂಶಗಳು ಜನರ ಮುಂದೆ ಬರಬೇಕು ಎಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) ಎಸ್‌ಸಿ ವಿಭಾಗದ ರಾಷ್ಟ್ರೀಯ ಸಂಯೋಜಕರಾದ ಡಾ. ಆನಂದ ಕುಮಾರ್ ಅವರು ಒತ್ತಾಯಿಸಿದ್ದಾರೆ.

ಅಂಕಿತಾ ಭಂಡಾರಿ ಅವರ ಹತ್ಯೆ ದೇಶದ ಜನರನ್ನು ತೀವ್ರವಾಗಿ ನೋಯಿಸಿದ ದುರಂತವಾಗಿದೆ. ಮಹಿಳೆಯರ ಸುರಕ್ಷತೆ, ಗೌರವ ಮತ್ತು ನ್ಯಾಯದ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಈ ಪ್ರಕರಣದಲ್ಲಿ ಉಲ್ಲೇಖವಾಗಿರುವ ?ವಿಐಪಿ? ವ್ಯಕ್ತಿಯ ಪಾತ್ರದ ಕುರಿತು ಕುಟುಂಬವು ಎತ್ತಿರುವ ಪ್ರಶ್ನೆಗಳಿಗೆ ಸಂಬಂಧಪಟ್ಟ ತನಿಖಾ ಸಂಸ್ಥೆಗಳು ಕಾನೂನುಬದ್ಧವಾಗಿ, ಪಾರದರ್ಶಕವಾಗಿ ಮತ್ತು ನಿಷ್ಪಕ್ಷಪಾತವಾಗಿ ಉತ್ತರ ನೀಡಬೇಕು. ಬಿಜೆಪಿ ನಾಯಕ ಶ್ರೀ ದುಷ್ಯಂತ್ ಕುಮಾರ್ ಗೌತಮ್ ಅವರನ್ನು ಸಿಕ್ಕಿಂ ರಾಜ್ಯದ ರಾಜ್ಯಪಾಲರನ್ನಾಗಿ ನೇಮಕ ಮಾಡಿರುವ ಹಿನ್ನೆಲೆಯಲ್ಲಿ, ಅಂಕಿತಾ ಭಂಡಾರಿ ಅವರ ಕುಟುಂಬವು ವ್ಯಕ್ತಪಡಿಸಿರುವ ಅನುಮಾನಗಳನ್ನು ನಿರ್ಲಕ್ಷಿಸಬಾರದು. ಈ ವಿಷಯದಲ್ಲಿ ರಾಜಕೀಯ ಆರೋಪ–ಪ್ರತ್ಯಾರೋಪಗಳಿಗೆ ಸೀಮಿತವಾಗದೆ, ಸತ್ಯಾಂಶಗಳ ಅನಾವರಣಕ್ಕೆ ಆದ್ಯತೆ ನೀಡಬೇಕು.



ಈ ಪ್ರಕರಣದ ಕುರಿತು ಈಗಾಗಲೇ ನ್ಯಾಯಾಂಗ ಪ್ರಕ್ರಿಯೆ ನಡೆದಿದ್ದರೂ, ಕುಟುಂಬವು ವ್ಯಕ್ತಪಡಿಸಿರುವ ಉಳಿದ ಅನುಮಾನಗಳು ಮತ್ತು ?ವಿಐಪಿ? ವ್ಯಕ್ತಿಯ ಪಾತ್ರದ ಕುರಿತಾದ ಪ್ರಶ್ನೆಗಳಿಗೆ ಕಾನೂನಿನ ಚೌಕಟ್ಟಿನಲ್ಲಿ ಸ್ಪಷ್ಟನೆ ದೊರೆಯುವುದು ಅಗತ್ಯವಾಗಿದೆ. ಅಗತ್ಯವಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ಕಾನೂನುಬದ್ಧವಾಗಿ ಮುಂದಿನ ತನಿಖಾ ಕ್ರಮಗಳನ್ನು ಕೈಗೊಳ್ಳಬೇಕು.

ಯಾರೇ ಆಗಿರಲಿ, ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಾಗಿರಲಿ ಅಥವಾ ಉನ್ನತ ಅಧಿಕಾರದ ಸ್ಥಾನದಲ್ಲಿರಲಿ, ಕಾನೂನಿನ ಮುಂದೆ ಎಲ್ಲರೂ ಸಮಾನರು. ಆರೋಪಗಳು ನ್ಯಾಯಾಂಗ ಪ್ರಕ್ರಿಯೆಯ ಮೂಲಕವೇ ಸಾಬೀತಾಗಬೇಕು. ಅದೇ ಸಮಯದಲ್ಲಿ, ಸಂತ್ರಸ್ತ ಕುಟುಂಬದ ಪ್ರಶ್ನೆಗಳನ್ನು ನಿರ್ಲಕ್ಷಿಸದೆ ಸತ್ಯಾಂಶಗಳು ಹೊರಬರುವಂತೆ ಮಾಡುವುದು ಸರ್ಕಾರ ಮತ್ತು ಸಂಬಂಧಪಟ್ಟ ತನಿಖಾ ಸಂಸ್ಥೆಗಳ ಜವಾಬ್ದಾರಿಯಾಗಿದೆ? ಎಂದು ಡಾ. ಆನಂದ ಕುಮಾರ್ ತಿಳಿಸಿದ್ದಾರೆ.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ಸಾಮಾಜಿಕ ನ್ಯಾಯ, ಮಹಿಳೆಯರ ಗೌರವ, ಸಂವಿಧಾನಬದ್ಧ ಹಕ್ಕುಗಳು ಮತ್ತು ಕಾನೂನಿನ ಆಳ್ವಿಕೆಯ ಪರವಾಗಿ ಸದಾ ನಿಂತಿದೆ. ಅಂಕಿತಾ ಭಂಡಾರಿ ಅವರ ಕುಟುಂಬಕ್ಕೆ ನ್ಯಾಯ ದೊರಕಬೇಕು ಮತ್ತು ಪ್ರಕರಣಕ್ಕೆ ಸಂಬಂಧಿಸಿದ ಸತ್ಯಾಂಶಗಳು ಸಂಪೂರ್ಣವಾಗಿ ಬಹಿರಂಗವಾಗಬೇಕು ಎಂಬುದು ನಮ್ಮ ದೃಢವಾದ ನಿಲುವಾಗಿದೆ.

ಅಂಕಿತಾ ಭಂಡಾರಿ ಅವರಿಗೆ ನ್ಯಾಯ ದೊರಕಲಿ. ಸತ್ಯಾಂಶಗಳು ಬಹಿರಂಗವಾಗಲಿ. ಮಹಿಳೆಯರ ಸುರಕ್ಷತೆ ಮತ್ತು ನ್ಯಾಯದ ವಿಷಯದಲ್ಲಿ ಯಾವುದೇ ರಾಜಿ ಇರಬಾರದು.

# ಪ್ರತಿಭಟನೆ ವರದಿ: ಪ್ರೆಸ್ ಕೌನ್ಸಿಲ್‌ನಿಂದ ಹೊಸ ಮಾರ್ಗಸೂಚಿ

ನವದೆಹಲಿ, ಅ.16: ಪ್ರತಿಭಟನೆಗಳು ಮತ್ತು ಧರಣಿ ಸತ್ಯಾಗ್ರಹಗಳ ಸಂದರ್ಭದಲ್ಲಿ ಪತ್ರಕರ್ತರ ಸುರಕ್ಷತೆಯನ್ನು ಕಾಯ್ದುಕೊಳ್ಳಲು, ಜವಾಬ್ದಾರಿಯುತ ವರದಿಗಾರಿಕೆಯನ್ನು ಉತ್ತೇಜಿಸಲು ಹಾಗೂ ಮಾಧ್ಯಮ ಸಿಬ್ಬಂದಿ, ಕಾನೂನು ಜಾರಿ ಸಂಸ್ಥೆಗಳ ನಡುವೆ ಉತ್ತಮ ಸಮನ್ವಯ ಮೂಡಿಸಲು ಭಾರತೀಯ ಪ್ರೆಸ್ ಕೌನ್ಸಿಲ್ (ಪಿಸಿಐ) ನೂತನ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಿದೆ.

2026ರ ಅಕ್ಟೋಬರ್ 14ರಂದು ನಡೆದ ಸಭೆಯಲ್ಲಿ ಈ ಸಮ್ಮತಿಯನ್ನು ಪಡೆದುಕೊಂಡಿದ್ದು, ಅಕ್ಟೋಬರ್ 15ರಂದು ಅಧಿಕೃತವಾಗಿ ಪ್ರಕಟಿಸಲಾಗಿದೆ. ಇತ್ತೀಚೆಗೆ ಸಿಜೆಪಿ ಸೇರಿದಂತೆ ವಿವಿಧ ಪ್ರತಿಭಟನೆಗಳ ವೇಳೆ ಪತ್ರಕರ್ತರ ಮೇಲೆಯೂ ಪೊಲೀಸರು ದಾಳಿ ಮಾಡಿದ್ದಾರೆ, ಬಂಧಿಸಿದ್ದಾರೆ. ಈ ನಡುವೆ ಭಾರತೀಯ ಪ್ರೆಸ್ ಕೌನ್ಸಿಲ್ ಈ ಮಾರ್ಗದರ್ಶಿಯನ್ನು ಹೊರಡಿಸಿದೆ.

**ಹೊಸ ಮಾರ್ಗಸೂಚಿಗಳೇನು?**

ಪತ್ರಕರ್ತರು ತಮ್ಮ ಸಂಸ್ಥೆ ನೀಡಿದ ಮಾನ್ಯತೆ ಪಡೆದ ಗುರುತಿನ ಚೀಟಿಯನ್ನು ಅಥವಾ ಪಿಐಬಿ/ಡಿಐಪಿ ಗುರುತಿನ ಚೀಟಿಯನ್ನು ಸ್ಪಷ್ಟವಾಗಿ ಕಾಣಿಸುವಂತೆ ಧರಿಸಿರಬೇಕು. ಪೊಲೀಸರು ವಿಚಾರಿಸಿದಾಗ ಶಾಂತಿಯುತವಾಗಿ ತಮ್ಮ ಗುರುತನ್ನು ತಿಳಿಸಬೇಕು.

ವರದಿಗಾರಿಕೆಯಲ್ಲಿ ತಟಸ್ಥತೆ ಮತ್ತು ವೃತ್ತಿಪರತೆಯನ್ನು ಕಾಯ್ದು ಕೊಳ್ಳಬೇಕು. ಪ್ರತಿಭಟನೆಗಳಲ್ಲಿ ಭಾಗವಹಿಸುವುದು, ಪ್ರಚೋದನೆ ನೀಡುವುದು ಅಥವಾ ಪೊಲೀಸ್ ಕಾರ್ಯಾಚರಣೆಗೆ ಅಡ್ಡಿಪಡಿಸುವುದನ್ನು ಮಾಡಬಾರದು. ಸಂಘರ್ಷ ನಡೆಯುವ ಸ್ಥಳಗಳಿಂದ ಸುರಕ್ಷಿತ ಅಂತರ ಕಾಯ್ದುಕೊಳ್ಳಬೇಕು. ಕ್ಯಾಮೆರಾ ಅಥವಾ ರೆಕಾರ್ಡಿಂಗ್ ಉಪಕರಣ ಗಳನ್ನು ಪೊಲೀಸ್ ಬ್ಯಾರಿಕೇಡ್‌ಗಳಿಗೆ ಅಥವಾ ವಾಹನಗಳಿಗೆ ಅಳವಡಿಸಿ ಸಂಚಾರಕ್ಕೆ ಅಡ್ಡಿಪಡಿಸಬಾರದು. ಕಾಲ್ತುಳಿತ ತಪ್ಪಿಸಲು ಸಣ್ಣ ಹೆಜ್ಜೆಗಳನ್ನಿಡುತ್ತಾ ಎಚ್ಚರಿಕೆಯಿಂದ ಚಲಿಸಬೇಕು. ಜನಸಂದಣಿಯ ನಡವಳಿಕೆ, ಗಲಾಟೆ ಹಾಗೂ ಆಸುಪಾಸಿನ ಅಪಾಯಗಳನ್ನು ನಿರಂತರವಾಗಿ ಗಮನಿಸುತ್ತಿರಬೇಕು.

**ಆಕಸ್ಮಿಕವಾಗಿ ಸ್ಥಳದಿಂದ ಹೊರಹೋಗಲು ತುರ್ತು ನಿರ್ಗಮನ ಮಾರ್ಗಗಳನ್ನು ಸದಾ ಸಿದ್ಧವಾಗಿಟ್ಟುಕೊಳ್ಳಬೇಕು.**

ಪತ್ರಕರ್ತರು ತಮ್ಮ ಬಳಿ ಪ್ರಥಮ ಚಿಕಿತ್ಸಾ ಕಿಟ್, ನಿತ್ಯದ ಔಷಧಗಳು, ಕುಡಿಯುವ ನೀರು, ಪ್ರೋಟೀನ್ ಆಹಾರ, ಟಾರ್ಚ್, ಮುಖ ಒರೆಸುವ ಬಟ್ಟೆ ಮತ್ತು ಕಣ್ಣಿನ ರಕ್ಷಣಾ ಗ್ಲಾಸ್‌ಗಳನ್ನು ಒಳಗೊಂಡ ಎಮರ್ಜೆನ್ಸಿ ಕಿಟ್ ಇಟ್ಟುಕೊಳ್ಳಬೇಕು.

ಕಣ್ಣೀರು ಅನಿಲ (ಟಿಯರ್ ಗ್ಯಾಸ್) ಅಥವಾ ಹೊಗೆಬಾಂಬ್‌ಗಳನ್ನು ಕೈಯಿಂದ ಮುಟ್ಟುವುದು ಅಥವಾ ಎಸೆಯಲು ಯತ್ನಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ವರದಿಗಾರರು ತಮ್ಮ ಸುದ್ದಿ ಸಂಸ್ಥೆಗಳ ಜೊತೆ ನಿರಂತರ ಸಂಪರ್ಕದಲ್ಲಿರಬೇಕು. ಫ್ರೀಲ್ಯಾನ್ಸ್ ಪತ್ರಕರ್ತರು ತಮ್ಮ ಕಾರ್ಯಯೋಜನೆ ಮತ್ತು ಕೆಲಸ ಮಾಡುವ ಸ್ಥಳದ ಮಾಹಿತಿಯನ್ನು ಸಂಪಾದಕರಿಗೆ ಅಥವಾ ಆಪ್ತರಿಗೆ ತಿಳಿಸಿರಬೇಕು. ಸಹೋದ್ಯೋಗಿ ಪತ್ರಕರ್ತರ ಸುರಕ್ಷತೆಯ ಬಗ್ಗೆಯೂ ಗಮನಹರಿಸಬೇಕು.

ಘಟನೆಗಳನ್ನು ನಿಖರವಾಗಿ, ವಸ್ತುನಿಷ್ಠವಾಗಿ ಮತ್ತು ನಿಷ್ಪಕ್ಷಪಾತವಾಗಿ ವರದಿ ಮಾಡಬೇಕು.

ಸಂತ್ರಸ್ತರು, ಅಪ್ರಾಪ್ತ ವಯಸ್ಕರು ಹಾಗೂ ಗಾಯಗೊಂಡವರ ಫೋಟೋ ಅಥವಾ ವೀಡಿಯೊ ಪ್ರಸಾರ ಮಾಡುವಾಗ ಅವರ ಖಾಸಗಿತನ ಮತ್ತು ಸುರಕ್ಷತೆಯನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಪೊಲೀಸರ ರಹಸ್ಯ ಕಾರ್ಯಾಚರಣೆ, ಸಾಗುವ ಮಾರ್ಗಗಳು ಅಥವಾ ತಂತ್ರಗಳನ್ನು ರಿಯಲ್–ಟೈಮ್‌ನಲ್ಲಿ ಪ್ರಸಾರ ಮಾಡಬಾರದು.

# ಪಿಜಿಸಿಇಟಿ: ಫಲಿತಾಂಶ ಪ್ರಕಟ, ಶುಲ್ಕ ಕಟ್ಟಲು ಅ.19 ಕೊನೇ ದಿನ



**ಬೆಂಗಳೂರು, ಅ.16:** ಎಂಬಿಎ, ಎಂಸಿಎ, ಎಂಇ, ಎಂ.ಟೆಕ್/ಎಂ ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಸೀಟು ಹಂಚಿಕೆಯಾಗಿರುವ ಅಭ್ಯರ್ಥಿಗಳು ಅ.19ರೊಳಗೆ ಶುಲ್ಕ ಪಾವತಿಸಿ, ಅ.23ರೊಳಗೆ ಕಾಲೇಜು ಗಳಲ್ಲಿ ಪ್ರವೇಶ ಪಡೆಯಬೇಕು ಎಂದು ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಅವರು ತಿಳಿಸಿದ್ದಾರೆ.

# ಪಿಬಿ ಬಿಎಸ್ಸಿ ಪ್ರವೇಶಕ್ಕೆ ಇಚ್ಛೆ ಆಯ್ಕೆಗೆ ಅವಕಾಶ

ಬೆಂಗಳೂರು, ಅ.16: ಪಿಬಿ ಬಿಎಸ್ಸಿ ನರ್ಸಿಂಗ್ ಮತ್ತು ಎಎಚ್‌ಎಸ್ ಲ್ಯಾಟರಲ್ ಕೋರ್ಸ್ ಗಳ ಪ್ರವೇಶಕ್ಕೆ ಇಚ್ಛೆ/ ಆಯ್ಕೆಗಳನ್ನು ದಾಖಲಿಸಲು ಅ.19ರಂದು ಬೆಳಿಗ್ಗೆ 11ಗಂಟೆವರೆಗೆ ಅವಕಾಶ ನೀಡಲಾಗಿದೆ ಎಂದು ಪ್ರಸನ್ನ ಅವರು ತಿಳಿಸಿದ್ದಾರೆ.

ಅ.19ರಂದು ಸಂಜೆ 4 ಗಂಟೆಗೆ ಅಣಕು ಫಲಿತಾಂಶ ಪ್ರಕಟಿಸಲಾಗುತ್ತದೆ. ಅ.19ರಂದು ಸಂಜೆ 5ಗಂಟೆಯಿಂದ ಅ.22ರಂದು ಬೆಳಿಗ್ಗೆ 11ಗಂಟೆವರೆಗೆ ಆಯ್ಕೆಗಳನ್ನು ಬದಲಿಸಿಕೊಳ್ಳಲು/ ಸೇರಿಸಲು ಹಾಗು ಅಳಿಸಲು ಅವಕಾಶ ನೀಡಲಾಗಿದೆ. ಅದರ ನಂತರ ಅಂತಿಮ ಫಲಿತಾಂಶ ಪ್ರಕಟಿಸಲಾ ಗುವುದು ಎಂದು ಅವರು ವಿವರಿಸಿದರು.

ಸಿಹಿ ತಿಂಡಿ ತಯಾರಿಸುವ 10 ಘಟಕಗಳಿಗೆ ನೋಟಿಸ್

# ಆಹಾರ ಸುರಕ್ಷತೆ ಪರಿಶೀಲನೆ ಮುಂದುವರಿಸಿದ ಆರೋಗ್ಯ ಇಲಾಖೆ



**ಬೆಂಗಳೂರು, ಅ.16:** ರಾಜ್ಯದಲ್ಲಿ ಆಹಾರ ಸುರಕ್ಷತೆಯ ಪರಿಶೀಲನೆ ಮುಂದುವರೆಸಿರುವ ಆರೋಗ್ಯ ಇಲಾಖೆ ಅಕ್ಟೋಬರ್ 15ರಂದು ಸಿಹಿತಿಂಡಿಗಳನ್ನು ತಯಾರಿಸುವ ಮತ್ತು ಮಾರಾಟ ಮಾಡುವ 80 ಸಂಸ್ಥೆಗಳಲ್ಲಿ ಪರಿಶೀಲನೆ ನಡೆಸಿತು. ಈ ಕಾರ್ಯಾಚರಣೆಯ ವೇಳೆ ಅನೈರ್ಮಲ್ಯ ಮತ್ತು ಪರವಾನಗಿ ನಿಯಮಗಳ ಉಲ್ಲಂಘನೆ ಕಂಡುಬಂದ ಹಿನ್ನೆಲೆ 10 ಸಿಹಿತಿಂಡಿ ತಯಾರಿಕಾ ಘಟಕಗಳು ಹಾಗೂ ಆಹಾರ ಉದ್ಯಮ ನಿರ್ವಾಹಕರಿಗೆ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರ ನಿರ್ದೇಶನದ ಮೇರೆಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯಿದೆ ಹಾಗೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ (ಪರವಾನಗಿ ಮತ್ತು ನೋಂದಣಿ) ನಿಯಮಾವಳಿಗಳು– 2011ರ ಅನುಸಾರ ಪರಿಶೀಲನೆ ನಡೆಸಲಾಗಿದೆ.

125 ಆಹಾರ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆ ಗಾಗಿ ಸಂಬಂಧಪಟ್ಟ ಸರ್ಕಾರಿ ಆಹಾರ ಪ್ರಯೋಗಾಲಯ ಗಳಿಗೆ ಕಳುಹಿಸಲಾಗಿದೆ. ಈ ಮಾದರಿಗಳ ಗುಣಮಟ್ಟವನ್ನು ಮೌಲ್ಯಮಾಪನ ಮಾಡಲಾಗುತ್ತದೆ. ಅವು ನಿಗದಿತ ಆಹಾರ ಸುರಕ್ಷತಾ ಮಾನದಂಡಗಳನ್ನು ಪೂರೈಸುತ್ತವೆಯೇ ಎಂದು ವರದಿಗಳು ನಿರ್ಧರಿಸುತ್ತದೆ ಇಲಾಖೆ ತಿಳಿಸಿದೆ.

ಅನೈರ್ಮಲ್ಯ ಮತ್ತು ಪರವಾನಗಿ ಲೋಪ ಪತ್ತೆ: ಪರಿಶೀಲನೆ ವೇಳೆ, ಆಹಾರ ತಯಾರಿಕೆ ಮತ್ತು ಸಂಗ್ರಹಣಾ ಸ್ಥಳಗಳನ್ನು ಅನೈರ್ಮಲ್ಯದ ಪರಿಸ್ಥಿತಿಯಲ್ಲಿ ನಿರ್ವಹಿಸುತ್ತಿರುವುದು ಕಂಡು ಬಂದಿದೆ. ಅಲ್ಲದೇ ಕೆಲವರ ಬಳಿ ಅಗತ್ಯ ಪ್ರಮಾಣಪತ್ರಗಳಿರಲಿಲ್ಲ. ಕೆಲವು ಸಂಸ್ಥೆಗಳು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಪಡೆಯಬೇಕಾದ ಅಗತ್ಯ ಪರವಾನಗಿಗಳನ್ನು ಅಥವಾ ನೋಂದಣಿಯನ್ನು ಪಡೆದಿರಲಿಲ್ಲ ಎಂಬುದು ಪತ್ತೆಯಾಗಿದೆ.

ಲೋಪ ದೋಷ ಕಂಡು ಬಂದ 10 ಘಟಕಗಳು ಮತ್ತು ಆಹಾರ ವ್ಯವಹಾರ ನಿರ್ವಾ ಹಕರಿಗೆ ನೋಟಿಸ್‌ಗಳನ್ನು ಜಾರಿ ಗೊಳಿಸಲಾಗಿದೆ. ಈ ಸಂಬಂಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾ ಗುವುದು ಎಂದು ಇಲಾಖೆಯ ಆಯುಕ್ತರಾದ ಶ್ರೀನಿವಾಸ್ ಕೆ. ತಿಳಿಸಿದ್ದಾರೆ.

# ಸಿಜೆಪಿ ತಿರಂಗಾ ಮಾರ್ಚ್‌ಗೆ ಪೊಲೀಸರಿಂದ ಬ್ರೇಕ್

**ಬೆಂಗಳೂರು, ಅ.16:** ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಭಾರಿ ಸದ್ದು ಮಾಡಿದ್ದ ಕಾಕ್ರೋಚ್ ಜನತಾ ಪಾರ್ಟಿ ಪ್ರತಿಭಟನೆಯ ಬಿಸಿ ಈಗ ಸಿಲಿಕಾನ್ ಸಿಟಿ ಬೆಂಗಳೂರಿಗೂ ತಟ್ಟಿದೆ. ಶುಕ್ರವಾರ ನಗರದ ಹೃದಯಭಾಗ ಟೌನ್‌ಹಾಲ್ ಮುಂಭಾಗ ಸಿಜೆಪಿ ಹಮ್ಮಿಕೊಂಡಿದ್ದ 'ತಿರಂಗಾ ಮಾರ್ಚ್'ಗೆ ಬೆಂಗಳೂರು ಪೊಲೀಸರು ಕೊನೆ ಕ್ಷಣದಲ್ಲಿ ಬ್ರೇಕ್ ಹಾಕಿದ್ದಾರೆ.

ಹೈಕೋರ್ಟ್ ನಿಯಮಗಳ ಉಲ್ಲಂಘನೆ ಮತ್ತು ಸಂಚಾರ ದಟ್ಟಣೆಯ ಕಾರಣ ನೀಡಿ ಪೊಲೀಸರು ರ್‍ಯಾಲಿಗೆ ಅನುಮತಿ ನಿರಾಕರಿಸಿದ್ದು, ಸ್ಥಳದಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿದೆ.

ಸಿಜೆಪಿ ಜೊತೆಗೆ ಜಾಗೃತ



ಕರ್ನಾಟಕ ಹಾಗೂ ಮೈ ವೋಟ್, ಮೈ ರೈಟ್ ಸಂಘಟನೆಗಳು ಕೈಜೋಡಿಸಿ ಈ ಮೆರವಣಿಗೆಯನ್ನು ಆಯೋಜಿಸಿದ್ದವು. ಶುಕ್ರವಾರ ಸಂಜೆ 4 ಗಂಟೆಗೆ ಟೌನ್‌ಹಾಲ್‌ನಿಂದ ಆರಂಭವಾಗಬೇಕಿದ್ದ ರ್‍ಯಾಲಿ, ಕೆಂಪೇಗೌಡ ರಸ್ತೆಯಲ್ಲಿರುವ ಮೈಸೂರು ಬ್ಯಾಂಕ್ ವೃತ್ತದ 'ಕ್ವಿಟ್ ಇಂಡಿಯಾ ಸ್ಮಾರಕ'ದವರೆಗೆ ಸಾಗಬೇಕಿತ್ತು. ಸುಮಾರು 200 ರಿಂದ 300 ಕಾರ್ಯಕರ್ತರು ಕೈಯಲ್ಲಿ ತ್ರಿವರ್ಣ ಧ್ವಜ ಹಿಡಿದು ಮೆರವಣಿಗೆ ನಡೆಸಲು ಸಿದ್ಧತೆ ಮಾಡಿಕೊಂಡಿದ್ದರು. ಆದರೆ ಪೊಲೀಸರ ಎಂಟ್ರಿಯಿಂದ ರೆಡಿ ಮಾಡಿಕೊಂಡಿದ್ದ ಪ್ಲಾನ್ ಫ್ಲಾಪ್ ಆಗಿದೆ.

# ಮಳೆಗಾಲದಲ್ಲೂ ದಾಖಲೆ ಮಟ್ಟಕ್ಕೇರಿದ ಬೇಡಿಕೆ: ಬೇಸಿಗೆ ಆರಂಭಕ್ಕೂ ಮುನ್ನವೇ ವಿದ್ಯುತ್ ಅಭಾವದ ಆತಂಕ, ಇಂಧನ ಇಲಾಖೆಗೆ ಸವಾಲು

**ಬೆಂಗಳೂರು, ಅ.16:** ರಾಜ್ಯದಲ್ಲಿ ಇನ್ನೂ ಬೇಸಿಗೆ ಆರಂಭವಾಗುವ ಮುನ್ನವೇ ವಿದ್ಯುತ್ ಕೊರತೆಯ ಆತಂಕ ಎದುರಾಗಿದೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ವಿದ್ಯುತ್ ಬೇಡಿಕೆ ಕಡಿಮೆಯಾಗುವುದು ವಾಡಿಕೆ. ಆದರೆ ಈ ಬಾರಿ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲೇ ವಿದ್ಯುತ್ ಬೇಡಿಕೆ ದಾಖಲೆಯ ಮಟ್ಟಕ್ಕೆ ತಲುಪಿರುವುದು ಇಂಧನ ಇಲಾಖೆಗೆ ಸವಾಲಾಗಿ ಪರಿಣಮಿಸಿದೆ. ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ ಮತ್ತಷ್ಟು ಹೆಚ್ಚಾದರೆ ಪರಿಸ್ಥಿತಿಯನ್ನು ನಿಭಾಯಿಸುವುದು ಹೇಗೆ ಎಂಬ ಪ್ರಶ್ನೆ ಎದುರಾಗಿದೆ.

ರಾಜ್ಯದಲ್ಲಿ ವಿದ್ಯುತ್ ಕೊರತೆ ಎದುರಾಗು ತ್ತಿರುವ ಕುರಿತು ಅಧಿಕಾರಿಗಳ ಮಾಹಿತಿಯೇ ಆತಂಕಕ್ಕೆ ಕಾರಣವಾಗಿದೆ. ಬೆಸ್ಕಾಂ ವ್ಯಾಪ್ತಿಯಲ್ಲಿ ಮಳೆಗಾಲದಲ್ಲೇ ದಾಖಲೆಯ ವಿದ್ಯುತ್ ಬೇಡಿಕೆ ದಾಖಲಾಗಿದ್ದು, ಒಂದು ದಿನದಲ್ಲಿ ಸುಮಾರು 18 ಸಾವಿರ ಮೆಗಾವ್ಯಾಟ್ ಬೇಡಿಕೆ ಎದುರಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ಇನ್ನು ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ (ಎಸ್ಕಾಂ) ವ್ಯಾಪ್ತಿಯಲ್ಲಿ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರವೂ ಸಮಸ್ಯೆಯನ್ನು ಗಂಭೀರಗೊಳಿಸಿದೆ.

ಸಾಮಾನ್ಯವಾಗಿ ಮಳೆಗಾಲದಲ್ಲಿ ವಿದ್ಯುತ್ ಬೇಡಿಕೆ ದಿನಕ್ಕೆ ಸುಮಾರು





10 ಸಾವಿರ ಮೆಗಾವ್ಯಾಟ್‌ಗೆ ಇಳಿಯುತ್ತಿತ್ತು. ಆದರೆ ಈ ಬಾರಿ ಬೇಡಿಕೆ ನಿರೀಕ್ಷೆಗೂ ಮೀರಿ ಹೆಚ್ಚಾಗಿದೆ. ಬೇಸಿಗೆ ಸಂದರ್ಭದಲ್ಲಿ ಇದೇ ಪ್ರಮಾಣದ ಬೇಡಿಕೆ ಮುಂದುವರಿದು ಇನ್ನಷ್ಟು ಏರಿಕೆಯಾದರೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ ಎಂಬ ಆತಂಕ ವ್ಯಕ್ತವಾಗಿದೆ.

ರಾಜ್ಯದಲ್ಲಿ ವಾರ್ಷಿಕವಾಗಿ ಸುಮಾರು 93,194 ದಶಲಕ್ಷ ಯೂನಿಟ್ ವಿದ್ಯುತ್ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ತಿಂಗಳಿಗೆ ಸರಾಸರಿ 8 ಸಾವಿರದಿಂದ 10 ಸಾವಿರ ದಶಲಕ್ಷ ಯೂನಿಟ್ ವಿದ್ಯುತ್ ಬಳಕೆಯಾಗುತ್ತಿದ್ದು, ದಿನಕ್ಕೆ ಸರಾಸರಿ 255 ದಶಲಕ್ಷ ಯೂನಿಟ್ ಅಗತ್ಯವಿದೆ. ಆದರೆ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಕೆ ಮಾಡುವುದು ಸವಾಲಾಗಿದೆ.

ಕೆಲವು ಅವಧಿಗಳಲ್ಲಿ ರಾಜ್ಯದಲ್ಲಿ ದಿನಕ್ಕೆ 2 ಸಾವಿರದಿಂದ 4 ಸಾವಿರ ಮೆಗಾವ್ಯಾಟ್‌ವರೆಗೆ ವಿದ್ಯುತ್ ಕೊರತೆ ಉಂಟಾಗುವ ಆತಂಕವಿದೆ. ಇದರ ನಡುವೆ ಕಲ್ಲಿದ್ದಲು ಸಂಗ್ರಹ ಮತ್ತು ಲಭ್ಯತೆಯ ವಿಚಾರದಲ್ಲೂ ಸಮಸ್ಯೆ ಎದುರಾಗಿರುವುದು ವಿದ್ಯುತ್ ಉತ್ಪಾದನೆ ಹಾಗೂ ಪೂರೈಕೆಯ ಬಗ್ಗೆ ಕಳವಳ ಹೆಚ್ಚಿಸಿದೆ.

ಸಾಮಾನ್ಯವಾಗಿ ಮಾರ್ಚ್‌ನಿಂದ ಮೇ ತಿಂಗಳವರೆಗೆ ಬೇಸಿಗೆಯ ಕಾರಣ ವಿದ್ಯುತ್ ಬೇಡಿಕೆ ಹೆಚ್ಚಿರುತ್ತದೆ. ಫ್ಯಾನ್, ಏರ್‌ಕಂಡೀಷನರ್ ಸೇರಿ ತಂಪು ಸಾಧನಗಳ ಬಳಕೆ ಹೆಚ್ಚುವುದರ ಜತೆಗೆ ಕೃಷಿ ಪಂಪ್‌ಸೆಟ್‌ಗಳು ಮತ್ತು ಕೈಗಾರಿಕೆಗಳ ವಿದ್ಯುತ್ ಬಳಕೆಯೂ ಏರಿಕೆಯಾಗುತ್ತದೆ.

ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮಳೆಗಾಲದಲ್ಲಿ ಬೇಡಿಕೆ ತುಸು ಕಡಿಮೆಯಾಗುವ ನಿರೀಕ್ಷೆ ಇರುತ್ತದೆ. ನವೆಂಬರ್‌ನಿಂದ ಫೆಬ್ರವರಿವರೆಗೆ ಚಳಿಗಾಲದ ಅವಧಿಯಲ್ಲಿಯೂ ಬೇಡಿಕೆ ಗಣನೀಯವಾಗಿರುತ್ತದೆ. ಆದರೆ ಈ ಬಾರಿ ಮಳೆಗಾಲದಲ್ಲೇ ಬೇಸಿಗೆಯ ಮಟ್ಟದ ಬೇಡಿಕೆ ದಾಖಲಾಗಿರುವುದು ಮುಂದಿನ ತಿಂಗಳುಗಳಲ್ಲಿ ವಿದ್ಯುತ್ ನಿರ್ವಹಣೆಯ ಬಗ್ಗೆ ಆತಂಕ ಮೂಡಿಸಿದೆ.

**ಬೇಡಿಕೆ–ಪೂರೈಕೆ ನಡುವಿನ ಅಂತರ:** ಲಭ್ಯವಿರುವ ಅಂಕಿ–ಅಂಶಗಳ ಪ್ರಕಾರ, 2025ರ ಏಪ್ರಿಲ್‌ನಲ್ಲಿ 18,548 ಮೆಗಾವ್ಯಾಟ್ ಬೇಡಿಕೆಗೆ 18,502 ಮೆಗಾವ್ಯಾಟ್ ಪೂರೈಕೆಯಾಗಿದ್ದು, 46 ಮೆಗಾವ್ಯಾಟ್ ಕೊರತೆ ದಾಖಲಾಗಿತ್ತು.

ಅದೇ ವರ್ಷದ ಜೂನ್‌ನಲ್ಲಿ 17,657 ಮೆಗಾವ್ಯಾಟ್ ಬೇಡಿಕೆಗೆ 16,507 ಮೆಗಾವ್ಯಾಟ್ ಪೂರೈಕೆಯಾಗಿ 1,150 ಮೆಗಾವ್ಯಾಟ್ ಕೊರತೆ ಉಂಟಾಗಿತ್ತು. 2025ರ ಡಿಸೆಂಬರ್‌ನಲ್ಲಿ 17,581 ಮೆಗಾವ್ಯಾಟ್ ಬೇಡಿಕೆಗೆ 15,117 ಮೆಗಾವ್ಯಾಟ್ ಪೂರೈಕೆಯಾಗಿದ್ದು, 2,464 ಮೆಗಾವ್ಯಾಟ್ ಅಂತರ ದಾಖಲಾಗಿದೆ. 2026ರ ಫೆಬ್ರವರಿಯಲ್ಲಿ 19,787 ಮೆಗಾವ್ಯಾಟ್ ಬೇಡಿಕೆಗೆ 18,135 ಮೆಗಾವ್ಯಾಟ್ ಪೂರೈಕೆ ಯಾಗಿದ್ದು, 1,652 ಮೆಗಾವ್ಯಾಟ್ ಕೊರತೆ ವರದಿಯಾಗಿದೆ. ಮಾರ್ಚ್‌ನಲ್ಲಿ 19,735 ಮೆಗಾವ್ಯಾಟ್ ಬೇಡಿಕೆಗೆ 17,731 ಮೆಗಾವ್ಯಾಟ್ ಪೂರೈಕೆಯಾಗಿರು ವುದಾಗಿ ಅಂಕಿ–ಅಂಶಗಳು ತಿಳಿಸಿವೆ.

## ಅಕ್ರಮವಾಗಿ ಚಿನ್ನ ಸಾಗಿಸುತ್ತಿದ್ದ ಮೂವರ ಸೆರೆ, 2.75 ಕೆ.ಜಿ. ಚಿನ್ನ ಜಪ್ತಿ

**ಬೆಂಗಳೂರು, ಅ.16:** ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಕ್ರಮವಾಗಿ ಚಿನ್ನ ಸಾಗಿಸುತ್ತಿದ್ದ ಇಬ್ಬರು ಪ್ರಯಾಣಿಕರು ಹಾಗೂ ಓರ್ವ ಸಿಬ್ಬಂದಿ ಬಂಧಿಸಲಾಗಿದೆ.

ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ 2.75 ಕೆಜಿ ಚಿನ್ನವನ್ನು ಜಪ್ತಿ ಮಾಡ ಲಾಗಿದೆ.

ಸಿಂಗಾಪುರದಿಂದ ಬೆಂಗಳೂರು ಮೂಲಕ ದುಬೈಗೆ ತೆರಳಲು ಬಂದಿದ್ದ ಮೊಹಮ್ಮದ್ ಅಖಿಲ್ ಹಾಗೂ ದುಬೈನಿಂದ ಬೆಂಗಳೂರು ಮೂಲಕ ಮಾಲ್ಡೀವ್ಸ್‌ಗೆ ತೆರಳುತ್ತಿದ್ದ ಮೊಹಮ್ಮದ್ ನಾಸಿರ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ. ಇಬ್ಬರೂ ಶ್ರೀಲಂಕಾ ಪ್ರಜೆಗಳಾಗಿದ್ದು, ಟ್ರಾನ್ಸಿಟ್ ವಿಮಾನ ಮೂಲಕ ದುಬೈ ಮತ್ತು ಮಾಲ್ಡೀವ್ಸ್‌ಗೆ ತೆರಳಲು ಬಂದಿದ್ದರು.

ಈ ಪ್ರಯಾಣಿಕರು ಕೆಐಎಬಿಯಲ್ಲಿ ಟ್ರಾವೆಲ್ ಫುಡ್ ಸರ್ವಿಸ್ (ಟಿಎಫ್‌ಎಸ್) ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಎಬಿನ್ ಜೋಸ್ ಎಂಬಾತನಿಗೆ ಈ ಚಿನ್ನ ನೀಡಲು ಪ್ಲ್ಯಾನ್ ಮಾಡಿದ್ದರು. ಆದರೆ, ಚಿನ್ನ ಹಸ್ತಾಂತರಿಸುವ ಮುನ್ನವೇ ಕಾರ್ಯಾ ಚರಣೆ ನಡೆಸಿದ ಡಿಆರ್‌ಐ ಅಧಿಕಾರಿಗಳು ಇಬ್ಬರು ಪ್ರಯಾಣಿಕರು ಹಾಗೂ ಸಿಬ್ಬಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.


ಮೈಸೂರಿನಲ್ಲಿ ದಸರಾ ದೀಪಾಲಂಕಾರಗಳಿಂದ ಎಲ್ಲ ಬೀದಿಗಳು ಮತ್ತು ವೃತ್ತಗಳು ಕಂಗೊಳಿಸುತ್ತಿದ್ದು, ವಿದ್ಯುತ್ ದೀಪಗಳಿಂದ ಬೆಳಗುತ್ತಿರುವ ಕೆ.ಆರ್. ವೃತ್ತವು ಎಲ್ಲರನ್ನೂ ಆಕರ್ಷಿಸುತ್ತಿದೆ.

### ಕೇಂದ್ರೀಯ ವಿವಿಯಲ್ಲಿ ರಾಷ್ಟ್ರೀಯ ವಿಚಾರಸಂಕಿರಣ

## ದೇಶೀಯ ಔಷಧಿ ಸಸ್ಯಗಳ ಉತ್ಪನ್ನಗಳಿಂದ ಆರ್ಥಿಕ ಅಭಿವೃದ್ಧಿ: ಡಾ.ರಾಘವೇಂದ್ರರಾವ್



**ಕಲಬುರಗಿ, ಅ. 15:** ದೇಶೀಯ ಔಷಧೀಯ ಸಸ್ಯಗಳನ್ನು ಉತ್ಪನ್ನಗಳಾಗಿ ಅಭಿವೃದ್ಧಿಪಡಿಸಿ ದೇಶದ ಆರ್ಥಿಕತೆಯನ್ನು ಬಲಪಡಿಸಬೇಕು ಎಂದು ಪಿತಾಂಬರ್ ಪಂತ್ ರಾಷ್ಟ್ರೀಯ ಪರಿಸರ ಫೆಲೋ ಹಾಗೂ ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಸಮಿತಿಯ ಅಧ್ಯಕ್ಷ ಡಾ. ಆರ್. ರಾಘವೇಂದ್ರರಾವ್ ಅವರು ಹೇಳಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ವತಿಯಿಂದ ಇಂದು 'ಸಸ್ಯ ವಿಜ್ಞಾನದಲ್ಲಿ ಹೊಸ ಆಯಾಮಗಳು; ಶೈಕ್ಷಣಿಕ ಶ್ರೇಷ್ಠತೆಯಿಂದ ಸಾಂಸ್ಥಿಕ ನಾಯಕತ್ವದತ್ತ' ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ, ಸಸ್ಯಶಾಸ್ತ್ರ ಸಂಘಕ್ಕೆ ಚಾಲನೆ ಹಾಗೂ ಸಂಘದ ಲಾಂಛನವನ್ನು ಅನಾವರಣ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ದೇಶದಲ್ಲಿ ಅಪಾರ ಔಷಧೀಯ ಗುಣಗಳನ್ನು ಹೊಂದಿರುವ ಸಾವಿರಾರು ಸಸ್ಯ ಪ್ರಭೇದಗಳಿವೆ. ದಖನ್ ಪ್ರಸ್ಥಭೂಮಿ, ಪಶ್ಚಿಮ ಘಟ್ಟಗಳು, ಈಶಾನ್ಯ ಭಾರತ, ಪೂರ್ವ ಹಿಮಾಲಯ ಹಾಗೂ ಅಂಡಮಾನ್-ನಿಕೋಬಾರ್ ದ್ವೀಪಗಳು ವೈವಿಧ್ಯಮಯ ಸಸ್ಯ ಸಂಪತ್ತಿನ ನೆಲೆಗಳಾಗಿವೆ. ಅವುಗಳನ್ನು ಗುರುತಿಸಿ ಉಪಯೋಗಿಸಬೇಕಾಗಿದೆ ಎಂದರು.

ಈ ಸಸ್ಯಗಳ ಔಷಧೀಯ ಗುಣಗಳ ಕುರಿತು ವೈಜ್ಞಾನಿಕ ಸಂಶೋಧನೆ ನಡೆಸಿ, ಅವುಗಳನ್ನು ಮೌಲ್ಯವರ್ಧಿತ ಔಷಧೀಯ ಉತ್ಪನ್ನಗಳಾಗಿ ಅಭಿವೃದ್ಧಿಪಡಿಸುವ ಮೂಲಕ ದೇಶದ ಆರ್ಥಿಕತೆಯನ್ನು ಬಲಪಡಿಸಬೇಕು ಹಾಗೂ ಭಾರತೀಯ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಬೇಕು ಎಂದು ಅವರು ಹೇಳಿದರು.

ಭಾರತದ ಸಸ್ಯಶಾಸ್ತ್ರ ಮತ್ತು ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸುಶ್ರುತ ಮತ್ತು ಚರಕ ಅವರಂತಹ ಪ್ರಾಚೀನ ವೈದ್ಯರು ಔಷಧೀಯ ಸಸ್ಯಗಳ ಗುಣಗಳನ್ನು ಗುರುತಿಸಿ, ಆರೋಗ್ಯ ಸಂರಕ್ಷಣೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಈ ಪರಂಪರೆಯನ್ನು ಮುಂದುವರಿಸಲು ದೇಶದ ಔಷಧೀಯ ಸಸ್ಯ ಸಂಪತ್ತನ್ನು ಗುರುತಿಸಿ, ಸಂರಕ್ಷಿಸುವುದರ ಜೊತೆಗೆ ಅದರ ಔಷಧೀಯ ಸಾಮರ್ಥ್ಯವನ್ನು ವೈಜ್ಞಾನಿಕವಾಗಿ ಬಳಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಸಸ್ಯಶಾಸ್ತ್ರ, ರಸಾಯನಶಾಸ್ತ್ರ ಮತ್ತು ಅಣ್ವಿಕ ಜೀವಶಾಸ್ತ್ರ ಸೇರಿದಂತೆ ವಿವಿಧ ವಿಜ್ಞಾನ ವಿಭಾಗಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಬಹುಶಿಸ್ತೀಯ ಸಂಶೋಧನೆಯ ಮೂಲಕ ಔಷಧೀಯ ಸಸ್ಯಗಳ ಗುಣಗಳನ್ನು ಗುರುತಿಸಿ, ಅವುಗಳ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳುವ ಅಗತ್ಯವಿದೆ ಎಂದು ಅವರು ಕರೆ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು ಮಾತನಾಡಿ, ವಿದ್ಯಾರ್ಥಿಗಳು ಸಸ್ಯಶಾಸ್ತ್ರ ಕ್ಷೇತ್ರದಲ್ಲಿ ಸಂಶೋಧನೆಗೆ ಹೆಚ್ಚಿನ ಒತ್ತು ನೀಡಬೇಕು. ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಶೈಕ್ಷಣಿಕ ಹಾಗೂ ಸಂಶೋಧನಾ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ತಮ್ಮ ಜ್ಞಾನ ಮತ್ತು ಕೌಶಲಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಅಸ್ಸಾಂ ರಾಜ್ಯದ ಮಾಜಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ಹಾಗೂ ಮುಖ್ಯ ವನ್ಯಜೀವಿ ವಾರ್ಡನ್ ಟಿ. ವೇಣುಧರ್ ರೆಡ್ಡಿ, ಐಎಫ್ಎಸ್ (ನಿವೃತ್ತ) ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ, ಸಸ್ಯಶಾಸ್ತ್ರವು ಪರಿಸರ ವ್ಯವಸ್ಥೆ ಮತ್ತು ಸುಸ್ಥಿರ ಅಭಿವೃದ್ಧಿಯೊಂದಿಗೆ ನಿಕಟ ಸಂಬಂಧ ಹೊಂದಿದೆ. ವಿದ್ಯಾರ್ಥಿಗಳು ಶೈಕ್ಷಣಿಕ ಸಾಧನೆಯ ಜೊತೆಗೆ ವೃತ್ತಿಜೀವನದ ವಿವಿಧ ಅವಕಾಶಗಳು ಹಾಗೂ ಸಮಾಜಕ್ಕೆ ನೀಡಬಹುದಾದ ಕೊಡುಗೆಗಳ ಬಗ್ಗೆಯೂ ಗಮನಹರಿಸಬೇಕು ಎಂದರು.

### ಕೋಳಾರ, ಅಲಿಯಾಬಾದ್, ಅಮಲಾಪುರ

## ಗ್ರಾಮಪಂಚಾಯಿತಿಗಳಲ್ಲಿ ಅಕ್ರಮ; ತನಿಖೆಗೆ ಸಚಿವ ಖಂಡ್ರೆ ಆದೇಶ



**ಬೀದರ, ಅ. 16:** ಗ್ರಾಮ ಪಂಚಾಯತಿಗಳು ಪಟ್ಟಣ ಪಂಚಾಯತಿಯಾಗಿ ಇಲ್ಲವೇ ನಗರಸಭೆ, ನಗರಪಾಲಿಕೆಯಲ್ಲಿ ಸೇರ್ಪಡೆಯಾಗಿ ಸಂಪೂರ್ಣ ಹಸ್ತಾಂತರವಾದ ಬಳಿಕವೂ ಗ್ರಾ.ಪಂ. ಬ್ಯಾಂಕ್ ಖಾತೆಗಳಲ್ಲಿ ವಹಿವಾಟು ನಡೆದಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಸಮಗ್ರ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.

ಈ ಸಂಬಂಧ ಇಲಾಖೆಯ ಕಾರ್ಯದರ್ಶಿಯವರಿಗೆ ಲಿಖಿತ ಸೂಚನೆ ನೀಡಿರುವ ಅವರು, ಬ್ಯಾಂಕ್ ಖಾತೆಯ ಸಹಿತ ಕೆಲವು ಗ್ರಾಮ ಪಂಚಾಯತಿಗಳು ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಆದ ಬಳಿಕವೂ ಕೆಲವು ಪಂಚಾಯತಿಗಳಲ್ಲಿ ಅಧಿಕೃತ ಮಾದರಿ ಸಹಿ ಮತ್ತು ಸೀಲು ಬಳಸಿ ಬ್ಯಾಂಕ್ ಖಾತೆಯ ವಹಿವಾಟು ನಡೆದಿದೆ ಎಂಬ ವರದಿ ಹಿನ್ನೆಲೆಯಲ್ಲಿ ಈ ತನಿಖೆಗೆ ಆದೇಶಿಸಿದ್ದಾರೆ.

ಕೆಲವು ಪ್ರಕರಣಗಳಲ್ಲಿ ಗ್ರಾಮ ಪಂಚಾಯತಿಯ ಅಧೀನದಲ್ಲಿದ್ದ ಕೆಲವು ಗ್ರಾಮಗಳು ಮಾತ್ರವೇ ನಗರಸಭೆ, ನಗರ ಪಾಲಿಕೆಗೆ ಹಸ್ತಾಂತರವಾಗಿದ್ದು, ಹಸ್ತಾಂತರಿತ ಗ್ರಾಮಗಳಲ್ಲಿ ಪಂಚಾಯತಿ ವತಿಯಿಂದ ಕೈಗೊಂಡಿದ್ದ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಪಂಚಾಯತಿಯೇ ಹಣ ಭರಿಸುವಂತಾಗಿದೆ ಎಂಬ ಮಾಹಿತಿಯೂ ಬಂದಿದ್ದು, ಈ ಬಗ್ಗೆಯೂ ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ.

ಹಸ್ತಾಂತರ ಆಗಿರುವ ಗ್ರಾಮ ಪಂಚಾಯತಿಗಳ ಬ್ಯಾಂಕ್ ಖಾತೆಗಳಲ್ಲಿ ಅಕ್ರಮವಾಗಿ ವಹಿವಾಟಾ ಗಿದೆಯೇ. ಹಸ್ತಾಂತರ ನಂತರವೂ ಗ್ರಾಮಗಳ ಕಾಮಗಾರಿಗೆ ಗ್ರಾಮ ಪಂಚಾಯತಿ ವತಿಯಿಂದ ಹಣ ಭರಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸಲು ಒಂದು ಸಮಿತಿ ರಚಿಸಿ, ವರದಿಯನ್ನು 30 ದಿನಗಳ ಒಳಗಾಗಿ ಕಡತದಲ್ಲಿ ಸಲ್ಲಿಸಲು ಸೂಚನೆ ನೀಡಿದ್ದಾರೆ.

ಕೋಳಾರ, ಅಲಿಯಾಬಾದ್, ಅಮಲಾಪೂರ ಗ್ರಾ.ಪಂ.ನಲ್ಲಿ ಅಕ್ರಮ ಆರೋಪ: ಬೀದರ ನಗರ ಪಾಲಿಕೆಗೆ ಸಂಪೂರ್ಣ ಹಸ್ತಾಂತರವಾದ ತರುವಾಯ ಬೀದರ್ ಜಿಲ್ಲಾ ಪಂಚಾಯತಿ ಅಧೀನದಲ್ಲಿದ್ದ ಕೋಳಾರ, ಅಲಿಯಾಬಾದ್ ಮತ್ತು ಅಮಲಾಪೂರ ಗ್ರಾಮ ಪಂಚಾಯತಿಗಳ ಬ್ಯಾಂಕ್ ಖಾತೆಗಳಲ್ಲಿ ವಹಿವಾಟು ನಡೆದು ಹಣ ವೆಚ್ಚವಾಗಿರುವ ಬಗ್ಗೆಯೂ ತನಿಖೆಗೆ ಆದೇಶ ನೀಡಿದ್ದಾರೆ.

ಇದರಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದ ಸಿಬ್ಬಂದಿ ಮತ್ತು ಬ್ಯಾಂಕ್ ಸಿಬ್ಬಂದಿ ಶಾಮೀಲಾಗಿರುವ ಸಾಧ್ಯತೆ ಯಿದ್ದು, ಹಸ್ತಾಂತರಗೊಂಡ ಬ್ಯಾಂಕ್ ಖಾತೆಗಳ ವಹಿವಾಟು ನಡೆಯಲು ಹೇಗೆ ಸಾಧ್ಯ. ಇದಕ್ಕೆ ಅಧಿಕೃತ ಆದೇಶಗಳಿತ್ತೇ ಅಥವಾ ಅಧಿಕೃತ ಮಾದರಿ ಸಹಿ ಮತ್ತು ಕಚೇರಿಯ ಸೀಲುಗಳ ದುರ್ಬಳಕೆ ಆಗಿದೆಯೇ ಎಂಬ ಬಗ್ಗೆ ತನಿಖೆ ಮಾಡಿಸಿ, ಸಹಿಗಳ ನೈಜತೆಯನ್ನು ತಿಳಿಯಲು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ, ಸಂಬಂಧಿತ ಸಿಬ್ಬಂದಿಯನ್ನು ಅಮಾನತು ಮಾಡಿ, ಸ್ಥಳೀಯ ಪೊಲೀಸ್ ಠಾಣೆಗೆ ದೂರು ದಾಖಲಿಸಿ, ಎಫ್.ಐ.ಆರ್. ಮಾಡಿಸಲು ಕ್ರಮ ವಹಿಸುವಂತೆಯೂ ಸೂಚಿಸಿದ್ದಾರೆ.

## ಮಹಾಪುರುಷರ ವೃತ್ತದಲ್ಲಿ ವೈನ್‌ಶಾಪ್ ಸ್ಥಳಾಂತರಿಸಲು ಆಗ್ರಹಿಸಿ ಹೋರಾಟ




**ಬೀದರ್, ಅ. 16:** ನಗರದಲ್ಲಿ ವಿವಿಧ ಮಹಾಪುರುಷರ ಹೆಸರಿನಲ್ಲಿರುವ ವೃತ್ತಗಳ ಸಮೀಪದಲ್ಲಿರುವ ವೈನ್‌ಶಾಪ್ ಹಾಗೂ ಬಾರ್ ಆಯಂಡ್ ರೆಸ್ಟೋರೆಂಟ್‌ಗಳನ್ನು ತಕ್ಷಣ ಸ್ಥಳಾಂತರಿಸಬೇಕೆಂದು ಆಗ್ರಹಿಸಿ, ದಲಿತ ಸಂಘಟನೆಗಳ ಒಕ್ಕೂಟ ಹಾಗೂ ಅಂಬೇಡ್ಕರ್ ಯುವ ಸೇನೆಯ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಅಂಬೇಡ್ಕರ್ ವೃತ್ತದಿಂದ ಆರಂಭವಾದ ಪ್ರತಿಭಟನಾ ರ್‍ಯಾಲಿಯು ಅಬಕಾರಿ ಇಲಾಖೆ ಕಚೇರಿವರೆಗೆ ನಡೆಯಿತು.

ಬಳಿಕ ಪ್ರತಿಭಟನಕಾರರು ಅಬಕಾರಿ ಉಪ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಿ, ಅಬಕಾರಿ ಇಲಾಖೆಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಜಿಲ್ಲೆಯಾದ್ಯಂತ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಬೇಕು. ಬೀದರ್ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮಹಾಪುರುಷರ ವೃತ್ತಗಳು, ಸರ್ಕಾರಿ ಶಾಲಾ-ಕಾಲೇಜುಗಳು ಮತ್ತು ದೇವಸ್ಥಾನಗಳ ಸಮೀಪ ಮದ್ಯ ಮಾರಾಟ ನಡೆಯುತ್ತಿದೆ.

ಪರವಾನಗಿ ಇಲ್ಲದೆ ಕಿರಾಣಿ ಅಂಗಡಿಗಳು, ಪಾನ್‌ಶಾಪ್‌ಗಳು, ಹೋಟೆಲ್‌ಗಳು ಹಾಗೂ ಧಾಬಾಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ ಎಂದು ಪ್ರತಿಭಟನಕಾರರು ಆರೋಪಿಸಿದರು.

## ಸಿದ್ದರಾಮಯ್ಯ ಚಾರಿತ್ರ್ಯಹರಣಕ್ಕೆ ಯತ್ನ ಖಂಡನೀಯ: ಕೆ.ಎಸ್.ಶಿವರಾಮು

**ಮೈಸೂರು, ಅ.16–** ಜನಪರ ಯೋಜನೆಗಳ ಅನುಷ್ಠಾನದ ಮೂಲಕ ಸಾಮಾಜಿಕ ನ್ಯಾಯದ ಧ್ವನಿಯಾದ ಸಿದ್ದರಾಮಯ್ಯ ಅವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಚಾರಿತ್ರ್ಯವಧೆಗೆ ಪ್ರಯತ್ನಿಸುತ್ತಿರುವುದು ಖಂಡನೀಯ ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮು ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅವರ ವಿರುದ್ಧ ವ್ಯವಸ್ಥಿತ ಸಂಚು ನಡೆಯುತ್ತಿದೆ. ಶುದ್ಧಹಸ್ತದ ರಾಜಕಾರಣಿಯ ಜೀವನಕ್ಕೆ ಮಸಿ ಬಳಿಯುವ ಯತ್ನ ಮಾಡಲಾಗುತ್ತಿದೆ. ಇದನ್ನು ಸಹಿಸಲಾಗದು. ಅವರನ್ನು ಬೆಂಬಲಿಸಿ ಹಾಗೂ ಮಸಿ ಬಳಿಯಲು ಪ್ರಯತ್ನಿಸುತ್ತಿರುವವರ ವಿರುದ್ಧ ಅ.23ರಿಂದ ಇಲ್ಲಿ ಚಳವಳಿ ನಡೆಸಲಾಗುವುದು ಎಂದು ತಿಳಿಸಿದರು.

ಯಾವುದೇ ವಿಡಿಯೊ, ಸಂಭಾಷಣೆ ಅಥವಾ ಆರೋಪವನ್ನು ಅದರ ಸಂಪೂರ್ಣ ಹಿನ್ನೆಲೆ, ವಿಶ್ವಾಸಾರ್ಹತೆ ಮತ್ತು ಸಾಕ್ಷ್ಯಗಳ ಆಧಾರದ ಮೇಲೆ ಪರಿಶೀಲಿಸಬೇಕು. ಆರೋಪಿಸಿದರು ಸಾಕ್ಷಿ ಮುಂದಿಡಬೇಕು. ಸಂಬಂಧಪಟ್ಟವರಿಗೂ ಸ್ಪಷ್ಟನೆ ನೀಡಲು ಅವಕಾಶ ಇರಬೇಕು ಎಂದರು.

ಸಿದ್ದರಾಮಯ್ಯ ಅವರು ಜನರಿಗಾಗಿ ಕೈಗೊಂಡ ಪ್ರಯತ್ನಗಳನ್ನು ಕಡೆಗಣಿಸಿ, ಯಾವುದೋ ಆರೋಪದ ಆಧಾರದ ಮೇಲೆ ಅವರ ವ್ಯಕ್ತಿತ್ವವನ್ನು ನಿರ್ಧರಿಸುವುದು ಸರಿಯಲ್ಲ ಎಂದು ಹೇಳಿದರು.

ಕುತಂತ್ರಿಗಳ ಮುಖವಾಡ ಬಯಲು ಮಾಡಲೆಂದೇ ಸಿದ್ದರಾಮಯ್ಯ ಅವರು ದೂರು ನೀಡಿದ್ದಾರೆ. ಇದು, ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ ಎಂದರು.

ಅವರ ಹೆಸರು ಹೇಳಿಕೊಂಡು, ಪ್ರಭಾವ ಬಳಸಿಕೊಂಡು ಗೆದ್ದ ಶಾಸಕರು ಸಿದ್ದರಾಮಯ್ಯ ಪರವಾಗಿ ಮಾತನಾಡದಿರುವುದು ಬೇಸರದ ಸಂಗತಿ. ಮುಂದಿನ ದಿನಗಳಲ್ಲಿ ಅಭಿಮಾನಿಗಳು ತಕ್ಕ ಪಾಠ ಕಲಿಸುತ್ತಾರೆ ಎಂದು ಹೇಳಿದರು.

## ದಸರಾ: ಗಮನಸೆಳೆದ ಪಾರಂಪರಿಕ ಸೈಕಲ್ ಸವಾರಿ



**ಮೈಸೂರು, ಅ.16:** ದಸರಾ ಅಂಗವಾಗಿ ಇಲ್ಲಿ ಶುಕ್ರವಾರ ಆಯೋಜಿಸಿದ್ದ 'ಪಾರಂಪರಿಕ ಸೈಕಲ್ ಸವಾರಿ'ಯು ಸಾಂಸ್ಕೃತಿಕ ಪರಂಪರೆ ಮತ್ತು ಆರೋಗ್ಯಕರ ಜೀವನಶೈಲಿಯ ಮಹತ್ವವನ್ನು ಸಾರಿತು. ಸೈಕಲ್ ಬಳಕೆಯ ಪ್ರಯೋಜನವನ್ನೂ ತಿಳಿಸಿಕೊಟ್ಟಿತು.

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಚುಮುಚುಮು ಚಳಿಯ ಆಹ್ಲಾದಕರ ವಾತಾವರಣದಲ್ಲಿ ಸವಾರಿ ನಡೆಯಿತು.

ರಂಗಾಚಾರ್ಲು ಪುರಭವನದ ಬಳಿಯಿಂದ ಆರಂಭವಾಗಿ ಹಲವು ಪಾರಂಪರಿಕ ಕಟ್ಟಡಗಳ ಬಳಿಗೆ ಸಂಚರಿಸಿತು. ಇತಿಹಾಸ ತಜ್ಞರು ನಿಗದಿತ ಕಟ್ಟಡ, ಸ್ಥಳದ ಪರಂಪರೆ ಯನ್ನು ತಿಳಿಸಿಕೊಟ್ಟರು. ಯುವಜನರು ಕೂಡ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಸವಾರಿಗೆ ಚಾಲನೆ ನೀಡಿದ ಪುರಾತತ್ವ ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆಯ ಆಯುಕ್ತ ಪಿ.ಶಿವರಾಜು ಮಾತನಾಡಿ, 'ಕರ್ನಾಟಕ ಸುಸಂಸ್ಕೃತ ಹಾಗೂ ಪರಂಪರೆಗೆ ಹೆಸರಾಗಿದೆ. ಜಿಲ್ಲೆಯು ಸಾಂಸ್ಕೃತಿಕ ರಾಜಧಾನಿಯಾಗಿ ಮಾತ್ರವಲ್ಲದೆ ಸ್ವರ್ಗ ಸದೃಶ್ಯವಾದ ಇತಿಹಾಸವನ್ನೂ ಹೊಂದಿದೆ. ಈ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ– ಬೆಳೆಸುವುದು ಎಲ್ಲರ ಕರ್ತವ್ಯವಾಗಿದೆ' ಎಂದು ಹೇಳಿದರು.

ವಿಜಯನಗರದ ಅರಸರಿಂದ ಆರಂಭವಾದ ದಸರಾ ಸಂಸ್ಕೃತಿಯು ನಮ್ಮ ಪರಂಪರೆಯನ್ನು ಇಡೀ ಜಗತ್ತಿಗೆ ಪರಿಚಯಿಸುತ್ತಿದೆ. ಇಂತಹ ಪರಂಪರೆಯನ್ನು ಕಾಪಾಡುವುದು ಇಲಾಖೆಯ ಗುರಿಯಾಗಿದೆ. ದಸರಾ ಆಚರಣೆಯ ಹಿನ್ನೆಲೆ, ಅದರ ಇತಿಹಾಸ ಮತ್ತು ನಮ್ಮ ಪ್ರಾಚೀನ ಸಂಸ್ಕೃತಿಯ ಬಗ್ಗೆ ಇಂದಿನ ಯುವಜನರು ಹಾಗೂ ಮಕ್ಕಳಲ್ಲಿ ಆಸಕ್ತಿ ಮೂಡಿಸಬೇಕು. ನಮ್ಮ ಹಿರಿಯರು ಉಳಿಸಿ ಬೆಳೆಸಿರುವ ದಸರಾ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕಾಗಿದೆ ಎಂದರು.

ಹಿರಿಯ ನ್ಯಾಯಾಧೀಶ ನಾಗರಾಜ್ ಸಿದ್ದಪ್ಪ ಅಂಕಸದೊಡ್ಡಿ ಮಾತನಾಡಿ, 'ದಿನನಿತ್ಯದ ಕೆಲಸಗಳಿಗೆ ಸೈಕಲ್ ಬಳಸುವುದರಿಂದ ಪರಿಸರ ಸಂರಕ್ಷಣೆ ಜೊತೆಗೆ ಆರೋಗ್ಯ ಕಾಪಾಡಿಕೊಳ್ಳುವುದಕ್ಕೂ ಸಹಕಾರಿ ಆಗುತ್ತದೆ. ನಮ್ಮ ಸ್ಮಾರಕಗಳು ಹಾಗೂ ಪ್ರಾಚೀನ ಕಟ್ಟಡಗಳನ್ನು ಸಂರಕ್ಷಿಸುವುದು ಸರ್ಕಾರ ಮತ್ತು ಸಾರ್ವಜನಿಕರೆಲ್ಲರ ಕರ್ತವ್ಯವಾಗಿದೆ' ಎಂದು ಹೇಳಿದರು.'ಪಾರಂಪರಿಕ ಕಟ್ಟಡಗಳನ್ನು ವಿರೂಪಗೊಳಿಸುವುದು ಅಥವಾ ಹಾಳುಮಾಡುವುದು ಅಪರಾಧವಾಗಿದೆ. ಅವುಗಳ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸಿಕೊಡಬೇಕು' ಎಂದರು.

ಟ್ರೆಕ್ಕಿಂಗ್ ಸಾಧಕಿ ಜಮ್ಮಡ ಪ್ರೀತ್ ಅಪ್ಪಯ್ಯ, ನಿವೃತ್ತ ಪ್ರಾಧ್ಯಾಪಕ ಎನ್.ಎಸ್.ರಂಗರಾಜು, ಕೆಎಸ್‌ಒಯು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮುಖ್ಯಸ್ಥ ಶೆಲ್ಪಪಿಳ್ಳೆ ಅಯ್ಯಂಗಾರ್ ಮಾತನಾಡಿದರು.

ಇಲಾಖೆಯ ಉಪ ನಿರ್ದೇಶಕಿ ಮಂಜುಳಾ ಪಾಲ್ಗೊಂಡಿದ್ದರು.

## ತಮ್ಮ ಘನತೆ, ಕುರ್ಚಿಗೆ ಎಚ್‌ಡಿಕೆ ಧಕ್ಕೆ ತಂದುಕೊಳ್ಳುತ್ತಿದ್ದಾರೆ: ಪ್ರಿಯಾಂಕ್ ಖರ್ಗೆ ವಾಗ್ದಾಳಿ



**ಮೈಸೂರು, ಅ.16:** ಎಚ್.ಡಿ. ಕುಮಾರಸ್ವಾಮಿ ಅವರು ತಮ್ಮ ಘನತೆ ಮತ್ತು ಕುರ್ಚಿಗೆ ಧಕ್ಕೆ ತಂದುಕೊಳ್ಳುತ್ತಿದ್ದಾರೆ. ನವದೆಹಲಿಯಲ್ಲಿ ಅವರಿಗೆ ಕೆಲಸವಿಲ್ಲ. ಖಾಲಿ ಮನಸ್ಸು ಪಿಶಾಚಿಯ ಕಾರ್ಯಾಗಾರ ಎನ್ನುವಂತಾಗಿದೆ ಅವರ ಸ್ಥಿತಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.

ಕುಮಾರಸ್ವಾಮಿ ರಾಜ್ಯ ರಾಜಕಾರಣಕ್ಕೆ ವಾಪಸಾಗಬೇಕು ಎಂದುಕೊಂಡಿದ್ದಾರೆ. ಆದರೆ, ಅವರಿಗೆ ಇಲ್ಲಿ ನಾಯಕತ್ವ ಸಿಗುತ್ತಿಲ್ಲ. ಇದಕ್ಕಾಗಿ ಏನೇನೋ ಹೇಳುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಿರುವುದು ಅವರಿಗೆ ಅಸೂಯೆ ತಂದಿದೆ. ಅಸೂಯೆಗೆ ಮದ್ದಿಲ್ಲ ಎಂದರು.

ಕುರ್ಚಿಯ ಘನತೆಯನ್ನು ಅವರೇ ಉಳಿಸಿಕೊಳ್ಳುತ್ತಿಲ್ಲ ಎಂದಾದರೆ, ನಮ್ಮಂಥವರು ಅದಕ್ಕೆ ಮರ್ಯಾದೆ ಕೊಡಬೇಕೇ ಎಂದು ಕೇಳಿದರು. ಮಾರುವೇಷದ ಕಾರ್ಯಾಚರಣೆ ಬಗ್ಗೆ ಪಾರದರ್ಶಕವಾಗಿ ತನಿಖೆ ನಡೆಸುತ್ತಿದ್ದೇವೆ. ಎಫ್ಐಆರ್ ಈಗಷ್ಟೆ ಆಗಿದೆ. ಯಾರ್ಯಾರು ಏನೇನು ಮಾಡಿದ್ದಾರೆ ಎಂಬುದನ್ನೆಲ್ಲಾ ಬಹಿರಂಗಗೊಳಿಸಲಾಗುವುದು ಎಂದರು.

ಮಾರುವೇಷದ ಕಾರ್ಯಾಚರಣೆ ಪ್ರಕರಣದಲ್ಲಿ ಎಚ್‌ಡಿಕೆ ಬಲಗೈ, ಎಡಗೈ ಬಂಟರ ಹೆಸರು ಬಂದರೆ ತನಿಖೆಗೆ ಕರೆಸಬಾರದಾ, ಹೇಗೆ ತನಿಖೆ ನಡೆಸಬೇಕು ಎಂಬುದು ಗೊತ್ತಿದೆ. ಕುಮಾರಸ್ವಾಮಿ ಸಮಸ್ಯೆ ಏನೆಂದೇ ಅರ್ಥ ಆಗುತ್ತಿಲ್ಲ. ಅವರ ಬಳಿ ದಾಖಲೆ ಇದ್ದರೆ ಕೊಡಲಿ. ಹೀಗೆ ತನಿಖೆ ನಡೆಸಿ ಎಂದರೆ ಹೇಗೆ ಎಂದು ಪ್ರಶ್ನಿಸಿದರು.

### ಬೀದರ್ ವೈದ್ಯಕೀಯ ವಿಜ್ಞಾನ ಸಂಶೋಧನಾ ಸಂಸ್ಥೆ

## ಆರಂಭವಾಗದ ಕ್ಯಾಥ್‌ಲ್ಯಾಬ್, ಹೃದ್ರೋಗಿಗಳಿಗೆ ಚಿಕಿತ್ಸೆ ಮರೀಚಿಕೆ



**ಬೀದರ್, ಅ. 16:** ನಗರದ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಬ್ರಿಮ್ಸ್) ಕ್ಯಾಥ್‌ಲ್ಯಾಬ್ ನಿರ್ಮಿಸಿ ಒಂದೂವರೆ ವರ್ಷವಾದರೂ ಇದುವರೆಗೆ ಹೃದ್ರೋಗಿಗಳಿಗೆ ಚಿಕಿತ್ಸೆ ಮರೀಚಿಕೆಯಾಗಿದೆ.

14 ಕೋಟಿ ರು ವೆಚ್ಚದಲ್ಲಿ 50 ಹಾಸಿಗೆಗಳ ಸುಸಜ್ಜಿತ ಕ್ಯಾಥ್‌ಲ್ಯಾಬ್ ನಿರ್ಮಿಸಲಾಗಿದೆ. ಕಾರ್ಡಿಯೊಲಜಿಸ್ಟ್ ಹಾಗೂ ತಂತ್ರಜ್ಞರು ಬರದ ಕಾರಣ ಇದುವರೆಗೆ ಕ್ಯಾಥ್‌ಲ್ಯಾಬ್ ಆರಂಭಿಸಿಲ್ಲ ಎಂದು ಬ್ರಿಮ್ಸ್ ಆಡಳಿತ ತಿಳಿಸಿದೆ. ಈಗ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಪ್ರಾರಂಭಿಸಲು ಮುಂದಾಗಿದ್ದು, ಇದರ ಸಾಧಕ–ಬಾಧಕಗಳ ಅಧ್ಯಯನಕ್ಕೆ ಪುನಃ 50 ಲಕ್ಷ ವೆಚ್ಚ ಮಾಡಲಾಗುತ್ತಿದೆ.

ಈಗಾಗಲೇ ಟೆಂಡರ್ ಆಹ್ವಾನಿಸಲಾಗಿದ್ದು, ಒಬ್ಬರ ಆಯ್ಕೆ ಅಂತಿಮಗೊಳ್ಳಬೇಕಿದೆ. ಕೆಲ ದಿನಗಳ ಹಿಂದೆ ಟೆಂಡರ್ ಅಂತಿಮಗೊಳ್ಳಬೇಕಿತ್ತು. ಆದರೆ, ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಿಂದ ನೀತಿಸಂಹಿತೆ ಜಾರಿಗೆ ಬಂದಿರುವುದರಿಂದ ಅಂತಿಮಗೊಂಡಿಲ್ಲ. ಚುನಾವಣೆ ಮುಗಿದ ನಂತರ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ತಿಳಿದು ಬಂದಿದೆ. ಆದರೆ, ಸುಸಜ್ಜಿತ ಆಸ್ಪತ್ರೆಯನ್ನು ಖಾಸಗಿಯವರಿಗೆ ಕೊಡುವುದಕ್ಕೆ ವಿರೋಧ ವ್ಯಕ್ತವಾಗಿದೆ.

ಹೃದ್ರೋಗಿಗಳಿಗೆ ಕಡಿಮೆ ವೆಚ್ಚದಲ್ಲಿ ಸ್ಥಳೀಯವಾಗಿ ಉತ್ತಮ ಚಿಕಿತ್ಸೆ ಸಿಗಬೇಕೆಂಬ ಉದ್ದೇಶದಿಂದ ಕ್ಯಾಥ್ ಲ್ಯಾಬ್ ನಿರ್ಮಿಸಲಾಗಿದೆ. ಹೃದ್ರೋಗ ತಜ್ಞರು, ತಂತ್ರಜ್ಞರು ಬರುತ್ತಿಲ್ಲ ಎಂಬ ನೆಪವೊಡ್ಡಿ ಖಾಸಗಿಯವರಿಗೆ ಕೊಡಲು ಮುಂದಾಗಿರುವುದು ಸರಿಯಲ್ಲ. ಈಗಾಗಲೇ ಕ್ಯಾಥ್‌ಲ್ಯಾಬ್ ನಿರ್ಮಾಣಕ್ಕೆ 14 ಕೋಟಿ ವೆಚ್ಚವಾಗಿದೆ. ಪಿಪಿಪಿ ಸಾಧಕ–ಬಾಧಕ ಅಧ್ಯಯನ ವರದಿ ಸಿದ್ಧಪಡಿಸಲು ಏಜೆನ್ಸಿಗೆ 50 ಲಕ್ಷ ವೆಚ್ಚ ಮಾಡುತ್ತಿರುವುದು ಸರಿಯಲ್ಲ ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತ ವಿನಯ್ ಕುಮಾರ್ ಮಾಳಗೆ.

ಬೀದರ್ ನಗರದಲ್ಲಿ ಈಗಾಗಲೇ ಹೃದ್ರೋಗಕ್ಕೆ ಸಂಬಂಧಿಸಿದ ಮೂರ್ನಾಲ್ಕು ಖಾಸಗಿ ಆಸ್ಪತ್ರೆಗಳು ಕೆಲಸ ನಿರ್ವಹಿಸುತ್ತಿವೆ. ಅವುಗಳ ಲಾಬಿಯಿಂದಲೇ ಕ್ಯಾಥ್‌ಲ್ಯಾಬ್ ಆರಂಭಗೊಂಡಿಲ್ಲ.

ಈಗ ಪಿಪಿಪಿ ಮೂಲಕ ಅವುಗಳ ಕೈಗೆ ಇದನ್ನು ಕೊಡುವ ಹುನ್ನಾರ ನಡೆಸಲಾಗುತ್ತಿದೆ. ಈ ಯೋಜನೆ ಕೈಬಿಟ್ಟು, ಸರ್ಕಾರವೇ ನಡೆಸಬೇಕು. ನೆರೆಯ ಹೈದರಾಬಾದ್, ಸೊಲ್ಲಾಪುರ ಸೇರಿದಂತೆ ಇತರ ಕಡೆಗಳಿಂದ ನುರಿತ ವೈದ್ಯರು, ತಂತ್ರಜ್ಞರನ್ನು ಕರೆತಂದು ಆರಂಭಿಸಲು ಮುಂದಾಗ

**ವಿಧಾನ ಪರಿಷತ್ ಚುನಾವಣೆ ನಡೆಯುತ್ತಿರುವುದರಿಂದ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದೆ. ಅದು ಕೊನೆಗೊಂಡ ನಂತರ ಖಾಸಗಿ ಏಜೆನ್ಸಿಯನ್ನು ಅಂತಿಮಗೊಳಿಸಿ ಪಿಪಿಪಿಯಲ್ಲಿ ಕ್ಯಾಥ್‌ಲ್ಯಾಬ್ ಆರಂಭಿಸುವ ಬಗ್ಗೆ ವರದಿ ಪಡೆದು ಮುಂದುವರಿಯಲಾಗುವುದು.**

–ಪ್ರಕಾಶ್ ಆಡಳಿತಾಧಿಕಾರಿ ಬ್ರಿಮ್ಸ್.

### ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾಗಿ ಒಂದು ವರ್ಷ 188 ದಿನ ವಿಚಾರಣೆ,

## 3694 ಪ್ರಕರಣಗಳ ವಿಲೇವಾರಿ, 7 ಲಕ್ಷ 78 ಸಾವಿರ ದಂಡ: ವೆಂಕಟಸಿಂಗ್



**ಕಲಬುರಗಿ ಅ.16:** ಕಳೆದ ಒಂದು ವರ್ಷದಲ್ಲಿ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದಲ್ಲಿ 188 ದಿನಗಳ ವಿಚಾರಣೆ ನಡೆಸಿ ಒಟ್ಟು 3,694 ಪ್ರಕರಣಗಳು ವಿಲೇವಾರಿ ಮಾಡಿ ಮಾಹಿತಿ ನೀಡದ 80 ಅಧಿಕಾರಿಗಳಿಗೆ 7,78,000 ದಂಡ ವಿಧಿಸಲಾಗಿದೆ ಮತ್ತು 35 ಜನ ಅರ್ಜಿದಾರರಿಗೆ ಪರಿಹಾರವನ್ನು ಒದಗಿಸಿಕೊಡಲಾಗಿದೆ ಎಂದು ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟಸಿಂಗ್ ತಿಳಿಸಿದ್ದಾರೆ.

ಅವರು ಅಧಿಕಾರವಹಿಸಿಕೊಂಡು ಒಂದು ವರ್ಷ ಪೂರ್ಣಗೊಂಡ ಹಿನ್ನಲೆಯಲ್ಲಿ ಇಂದು ರಾಜ್ಯ ಮಾಹಿತಿ ಆಯುಕ್ತರಾಗಿ ನೇಮಕೊಂಡು ಈ ಅವಧಿಯಲ್ಲಿ ಗಣನಿಯ ಪ್ರಮಾಣದ ಪ್ರಕರಣದಲ್ಲಿ ವಿಚಾರಣೆ ನಡೆಸಿ ವಿಲೇವಾರಿ ಮಾಡುವ ಮೂಲಕ ಸಾರ್ವಜನಿಕರಿಗೆ ಮಾಹಿತಿ ಒದಗಿಸಲು ಕ್ರಮ ಕೈಗೊಂಡಿದೆ ಎಂದು ತಿಳಿಸಿದರು.

2025ರ ನ.25ರಿಂದ ಪ್ರಕರಣಗಳ ವಿಚಾರಣೆ ಆರಂಭಿಸಲಾಗಿದ್ದು ಒಟ್ಟು ಇಂದಿನವರೆಗೆ 188 ದಿನಗಳವರೆಗೆ ವಿಚಾರಣೆ ನಡೆಸಿ ಈ ಅವಧಿಯಲ್ಲಿ 7,262 ಪ್ರಕರಣಗಳು ವಿಚಾರಣೆಗೆ ಕೈಗೆತ್ತಿಕೊಂಡು ಆ ಪೈಕಿ 3,694 ಪ್ರಕರಣಗಳನ್ನು ವಿಲೇ ಮಾಡಲಾಗಿದೆ. ಈ ಅವಧಿಯಲ್ಲಿ ಸಕಾಲಕ್ಕೆ ಮಾಹಿತಿಯನ್ನು ನೀಡದ ವಿವಿಧ ಇಲಾಖೆಯ ಒಟ್ಟು 80 ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ 7,78,000/– ದಂಡ ವಿಧಿಸಲಾಗಿದೆ, ತಮ್ಮ ಅವಧಿಯಲ್ಲಿ ಇಲ್ಲಿಯವರೆಗೆ 7,37,000/– ರೂಪಾಯಿ ದಂಡ ವಸೂಲಿ ಮಾಡಲಾಗಿದೆ. ಮೇಲ್ಮನವಿದಾರರಿಗೆ ಸಕಾಲಕ್ಕೆ ಮಾಹಿತಿಯನ್ನು ಒದಗಿಸದೆ ಅವರ ಸಮಯ ಮತ್ತು ಹಣ ವ್ಯರ್ಥಮಾಡಿದ ಕಾರಣ ಅಂತ 35 ಮೇಲ್ಮನವಿದರರಿಗೆ ಒಟ್ಟು 96,000/–ರೂಪಾಯಿ ಪರಿಹಾರವನ್ನು ನೀಡಲು ಆಯೋಗವು ಆದೇಶ ಮಾಡಲಾಗಿದೆ. ಕಲಬುರಗಿ ಪೀಠದಲ್ಲಿ ಒಟ್ಟು 20,398 ಪ್ರಕರಣಗಳು ಮಾಹಿತಿ ಕೋರಿ ದ್ವಿತಿಯ ಮೇಲ್ಮನವಿ ಅರ್ಜಿಗಳು ಸಲ್ಲಿಕೆಯಾಗಿದ್ದು ಈ ಪೈಕಿ 13,468 ಪ್ರಕರಣಗಳು ವಿಲೇ ಮಾಡಿದ್ದು ಪ್ರಸ್ತುತ 6,930 ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ ಎಂದು ತಿಳಿಸಿದ್ದಾರೆ.

ಮಾಹಿತಿ ಕೋರಿ ದ್ವಿತಿಯ ಮೇಲ್ಮನವಿ ಅರ್ಜಿಗಳು ಈ ಹಿಂದೆ ಬೆಂಗಳೂರುನಲ್ಲಿ ಸಲ್ಲಿಸಬೇಕಾಗಿತ್ತು ಆದರೆ ಈ ವರ್ಷದ ಫೆಬ್ರವರಿಯಿಂದ ಕಲಬುರಗಿ ಪೀಠದಲ್ಲಿಯೆ ದ್ವಿತಿಯ ಮೇಲ್ಮನವಿ ಅರ್ಜಿಗಳನ್ನು ಸ್ವೀಕರಿಸುತ್ತಿದ್ದು ಇಲ್ಲಿಯವರೆಗೆ ಒಟ್ಟು 2432 ದ್ವಿತಿಯ ಮೇಲ್ಮನಿ ಅರ್ಜಿಗಳು ಸಲ್ಲಿಕೆಯಾಗಿದೆಯೆಂದು ವಿವರಿಸಿದರು.

ತಾವು ಅಧಿಕಾರ ಸ್ವೀಕರಿಸಿದ ಬಳಿಕ ವಿಶೇಷವಾಗಿ ಗ್ರಾಮ ಪಂಚಾಯತಿಗೆ ಸಂಬಂಧ ಪಟ್ಟ ಪ್ರಕರಣಗಳನ್ನು ಹೆಚ್ಚಿನ ಪ್ರಮಾಣದಲ್ಲಿ ದಾಖಲಾಗಿದ್ದನ್ನು ಗಮನಿಸಿದ್ದು ಇಂತಹ ಪ್ರಕರಣಗಳನ್ನು ಹೆಚ್ಚು ಮಾಹಿತಿ ಕೊಡಿಸಲಾಗಿದೆಯೆಂದು ತಿಳಿಸಿದ್ದರು.ಪ್ರಸ್ತುತ ಜಿಲ್ಲಾವಾರು ಪ್ರಕರಣಗಳು ಬಾಕಿ ಈ ರೀತಿ ಇವೆ. ಬೀದರ್–560 ಕಲಬುರಗಿ–1483 ದಾವಣಗಿರಿ–665 ರಾಯಚೂರು–2059 ಕೊಪ್ಪಳ–649 ಬಳ್ಳಾರಿ–885 ವಿಜಯನಗರದಲ್ಲಿ–629 ಸೇರಿ ಒಟ್ಟು 6930 ಪ್ರಕರಗಣಗಳು ವಿಚಾರಣೆಗೆ ಬಾಕಿ ಇವೆ ಎಂದು ತಿಳಿಸಿದವರು ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಹಾಗೂ ಪ್ರಥಮ ಮೇಲ್ಮನವಿ ಪ್ರಾಧಿಕಾರದ ಅಧಿಕಾರಿಗಳಿಗೆ ಮಾಹಿತಿ ನೀಡಲು ಇರುವ ಗೊಂದಲಗಳ ನಿವಾರಣೆಗಾಗಿ ಈಗಾಗಲೇ ಕಲಬುರಗಿ ಪೀಠದ ವ್ಯಾಪ್ತಿಯ 7 ಜಿಲ್ಲೆಗಳಲ್ಲಿ ಕಾರಗಾರ ಏರ್ಪಡಿಸಿದ ಕಾರಣ ಮಾಹಿತಿ ಒದಗಿಸಲು ಅನುಕುಲವಾಗಿದೆಯೆಂದರು.

**ನಿವೇಶನಕ್ಕೆ ಪ್ರಸ್ತಾವನೆ.**

ಕಲ್ಯಾಣ ಕರ್ನಾಟಕ ವ್ಯಾಪ್ತಿಹೊಂದಿದ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠ 2024 ರಿಂದ ಕಾರ್ಯನಿರ್ವಹಿಸುತ್ತಿದ್ದು ಪ್ರಸ್ತುತ ಲೋಕೋಪಯೋಗಿ ಇಲಾಖೆಗೆ ಸೇರಿದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಖಾಯಂ ಕಟ್ಟಡ ನಿರ್ಮಾಣ ಮಾಡಲು ಸೂಕ್ತ ನಿವೇಶನ ಒದಗಿಸುವಂತೆ ಮುಖ್ಯಮಂತ್ರಿಗೆ, ಜಿಲ್ಲಾ ಮಂತ್ರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಪತ್ರ ಬರೆದಿದ್ದು ಈ ಪ್ರಕ್ರಿಯೆ ಚಾಲ್ತಿಯಲ್ಲಿದೆಯೆಂದು ತಿಳಿಸಿದರು. ಪೀಠ ಸ್ವತಂತ್ರ್ಯವಾಗಿ ಕಾರ್ಯನಿರ್ವಹಿಸುತ್ತಿದ್ದು ಆಯೋಗಕ್ಕೆ ಅಗತ್ಯ ಸಿಬ್ಬಂದಿಯ ಕೊರತೆ ಇದ್ದು ಸಿಬ್ಬಂದಿಯನ್ನು ನೀಡಲು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಅಗತ್ಯ ಸಿಬ್ಬಂದಿಯನ್ನು ನೀಡಿದಲ್ಲಿ ಹೆಚ್ಚು ಪ್ರಕರಣಗಳನ್ನು ಕೈಗೆತ್ತಿಕೊಂಡು ವಿಲೇವಾರಿ ಮಾಡಲು ಅನುಕುಲವಾಗಲಿದೆಯೆಂದು ವಿವರಿಸಿದರು.

**ಮಹತ್ವದ ಪ್ರಕರಣಗಳು.**

ಕಳೆದ ಒಂದು ವರ್ಷದಲ್ಲಿ ಕಲಬುರಗಿ, ಯಾದಗಿರಿ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ ಸಂಬಂಧ ಪಟ್ಟಂತೆ ಮೇಲ್ಮನವಿದಾರರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿ ಸದರಿ ಬ್ಯಾಂಕ್ ಸಾರ್ವಜನಿಕ ಪ್ರಾಧಿಕಾರವೆಂದು ಆದೇಶ ಮಾಡಿದ್ದು ಪ್ರಮುಖ ಪ್ರಕರಣವಾಗಿದೆ. ಉಳಿದಂತೆ ಕಳೆದ 10 ವರ್ಷದಿಂದ ಅಂದರೆ 2010 ರಿಂದ 2022 ರವರೆಗೆ ವಿಚಾರಣೆ ನಡೆಸಿ ವಿಲೇವಾರಿಗೆ ಬಾಕಿ ಇದ್ದ ಸುಮಾರು 500 ಕ್ಕೂ ಹೆಚ್ಚು ಪ್ರಕರಣಗಳನ್ನು ಕೈಗೆತ್ತಿಕೊಂಡು ಮಾಡಲಾಗಿದೆಯೆಂದು ವಿವರಿಸಿದರು. ಆ ಎಲ್ಲಾ ಪ್ರಕರಣಗಳನ್ನು ವಿಲೇ

ಸಿರವಾರ ಪೊಲೀಸ್ ಠಾಣೆಯಲ್ಲಿ ಮೇಲ್ಮನವಿದರರು ಕೋರಿದ ಸಿಸಿಟಿವಿ ದೃಶ್ಯಾವಳಿಗೆ ಸಂಬಂಧ ಪಟ್ಟಂತೆ ಮಾಹಿತ ಒದಗಿಸಲು ವಿಳಂಭ ಮಾಡಿದ ಕಾರಣ ಆ ಪೊಲೀಸ್ ಠಾಣೆಯ 3 ಜನ ಪಿ.ಎಸ್.ಐ ಗಳಿಗೆ ತಲಾ 25,000 ದಂಡ ವಿಧಿಸಿ ವಸೂಲಿ ಮಾಡಿದ್ದು ಅಲ್ಲದೆ ಸಕಾಲಕ್ಕೆ ಮಾಹಿತಿ ನೀಡದ ಕಾರಣ ಆ 3 ಜನ ಪಿ.ಎಸ್.ಐ ವಿರುದ್ಧ ಕ್ರಮಕ್ಕೆ ಆಯೋಗ ಮಾಡಿದ ಶಿಫಾರಸಿನಂತೆ ಆ 3 ಜನರ ವಿರುದ್ಧ ಪೊಲೀಸ್ ಕಾಯ್ದೆ ರೂಲ್ 7 ರ ಪ್ರಕಾರ ಅವರಿಗೆ ಪೊಲೀಸ್ ವರಿಷ್ಟಾಧಿಕಾರಿಗಳು ನೋಟಿಸ್ ಜಾರಿ ಮಾಡಿರುವುದಾಗಿ ತಿಳಿಸಿ ಆಯೋಗಕ್ಕೆ ಮಾಹಿತಿ ನೀಡಿದ್ದಾರೆ.

### ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರ

# ಮೂರನೇ ಬಾರಿಗೆ ನಮೋಶಿ–ಮಟ್ಟೂರ ಮಧ್ಯೆ ಮತ್ತೆ ಜಂಗಿಕುಸ್ತಿ

**ಕಲಬುರಗಿ, ಅ. 16:** ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನಕ್ಕೆ ಇನ್ನೊಂದು ವರವಷ್ಟೇ ಉಳಿದಿದೆ. ಮಳೆಗಾಲದಲ್ಲೂ ಉರಿ ಬಿಸಿಲಲ್ಲಿ ಬಿರುಸಿನ ಪ್ರಚಾರ ನಡೆಯುತ್ತಲಿದೆ. ಈ ಕ್ಷೇತ್ರಕ್ಕೆ ಶಿಕ್ಷಕರೇ ಮತದಾರರು. ಆದರೆ ಶಿಕ್ಷಕರಿಗೆ ದಸರಾ ರಜೆ ಇರುವುದರಿಂದ ಶಿಕ್ಷಕರನ್ನು ಹುಡುಕಿಕೊಂಡು ಹೋದರೆ ಶಾಲಾ ಕಾಲೇಜುಗಳೆಲ್ಲ ರಜೆ. ಹೀಗಾಗಿ ಮತದಾರರನ್ನು ಹುಡುಕಿಕೊಂಡು ಓಲೈಕೆಗಾಗಿ ಕಸರತ್ತು ತೀವ್ರಗೊಂಡಿದ್ದು, ಚುನಾವಣೆ ದಿನದಿಂದ ದಿನಕ್ಕೆ ರಂಗೇರುತ್ತಿದೆ.

ಬಿಜೆಪಿಯಿಂದ ಶಶೀಲ್ ನಮೋಶಿ ಹಾಗೂ ಕಾಂಗ್ರೆಸ್‌ನಿಂದ ಶರಣಪ್ಪ ಮಟ್ಟೂರ ಕಣಕ್ಕಿಳಿದಿದ್ದು, ಇದು ಇವರಿಬ್ಬರ ನಡುವಿನ ಸತತ ಮೂರನೇ ಬಾರಿಗೆ ನೇರ ಹಣಾಹಣಿ ನಡೆಯುತ್ತಿದೆ. 2014ರಲ್ಲಿ ಮೊದಲ ಬಾರಿಗೆ ಎದುರಾಳಿಗಳಾದಾಗ ಮಟ್ಟೂರ ಗೆಲ್ಲುವ ಮೂಲಕ ಮೊದಲ ಬಾರಿಗೆ ಕ್ಷೇತ್ರವನ್ನು ಕಾಂಗ್ರೆಸ್ ತೆಕ್ಕೆಗೆ ತಂದಿದ್ದರು. ಆಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿತ್ತು. ನಂತರ 2020ರಲ್ಲೂ ಇಬ್ಬರ ಮಧ್ಯೆಯೇ ನೇರ ಪೈಪೋಟಿ



ಏರ್ಪಟ್ಟಿತ್ತಲ್ಲದೇ ಮಟ್ಟೂರ ಮುಗ್ಗರಿಸಿ ನಮೋಶಿ ಗೆಲುವಿನ ನಗೆ ಬೀರಿದ್ದರು. ಆಗ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿತ್ತು. ಇದೀಗ ಮೂರನೇ ಬಾರಿಗೆ ಈ ಇಬ್ಬರೂ ಅದೇ ಪಕ್ಷಗಳಿಂದ ಸ್ಪರ್ಧಿಸಿದ್ದು, ಈಗ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವುದರಿಂದ ತೀವ್ರ ಹಣಾಹಣಿ ಕಂಡುಬರುತ್ತಿದೆ. ಈ ಚುನಾವಣೆಯಿಂದಾಗಿ ತೀವ್ರ ಬರದ ಮಧ್ಯೆಯೂ ಕ್ಷೇತ್ರದಾದ್ಯಂತ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ಉರಿ ಬಿಸಿಲನ್ನೂ ಲೆಕ್ಕಿಸದೆ ಇಬ್ಬರೂ ಅಭ್ಯರ್ಥಿಗಳು ಏಳು ಜಿಲ್ಲೆಗಳಲ್ಲಿ ಬಿರುಸಿನ ಪ್ರಚಾರದಲ್ಲಿ ತೊಡಗಿದ್ದಾರೆ.

**ಶಿಕ್ಷಕರನ್ನು ಒಲಿಸಿಕೊಳ್ಳಲು ಕಸರತ್ತು :** ಈಶಾನ್ಯ ಶಿಕ್ಷಕರ ಮತಕ್ಷೇತ್ರವು ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿ ಹರಡಿಕೊಂಡಿರುವ ಈ ಕ್ಷೇತ್ರದಲ್ಲಿ ಶಿಕ್ಷಕ ಮತದಾರರ ಒಲವು ಗಳಿಸುವುದು ನಮೋಶಿ ಮತ್ತು ಮಟ್ಟೂರ ಅವರಿಗೆ ದೊಡ್ಡ ಸವಾಲಾಗಿದೆ. ಪ್ರೌಢಶಾಲಾ ಶಿಕ್ಷಕರು, ಪಿಯು, ಪದವಿ ಕಾಲೇಜು ಉಪನ್ಯಾಸಕರನ್ನು ತಲುಪಲು

> **ರಜೆಯ ತೊಡಕು**
>
> **ಚುನಾವಣೆ ಅಕ್ಟೋಬರ್ 23 ರಂದು ನಡೆಯಲಿದ್ದು, ಇದೇ ಸಂದರ್ಭದಲ್ಲಿ ದಸರಾ ರಜೆ ಶುರುವಾಗಿರುವುದರಿಂದ ಶಾಲೆ, ಕಾಲೇಜುಗಳಲ್ಲಿ ಶಿಕ್ಷಕರು, ಉಪನ್ಯಾಸಕರು ಸಿಗುತ್ತಿಲ್ಲ. ಇದು ಪ್ರಚಾರಕ್ಕೆ ತೊಡಕಾಗಿ ಪರಿಣಮಿಸಿದೆ. ಹೀಗಾಗಿ ಅಭ್ಯರ್ಥಿಗಳು, ಪಕ್ಷಗಳ ಮುಖಂಡರು, ಕಾರ್ಯಕರ್ತರು ಮನೆಗಳಿಗೆ ತೆರಳಿ ಪ್ರಚಾರ ನಡೆಸುತ್ತಲಿದ್ದಾರೆ.**

ಅಭ್ಯರ್ಥಿಗಳು ಹಾಗೂ ಎರಡೂ ಪಕ್ಷಗಳ ಮುಖಂಡರು ಸಭೆ, ಬೈಠಕ್, ಸಮಾಲೋಚನೆ ಮತ್ತು ವೈಯಕ್ತಿಕ ಸಂಪರ್ಕಕ್ಕೆ ಒತ್ತು ನೀಡುತ್ತಿದ್ದಾರೆ. ಬಿಜೆಪಿಗೆ ಜೆಡಿಎಸ್ ಬೆಂಬಲವಿರುವುದು ತುಸು ಅನುಕೂಲಕರವಾಗಿದೆ.

**ಬಿಜೆಪಿ ಭದ್ರಕೋಟೆ :** ಈ ಕ್ಷೇತ್ರ ಮೊದಲಿನಿಂದಲೂ ಬಿಜೆಪಿಗೆ ಒಲಿಯುತ್ತ ಕೇಸರಿ ಪಕ್ಷದ ಭದ್ರಕೋಟೆಯೆನಿಸಿದೆ. ಅಲ್ಲದೇ ಅಭ್ಯರ್ಥಿ, ಹಾಲಿ ಎಂಎಲ್‌ಸಿ ಶಶೀಲ್ ನಮೋಶಿ ಅವರಿಗೆ ಇಲ್ಲಿ ಕಳೆದ ಐದು ಚುನಾವಣೆಗಳಲ್ಲಿ ನಾಲ್ಕು ಬಾರಿ



ಗೆಲುವು ಸಾಧಿಸಿದ ಹೆಗ್ಗಳಿಕೆಯಿದೆ. ಶಿಕ್ಷಕರು ಮತ್ತು ಉಪನ್ಯಾಸಕರ ವಲಯದಲ್ಲಿ ನಿರಂತರ ಸಂಪರ್ಕ, ಪಕ್ಷದ ಸಂಘಟನಾ ಬಲ ಹಾಗೂ ತಮ್ಮ ಹಿಂದಿನ ಅವಧಿಗಳ ಸಾಧನೆಗಳು, ಕಾರ್ಯಗಳನ್ನು ಮುಂದಿಟ್ಟುಕೊಂಡು ಮತ್ತೊಮ್ಮೆ ಶಿಕ್ಷಕರ ಓಲೈಕೆಯಲ್ಲಿ ತೊಡಗಿದ್ದಾರೆ.

ಮರಳಿ ಯತ್ನವ ಮಾಡು: ಮತ್ತೊಂದೆಡೆ, ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರ ಅವರು ಕ್ಷೇತ್ರದಲ್ಲಿ ತಮ್ಮ ಹಿಂದಿನ ಅನುಭವ, ಶಿಕ್ಷಕರೊಂದಿಗಿನ ಒಡನಾಟ, ಸಂಪರ್ಕ ಆಧರಿಸಿ ಪ್ರಚಾರದಲ್ಲಿ ತೊಡಗಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿರುವುದು ಹಾಗೂ ಈ ಭಾಗದಲ್ಲಿ ಪಕ್ಷದ ಶಾಸಕರೇ ಹೆಚ್ಚಿನ ಸಂಖ್ಯೆಯಲ್ಲಿರುವುದು, ಅಹಿಂದ ವರ್ಗದ ಮತಗಳು ಗಣನೀಯ ಪ್ರಮಾಣದಲ್ಲಿರುವುದು ಅನುಕೂಲಕರವಾಗಿದೆ. ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಶಶೀಲ್ ನಮೋಶಿ, ಶರಣಪ್ಪ ಮಟ್ಟೂರ ಅವರಲ್ಲದೇ ಜೆಡಿಯು'ನಿಂದ ಶಂಕರ ರೆಡ್ಡಿ ಪಾಟೀಲ್, ಆಮ್ ಆದ್ಮಿ ಪಕ್ಷದಿಂದ ಸಾಯಬಣ್ಣಾ ಜಮಾದಾರ ಸೇರಿದಂತೆ 13 ಅಭ್ಯರ್ಥಿಗಳು ಚುನಾವಣಾ ಸ್ಪರ್ಧಾ ಕಣದಲ್ಲಿದ್ದಾರೆ.

> *** ಒಟ್ಟು ಮತದಾರರು: 34,784**
> *** ಕಲಬುರಗಿ ಜಿಲ್ಲೆಯಲ್ಲೇ ಅತಿಹೆಚ್ಚು ಮತದಾರರು**
> *** 144 ಮತಗಟ್ಟೆಗಳ ಸ್ಥಾಪನೆ**
> *** 13 ಅಭ್ಯರ್ಥಿಗಳು ಕಣದಲ್ಲಿ**
> *** 23 ರಂದು ಮತದಾನ, 27ರಂದು ಕಲಬುರಗಿ ವಿವಿಯಲ್ಲಿ ಮತಗಳ ಎಣಿಕೆ.**



ಉದ್ಯೋಗವನ್ನು ಖಾಯಂಗೊಳಿಸುವ ವಿಷಯದಲ್ಲಿ ಸರ್ಕಾರವು ತಕ್ಷಣ ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸಿ, 'ಕರ್ನಾಟಕ ರಾಜ್ಯ ಎನ್‌ಆರ್‌ಇಜಿಎ ಕಾರ್ಮಿಕರ ಕಲ್ಯಾಣ ಸಂಘವು ಶುಕ್ರವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿತು.

### ಕೆಪಿಎಸ್‌ಸಿ ನೇಮಕಾತಿ ಹಗರಣ

# ಸಿಬಿಐ ತನಿಖೆಗೆ ಕೋರಿ ಹೈಕೋರ್ಟ್‌ಗೆ ಪಿಐಎಲ್ ಅರ್ಜಿ ಸಲ್ಲಿಕೆ

**ಕಲಬುರಗಿ, ಅ. 15:** ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿದೆಯೆನ್ನಲಾದ ಭ್ರಷ್ಟಾಚಾರ, ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಲು ಪ್ರಕರಣವನ್ನು ರಾಜ್ಯ ಪೊಲೀಸ್ ಇಲಾಖೆಯ ಸಿಐಡಿಯಿಂದ ಕೇಂದ್ರ ತನಿಖಾದಳಕ್ಕೆ (ಸಿಬಿಐ) ವರ್ಗಾಯಿಸಬೇಕೆಂದು ಕೋರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದನ್ನು (ಪಿಐಎಲ್) ಕಲಬುರಗಿ ಹೈಕೋರ್ಟ್ ಪೀಠದಲ್ಲಿ ಸಲ್ಲಿಸಲಾಗಿದೆ. ಬೀದರ್ ಜಿಲ್ಲೆಯ ಸಾಮಾಜಿಕ ಕಾರ್ಯಕರ್ತ ಶರಣಪ್ಪ ಎಂಬುವರು ಸಂವಿಧಾನದ 226ನೇ ವಿಧಿಯಡಿ ಈ ಪಿಐಎಲ್ ಸಲ್ಲಿಸಿದ್ದಾರೆ.



ಕೆಪಿಎಸ್‌ಸಿ ನೇಮಕಾತಿ ಅಕ್ರಮಗಳಿಗೆ ಸಂಬಂಧಿಸಿದ ಕೇಸುಗಳ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಅರ್ಜಿಯಲ್ಲಿ ಮನವಿ ಮಾಡಲಾಗಿದೆ. 1995ರಿಂದ 2026ರ ವರೆಗಿನ ಕೆಪಿಎಸ್‌ಸಿ ನೇಮಕಾತಿ ಪ್ರಕ್ರಿಯೆಯಲ್ಲಿ ವ್ಯಾಪಕ ಅಕ್ರಮಗಳು ನಡೆದಿವೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ, ಡಿಜಿಟಲ್ ಹಾಗೂ ಭೌತಿಕ ಈ ಅನ್ಸರ್‌ಗಳ ತಿರುಚುವಿಕೆ ಮತ್ತು ಕೋಟ್ಯಂತರ ರೂ. ಗಳ ವಿನಿಮಯದ ಮೂಲಕ ಸರ್ಕಾರಿ ಹುದ್ದೆಗಳನ್ನು ಕೊಡಿಸುವ ಜಾಲ ಕಾರ್ಯನಿರ್ವಹಿಸಿದೆ ಎಂಬ ಗಂಭೀರ ಆರೋಪಗಳನ್ನು ಅರ್ಜಿದಾರರು ಮಾಡಿದ್ದಾರೆ.

ಈ ಪ್ರಕರಣಗಳಲ್ಲಿ ಕೆಪಿಎಸ್‌ಸಿಯ ಉನ್ನತ ಅಧಿಕಾರಿಗಳು, ಪ್ರಭಾವಿ ರಾಜಕೀಯ ಮಧ್ಯವರ್ತಿಗಳು ಹಾಗೂ ಇತರೆ ಆಯಕಟ್ಟಿನ ಹುದ್ದೆಗಳಲ್ಲಿರುವ ಅಧಿಕಾರಿಗಳು ಭಾಗಿಯಾಗಿರುವ ಶಂಕೆಯಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಎಫ್‌ಐಆರ್‌ಗಳು ದಾಖಲಾಗಿದ್ದರೂ ತನಿಖೆಯಲ್ಲಿ ನಿರೀಕ್ಷಿತ ಪ್ರಗತಿ ಕಂಡುಬಂದಿಲ್ಲ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ಪ್ರಸ್ತುತ ಸಿಐಡಿ ರಾಜ್ಯ ಸರ್ಕಾರದ ಆಡಳಿತಾತ್ಮಕ ನಿಯಂತ್ರಣದಡಿ ಕಾರ್ಯನಿರ್ವಹಿಸುತ್ತಿರುವುದರಿಂದ ತನಿಖೆಯ ನಿಷ್ಪಕ್ಷಪಾತದ ಬಗ್ಗೆ ಅನುಮಾನಗಳಿವೆ. ಸಾಕ್ಷ್ಯಗಳ ತಿರುಚುವಿಕೆ ಹಾಗೂ ಪ್ರಭಾವಿ ವ್ಯಕ್ತಿಗಳನ್ನು ರಕ್ಷಿಸುವ ಸಾಧ್ಯತೆಯೂ ಇದೆ ಎಂದು ಅರ್ಜಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

ಹಗರಣದ ಹಣಕಾಸು ವ್ಯವಹಾರಗಳು ಹಲವು ರಾಜ್ಯಗಳಿಗೆ ವ್ಯಾಪಿಸಿರುವುದು, ಅಭ್ಯರ್ಥಿಗಳನ್ನು ರಾಜ್ಯಗಳ ಗಡಿಯಾಚೆಗಿನ ಏಜೆಂಟರ್‌ಗಳಲ್ಲಿ ಇರಿಸಿರುವ ಆರೋಪಗಳು ಹಾಗೂ ಹಣ ವರ್ಗಾವಣೆಯ ಸಂಕೀರ್ಣ ಜಾಲದ ಹಿನ್ನೆಲೆಯಲ್ಲಿ ರಾಜ್ಯ ಪೊಲೀಸರ ವ್ಯಾಪ್ತಿಯನ್ನು ಮೀರಿದ ಸಮಗ್ರ ತನಿಖೆ ಅಗತ್ಯವೆಂದು ಅರ್ಜಿದಾರರು ಪ್ರತಿಪಾದಿಸಿದ್ದಾರೆ.

ಅರ್ಹ ಅಭ್ಯರ್ಥಿಗಳ ಹಕ್ಕುಗಳ ರಕ್ಷಣೆ ಹಾಗೂ ಸಂವಿಧಾನದ 14 ಮತ್ತು 16ನೇ ವಿಧಿಗಳಲ್ಲಿ ಪ್ರತಿಪಾದಿಸಿರುವ ಸಮಾನತೆ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಸಮಾನ ಅವಕಾಶದ ತತ್ವಗಳನ್ನು ಎತ್ತಿಹಿಡಿಯಲು ಸ್ವತಂತ್ರ ತನಿಖೆ ಅಗತ್ಯ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಈ ಸಂಬಂಧ ರಾಜ್ಯದ ಅಧಿಕಾರಿಗಳಿಗೆ ಈಗಾಗಲೇ ಕಾನೂನು ಬದ್ಧ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಹೀಗಾಗಿ ಹೈಕೋರ್ಟ್ ಮಧ್ಯಪ್ರವೇಶಿಸಿ ಸಿಬಿಐ ತನಿಖೆಗೆ ಆದೇಶಿಸಬೇಕೆಂದು ಅರ್ಜಿದಾರರು ಕೋರಿದ್ದಾರೆ.

# ಜಿಲ್ಲಾಡಳಿತ ವತಿಯಿಂದ ನ.1ರಂದು ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಅಗತ್ಯ ಸಿದ್ಧತೆ ಕೈಗೊಳ್ಳಿ

**ವಿಜಯಪುರ,ಅ.15–** ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಮತ್ತು ಅರ್ಥಪೂರ್ಣ ವಾಗಿ ಆಚರಿಸಲು ನಿರ್ಧರಿಸಲಾಗಿದ್ದು,ವಿವಿಧ ಇಲಾಖೆ ಅಧಿಕಾರಿಗಳು ಈ ಕಾರ್ಯಕ್ರಮವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಲಾಯಿತು.



ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಆಚರಣೆ ಕುರಿತು ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಕನ್ನಡ ನಾಡು,ನುಡಿಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ರಾಜ್ಯೋತ್ಸವ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಿರ್ವಹಿಸಿ, ಕನ್ನಡಮಯ ಹಬ್ಬದ ವಾತಾವರಣ ಮೈದಾಳುವಂತೆ ಅಗತ್ಯ ಯೋಜನೆ ರೂಪಿಸಿಕೊಂಡು ಕನ್ನಡದ ಶ್ರೀಮಂತ ಪರಂಪರೆ ಕಲೆ ಹಾಗೂ ಸಂಸ್ಕೃತಿ ಪ್ರತಿಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಮ್ಮಿಳಿತಗೊಳಿಸಬೇಕು.

ಕನ್ನಡ ನಾಡಿನ ಶ್ರೀಮಂತ ಸಂಸ್ಕೃತಿಯ ಪರಿಚಯ ಮಾಡಿಕೊಡುವ ಕಲಾ ಪ್ರಕಾರಗಳನ್ನು ಆಯೋಜಿಸಲು ಯೋಜನೆ ರೂಪಿಸಿಕೊಳ್ಳುವಂತೆಯೂ, ರಾಜ್ಯೋತ್ಸವ ಕಾರ್ಯಕ್ರಮದ ಮೂಲಕ ನಾಡಿನ ಕಲೆ, ಸಂಸ್ಕೃತಿ, ಇತಿಹಾಸ, ಸಾಹಿತ್ಯದ ಹಿರಿಮೆ–ಗರಿಮೆ ಕುರಿತು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಬೇಕು. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಸಂಜೆ ಕನ್ನಡ ನಾಡು ನುಡಿ ಹಾಗೂ ನಾಡಿನ ವೈವಿಧ್ಯತೆ ಪ್ರತಿಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮ ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸುವಂತೆಯೂ, ಭಾಗವಹಿಸುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಪ್ರಮಾಣ ವಿತರಿಸುವಂತೆ ಅವರು ಸೂಚನೆ ನೀಡಿದರು.

# ಸ್ಟಿಂಗ್ ಆಪರೇಷನ್‌ಗೆ ಅಪಾಯ ಹಣ ಕೈಬದಲಾಗಿದೆ: ಇ.ಡಿ. ಅಥವಾ ತೆರಿಗೆ ಇಲಾಖೆ ತನಿಖೆಗೆ ಎಚ್‌ಡಿಕೆ ಒತ್ತಾಯ

**ರಾಮನಗರ, ಅ.16:** ಮಾಜಿ ಮುಖ್ಯಮಂತ್ರಿ ವಿರುದ್ಧ ಸ್ಟಿಂಗ್ ಮಾಡುವುದಕ್ಕೆ ಅಪಾರ ಪ್ರಮಾಣದ ಹಣ ಕೈಬದಲಾಗಿದ್ದು, ಜಾರಿ ನಿರ್ದೇಶನಾಲಯ ಮತ್ತು ತೆರಿಗೆ ಇಲಾಖೆ ತನಿಖೆ ನಡೆಸಬೇಕು ಎಂದು ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಅವರು ಹೇಳಿದರು. ರಾಮನಗರ ಜಿಲ್ಲೆಯ ಬಿಡದಿಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಸಚಿವರು; ರಾಜ್ಯದಲ್ಲಿ ಸ್ಟಿಂಗ್ ಅಪರೇಷನ್ ದೊಡ್ಡದಾಗಿ ಸದ್ದು ಮಾಡುತ್ತಿದೆ. ಸ್ಟಿಂಗ್ ಮಾಡಲು 10ರಿಂದ 15 ಕೋಟಿ ಖರ್ಚು ಮಾಡಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿದ್ದಾರೆ. ಅದರ ಬಗ್ಗೆ ತನಿಖೆ ಅಗತ್ಯವಿದೆ ಎಂದರು. ನೀವು ಕೇವಲ ಹಣದ ಬಗ್ಗೆ ಯಾಕೆ ಲೆಕ್ಕ ಹಾಕುತ್ತಿರಾ, ಅದೆಲ್ಲ ಹೊರಗೆ ಬಂದರೆ ನಮ್ಮ ರಾಜ್ಯದ ಮಾನ ಮಾರ್ಯಾದೆ ಮೂರು ಕಾಸಿಗೂ ಇರಲ್ಲ. ಇವತ್ತು ಆ ರೀತಿಯ ವಾತವರಣ ನಿರ್ಮಾಣ ಆಗಿದೆ. 15 ಕೋಟಿಗಿಂತಲೂ ಹೆಚ್ಚಿನ ವ್ಯವಹಾರ ನಡೆದಿದೆ. ಇಡಿ ಏನಾದರೂ ಪ್ರವೇಶವಾದರೆ ಸತ್ಯ ಹೊರಗೆ ಬರುತ್ತದೆ. ಹಣಕಾಸು ಹೇಗೆಲ್ಲ ಹರಿದಾಡಿದೆ ಎಂಬ ಮಾಹಿತಿ ಸಿಗುತ್ತದೆ ಎಂದು ಅವರು ತಿಳಿಸಿದರು.



# ಅ.22ರಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಗೌರವ ಪ್ರಶಸ್ತಿ ಪ್ರದಾನ, ಪುಸ್ತಕ ಬಹುಮಾನ ವಿತರಣೆ ಸಮಾರಂಭ

**ವಿಜಯಪುರ,ಅ.15,** ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಬೆಂಗಳೂರಿನ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ವತಿಯಿಂದ 2026ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಹಾಗೂ 2025ನೇ ಸಾಲಿನ ಪುಸ್ತಕ ಬಹುಮಾನ ವಿತರಣಾ ಸಮಾರಂಭವನ್ನು ಅ.22ರಂದು ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ ಎಂದು ಪ್ರಾಧಿಕಾರದ ಸದಸ್ಯ ಸಂಚಾಲಕ ಎಸ್. ಗಂಗಾಧರಯ್ಯ ತಿಳಿಸಿದರು.

ಪತ್ರಿಕಾಗೋಷ್ಠಿಯಲಿ, ಪ್ರಾಧಿಕಾರವು ಪ್ರತಿವರ್ಷ ಅನುವಾದ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡಿದ ಸಾಹಿತಿಗಳು ಹಾಗೂ ಅನುವಾದಕರನ್ನು ಗುರುತಿಸಿ ಗೌರವ ಪ್ರಶಸ್ತಿ ಮತ್ತು ಪುಸ್ತಕ ಬಹುಮಾನಗಳನ್ನು ನೀಡುತ್ತಾ ಬಂದಿದೆ. ಅದರಂತೆ ಈ ಬಾರಿಯೂ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಹುಮಾನ ವಿತರಣಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

2026ನೇ ಸಾಲಿನ ಗೌರವ ಪ್ರಶಸ್ತಿಗೆ ಡಾ. ಸೂರ್ಯ ಕಾಂತ್ ಎಸ್. ಸೂಜ್ಯಾತ್, ಡಾ. ಮಲರ್ ವಿಳಿ ಕೆ., ಡಾ. ಬಂಜಗೆರೆ ಜಯಪ್ರಕಾಶ, ಪ್ರೊ. ಸಿ. ನಾಗಣ್ಣ ಹಾಗೂ ಡಾ. ಕೇಶವ ಶರ್ಮ ಕೆ. ಅವರು ಆಯ್ಕೆಯಾಗಿದ್ದಾರೆ.



2025ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಡಾ. ಕೆ. ಶ್ರೀನಾಥ, ಡಾ. ಪ್ರಮೋದ್ ಮುತಾಲಿಕ, ಕೊರ್ಗಿ ಶಂಕರ ನಾರಾಯಣ ಉಪಾಧ್ಯಾಯ, ಕನಕರಾಜ ಆರನಕಟ್ಟೆ, ಅಶೋಕ ಕುಮಾರ ಎಂ. ಹಾಗೂ ಚಂದ್ರಶೇಖರ ಮದಭಾವಿ ಅವರು ಆಯ್ಕೆಯಾಗಿದ್ದು, ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ, ನವದೆಹಲಿಯ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ–2 ಹಾಗೂ ಶಾಸಕ ಪ್ರಕಾಶ ಬಿ. ಹುಕ್ಕೇರಿ, ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ನಿಯಮಿತದ ಅಧ್ಯಕ್ಷರೂ ಆದ ಶಾಸಕ ಅಪ್ಪಾಜಿ ಸಿ.ಎಸ್. ನಾಡಗೌಡ, ಸಂಸದರಾದ ರಮೇಶ ಜಿಗಜಿಣಗಿ ಹಾಗೂ ಸುಧಾ ಮೂರ್ತಿ ಸೇರಿದಂತೆ ಜಿಲ್ಲೆಯ ಶಾಸಕರುಗಳು, ಜನಪ್ರತಿನಿಧಿಗಳು, ಗಣ್ಯರು ಹಾಗೂ ಸಾಹಿತಿಗಳು ಭಾಗವಹಿಸಲಿದ್ದಾರೆ ಎಂದರು.

# ತುಂಗಭದ್ರಾ ನೀರಾವರಿ ವಲಯದ 222 ಹಂಗಾಮಿ ಕಾರ್ಮಿಕರಿಗೆ 80 ದಿನಗಳ ಕೂಲಿ ಮೊತ್ತ 1 ಕೋಟಿ ರೂ ಪಾವತಿಗೆ ನ್ಯಾಯಾಲಯ ಆದೇಶ

**ರಾಯಚೂರು, ಅ. 16:** ತುಂಗಭದ್ರಾ ನೀರಾವರಿ ವಲಯ ಹಂಗಾಮಿ ಕಾರ್ಮಿಕರ ಕೂಲಿ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 222 ಕಾರ್ಮಿಕರ 80 ದಿನಗಳ ಕೂಲಿ ಮೊತ್ತ 1 ಕೋಟಿ 1 ಲಕ್ಷ 1 ಸಾವಿರ ರೂ. ಹಣವನ್ನು ಇದೇ ಅ.22 ರೊಳಗೆ ಜಿಲ್ಲಾ ಕಾರ್ಮಿಕ ನ್ಯಾಯಾಲಯ ಕಲಬುರಗಿ ಖಾತೆಗೆ ಜಮಾ ಮಾಡುವಂತೆ ಕಲಬುರಗಿ ಕಾರ್ಮಿಕ ನ್ಯಾಯಾಲಯವು ಆದೇಶ ಹೊರಡಿಸಿದ್ದು, ತಕ್ಷಣ ಹಣ ಬಿಡುಗಡೆ ಮಾಡಬೇಕು ಎಂದು ತುಂಗಭದ್ರಾ ನೀರಾವರಿ ವಲಯ ಹಂಗಾಮಿ ಕಾರ್ಮಿಕ ಸಂಘ (ಟಿಯುಸಿಐ) ಅಧ್ಯಕ್ಷ ಆರ್. ಮಾನಸಯ್ಯ ಒತ್ತಾಯಿಸಿದರು.



ಈ ಕುರಿತು ಮಾತನಾಡಿದ ಅವರು, ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯ ತುಂಗಭದ್ರ ಯೋಜನೆಯಡಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಕಳೆದ 2025 ಏಪ್ರಿಲ್ ನಿಂದ ಜೂ.30 ವರೆಗೆ ಕೆಲಸವೇ ಮಾಡಿಲ್ಲ, ವರ್ಷಪೂರ್ತಿ ವೇತನಕ್ಕೆ ಅವಕಾಶವಿಲ್ಲ ಎಂದು ನೆಪಹೇಳಿ ಸಿರವಾರದ ವಿಜಯಲಕ್ಷ್ಮೀ ಪಾಟೀಲ್, ಸಿಂಧನೂರಿನ ಸತ್ಯನಾರಾಯಣ ಶೆಟ್ಟಿ ಮತ್ತು ಯರಮರಸ್ನ ಕಾರ್ಯಪಾಲಕ ಅಭಿಯಂತರರು ವಂಚಿಸಿದ್ದರ ವಿರುದ್ಧ ಉಪ ಕಾರ್ಮಿಕ ಆಯುಕ್ತರಿಗೆ ದಾವೆ ಹೂಡಲಾಗಿತ್ತು. ಅರ್ಜಿ ವಿಚಾರಣೆ ನಡೆಸಿ ಕಾರ್ಮಿಕ ನ್ಯಾಯಾಲಯ ಪ್ರತಿ ಕಾರ್ಮಿಕನಿಗೆ 40 ಸಾವಿರ ರು. ವೇತನ, ಹಾಗೂ 5,500 ರು. ಪರಿಹಾರ ಸೇರಿಸಿ ಒಂದು ತಿಂಗಳೊಳಗೆ ಹಣ ಪಾವತಿಸಲು ಆದೇಶ ಮಾಡಿದೆ.

ಸಿರವಾರ ಉಪ ವಿಭಾಗದ 96 ಕಾರ್ಮಿಕರಿಗೆ 43 ಲಕ್ಷ ರು., ಸಿಂಧನೂರು ವಲಯದ 28 ಜನ ಕಾರ್ಮಿಕರಿಗೆ 12 ಲಕ್ಷ ರು., ಯರಮರಸ್ ವಲಯದ 88 ಕಾರ್ಮಿಕ ರಿಗೆ 45 ಸೇರಿ ಒಟ್ಟು ಹಣವನ್ನು ಕಲಬುರಗಿ ಉಪ ಆಯುಕ್ತರ ಆದೇಶದಂತೆ ಇದೇ ಅ.22 ರೊಳಗೆ ಡಿಎಲ್ಸಿ ಇವರ ಖಾತೆ ಜಮಾ ಮಾಡಲು ಮುಂದಾಗಬೇಕು ಎಂದು ಆದೇಶದಲ್ಲಿ ಸೂಚಿಸಿದ್ದಾರೆ.

ಕಾರ್ಮಿಕರ ಕೂಲಿ ಹಣ್ಣ ಕದ್ದಿರುವ ವಿಜಯಲಕ್ಷ್ಮೀ ಪಾಟೀಲ್ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳನ್ನು ಅಮಾನತು ಗೊಳಿಸಬೇಕು, ನಿಗಧಿತ ಅವಧಿಯಲ್ಲಿ ಕೂಲಿ ಪಾವತಿಸದೇ ಹೋದಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸುವ ಜೊತೆಗೆ ತೀವ್ರ ಸ್ವರೂಪದ ಹೋರಾಟ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು.

ಅಮಾನತುಗೊಳಿಸಿ ತನಿಖೆ ನಡೆಸಿ: ಜಿಲ್ಲೆಯ ಪ್ರಭಾವಿ ರಾಜಕಾರಣಿಗಳ ಬೆಂಬಲದಿಂದ ನಿಗಮದ ಅಧಿಕಾರಿಗಳು ಅಕ್ರಮ ಎಸಗುತ್ತಿದ್ದರೂ ಯಾವುದೇ ರೀತಿಯ ಕ್ರಮವಾಗದ ಸ್ಥಿತಿ ನಿರ್ಮಾಣಗೊಂಡಿರುವುದು ಶೋಚನೀಯ ಸಂಗತಿಯಾಗಿದ್ದು,ಸಿರವಾರ ಕಾರ್ಯಪಾಲಕ ಎಂಜಿನಿಯರಾಗಿರುವ ವಿಜಯಲಕ್ಷ್ಮೀ ಪಾಟೀಲ್ ಅವರು ಈ ಮುಂಚೆ ಯರಮರಸ್ ವಲಯದಲ್ಲಿ ಸ್ಟೋರ್ ಕೀಪರ್ ಆಗಿ ಕಾರ್ಯ ನಿರ್ವಹಿಸಿ, ಕಳೆದ 2021 ಸೆ.30 ರಂದು ಸಿರವಾರಕ್ಕೆ ವರ್ಗಾವಣೆಯಾಗಿ ಬಿಡುಗಡೆ ಹೊಂದಿದ್ದರು. ಆದರೆ ಇಂದಿಗೂ ಆರು ವರ್ಷವಾದರೂ ಪ್ರಭಾರವನ್ನು ಸಂಬಂಧಿಸಿ ಅಧಿಕಾರಿಗೆ ಹಸ್ತಾಂತರ ಮಾಡಿಲ್ಲ.ದ್ವಿತೀಯ ಸಹಾಯಕ ಸತೀಶ ಇವರಿಗೆ ಪ್ರಭಾರ ಹಸ್ತಾಂತರಿಸುವಂತೆ ಅಧಿಕಾರಿಗಳು ಪತ್ರ ಬರೆದರೂ ಹಸ್ತಾಂತರಿಸಿಲ್ಲ.

### ಬಳ್ಳಾರಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕಟ್ಟುನಿಟ್ಟಿನ ಸೂಚನೆ

# ಅಕ್ರಮ ಮದ್ಯ, ಮಾದಕದ್ರವ್ಯ, ರಾಸಾಯನಿಕ ನಿಯಂತ್ರಣಕ್ಕೆ ಕ್ರಮ

**ಬಳ್ಳಾರಿ,ಅ.15.**ಜಿಲ್ಲೆಯುಲ್ಲಿ ಕಾನೂನುಬಾಹಿರ ಚಟುವಟಿಕೆಗಳು, ಅಕ್ರಮ ಮದ್ಯ ಮಾರಾಟ, ಮಾದಕ ದ್ರವ್ಯ ಹಾಗೂ ಅನುಮಾನಾಸ್ಪದ ರಾಸಾಯನಿಕ ಬಳಕೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ ಅವರು ಹೇಳಿದರು.

***ಗಾಂಜಾ ಪ್ರಕರಣಗಳ ಪತ್ತೆ ಹಾಗೂ ಕಾರ್ಯಾಚರಣೆ:*** ಅಬಕಾರಿ ಇಲಾಖೆಯ ವರದಿಯ ಪ್ರಕಾರ, ಜನವರಿಯಿಂದ ಈವರೆಗೆ ಎನ್‌ಡಿಪಿಎಸ್ ಕಾಯ್ದೆಯಡಿ 10 ಪ್ರಕರಣಗಳು ದಾಖಲಾಗಿದ್ದು, ಒಟ್ಟು 14.150 ಕೆ.ಜಿ. ಒಣ ಗಾಂಜಾ ಹಾಗೂ 5 ಗಾಂಜಾ ಗಿಡಗಳನ್ನು ಜಪ್ತಿ ಮಾಡಲಾಗಿದೆ. ಜಿಲ್ಲೆಯ ಸಂಡೂರು ಮತ್ತು ಬಳ್ಳಾರಿ ತಾಲೂಕುಗಳಲ್ಲಿ ಗಾಂಜಾ ಪತ್ತೆ ಪ್ರಮಾಣ ಹೆಚ್ಚಾಗಿದ್ದು, ಸಿರುಗುಪ್ಪ ಭಾಗದಲ್ಲಿ ಹಿಂದಿನ ವರ್ಷಗಳಲ್ಲಿ ಗಾಂಜಾ ಬೆಳೆ ಪತ್ತೆಯಾಗಿದ್ದರೂ, ಈ ಬಾರಿ ನಿರಂತರ ಜಾಗೃತಿಯಿಂದಾಗಿ ನಿಯಂತ್ರಣದಲ್ಲಿದೆ. ಗಾಂಜಾ ಸೇವನೆ ಮಾಡುತ್ತಿರುವವರಲ್ಲಿ ಕಾಲೇಜು ವಿದ್ಯಾರ್ಥಿಗಳು ಹಾಗೂ 20ರ ಆಸುಪಾಸಿನ ಯುವಕರೇ ಕಳವಳಕ್ಕೆ ಕಾರಣವಾಗಿದೆ ಎಂದು ಅಬಕಾರಿ ಅಧಿಕಾರಿಗಳು ಮಾಹಿತಿ ನೀಡಿದರು.

***ಕಲಬೆರಕೆ ಸೇಂದಿ ಮತ್ತು ನೆರೆರಾಜ್ಯದಿಂದ ಅಕ್ರಮ ಸಾಗಾಟ:*** ಆಂಧ್ರಪ್ರದೇಶದ ಗಡಿ ಭಾಗದಿಂದ ಜಿಲ್ಲೆಗೆ ಅಕ್ರಮವಾಗಿ ಕಲಬೆರಕೆ ಸೇಂದಿ ಸರಬರಾಜಾಗುತ್ತಿದೆ. ಜಪ್ತಿ ಮಾಡಲಾದ ಸೇಂದಿ ಮಾದರಿಗಳಲ್ಲಿ ನಿಷೇಧಿತ 'ಕ್ಲೋರಾಲ್ ಹೈಡ್ರೇಟ್'ಅಂಶ ಇರುವುದು ಲ್ಯಾಬ್ ವರದಿಗಳಲ್ಲಿ ದೃಢಪಟ್ಟಿದೆ. ಪ್ರಸಕ್ತ ಸಾಲಿನಲ್ಲಿ 61 ಪ್ರಕರಣಗಳನ್ನು ದಾಖಲಿಸಿ, 46 ದ್ವಿಚಕ್ರ ವಾಹನಗಳು ಹಾಗೂ ಸುಮಾರು 950 ಲೀಟರ್ ಕಲಬೆರಕೆ ಸೇಂದಿಯನ್ನು ವಶಪಡಿಸಿಕೊಳ್ಳಲಾಗಿದೆ. ಗಡಿಭಾಗದಲ್ಲಿ ಸೂಕ್ತ ಬೆಂಬಲ ಸಿಗದ ಕಾರಣ, ಆಂಧ್ರಪ್ರದೇಶದ ಉನ್ನತ ಅಧಿಕಾರಿಗಳ ಮಟ್ಟದಲ್ಲಿ ಪತ್ರ ವ್ಯವಹಾರ ನಡೆಸಿ ಜಂಟಿ ಕಾರ್ಯಾಚರಣೆ ನಡೆಸಬೇಕು ಎಂದು ತಿಳಿಸಿದರು.

***ಅಂಚೆ ಮತ್ತು ಪಾರ್ಸೆಲ್ ಮೂಲಕ ಮಾದಕ ವಸ್ತು ರವಾನೆಗೆ ಕಣ್ಗಾವಲು:*** ಜಿಲ್ಲಾಧಿಕಾರಿಯವರು ಮಾತನಾಡಿ, ಅಂಚೆ ಇಲಾಖೆಯ ಮೂಲಕ ಅನುಮಾನಾಸ್ಪದ ಪಾರ್ಸೆಲ್‌ಗಳು ರವಾನೆಯಾಗುವುದನ್ನು ತಡೆಯಲು ನಿಯಮಗಳನ್ನು ಬಿಗಿಗೊಳಿಸಬೇಕು. ಒಂದೇ ವ್ಯಕ್ತಿಗೆ



ಅಥವಾ ಒಂದೇ ವಿಳಾಸಕ್ಕೆ ಪದೇಪದೇ ಬರುವ ಪಾರ್ಸೆಲ್‌ಗಳ ಕುರಿತು ಮಾಹಿತಿ ಕಲೆಹಾಕಲು ಸೂಚಿಸಲಾಯಿತು. ಯಾವುದೇ ಕಾರಣಕ್ಕೂ ಪಾರ್ಸೆಲ್‌ಗಳನ್ನು ರಸ್ತೆಬದಿಯಲ್ಲಾಗಲಿ ಅಥವಾ ಹೊರಗಡೆ ನೀಡದೆ, ಕೇವಲ ನಿಗದಿತ ವಿಳಾಸದ ಮನೆಬಾಗಿಲಿಗೆ ಮಾತ್ರ ತಲುಪಿಸಬೇಕು. ವಿದೇಶಗಳಿಂದ ಅಥವಾ ಬೇರೆ ಪ್ರದೇಶಗಳಿಂದ ಬರುವ ಅನುಮಾನಾ ಸ್ಪದ ಮತ್ತು ಹಾನಿಗೊಳಗಾದ ಪಾರ್ಸೆಲ್‌ಗಳನ್ನು ನೇರವಾಗಿ ವಿಳಾಸದಾರರ ಸಮ್ಮುಖದಲ್ಲೇ ಅಂಚೆ ಕಚೇರಿಯಲ್ಲಿ ತೆರೆಯುವ ವ್ಯವಸ್ಥೆ ಜಾರಿಯಲ್ಲಿದೆ ಎಂದು ಅಂಚೆ ಅಧಿಕಾರಿಗಳು ಸಭೆಗೆ ತಿಳಿಸಿದರು.

***ಅನಧಿಕೃತ ಮದ್ಯ ಮಾರಾಟ ತಡೆಗೆ ಖಡಕ್ ಸೂಚನೆ:*** ಗ್ರಾಮೀಣ ಭಾಗದ ಸಣ್ಣ ಪುಟ್ಟ ಅಂಗಡಿಗಳು, ಡಾಬಾಗಳು ಹಾಗೂ ದಿನಸಿ ಅಂಗಡಿಗಳಲ್ಲಿ ಅಕ್ರಮ ಮದ್ಯ ಮಾರಾಟ ನಡೆಯುತ್ತಿರುವ ಕುರಿತು ದೂರುಗಳು ಕೇಳಿಬಂದಿದ್ದು, ಅಬಕಾರಿ ಉಪ ನಿರೀಕ್ಷಕರು ಖುದ್ದು ಸ್ಥಳಗಳಿಗೆ ತೆರಳಿ ದಾಳಿ ನಡೆಸಿ, ಅಕ್ರಮ ತಾಣಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು, ಪರವಾನಗಿ ಇಲ್ಲದ ಸ್ಥಳಗಳನ್ನು ಸೀಜ್ ಮಾಡ ಬೇಕೆಂದು ಕಟ್ಟುನಿಟ್ಟಿನ ಆದೇಶ ನೀಡಿದರು.

***ಬುಡಕಟ್ಟು ಸಮುದಾಯಗಳ ಪುನರ್ವಸತಿ ಮತ್ತು ಜಾಗೃತಿ:*** ಹಕ್ಕಿ–ಪಿಕ್ಕಿ, ಶಿಖಾರಿ ಸೇರಿದಂತೆ ಅಲೆಮಾರಿ ಸಮುದಾಯಗಳು ಅಕ್ರಮ ಮದ್ಯ ತಯಾರಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗದಂತೆ ಮನವೊಲಿಸುವ ಕಾರ್ಯ ಮಾಡಬೇಕು. ಈಗಾಗಲೇ ಹಲವರನ್ನು ಇಂತಹ ಕೆಲಸಗಳಿಂದ ಮುಕ್ತಗೊಳಿಸಲು ಪ್ರಯತ್ನಿಸಲಾಗಿದ್ದು, ಅವರಿಗೆ ಪರ್ಯಾಯ ಉದ್ಯೋಗಾವಕಾಶ, ಕೃಷಿ ಭೂಮಿ ಹಂಚಿಕೆ ಹಾಗೂ ಸರ್ಕಾರಿ ಯೋಜನೆಗಳನ್ನು ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರಲು ಕ್ರಮ ಕೈಗೊಳ್ಳಬೇಕು ಎಂದರು.

***ಮೆಥನಾಲ್ ಸಾಗಣೆ ಹಾಗೂ ದುರುಪಯೋಗಕ್ಕೆ ತಡೆ:*** ಆಂಧ್ರಪ್ರದೇಶ ಗಡಿಯಿಂದ ಬರುವ ಮೆಥನಾಲ್ ದುರ್ಬಳಕೆಯಾಗದಂತೆ ಮತ್ತು ಅಕ್ರಮ ಮದ್ಯ ತಯಾರಿಕೆಗೆ ಬಳಕೆಯಾಗದಂತೆ ಅಬಕಾರಿ ಹಾಗೂ ಪೊಲೀಸ್ ಇಲಾಖೆಗಳು ನಿಗಾ ಇರಿಸಿವೆ. ಯಾವುದೇ ಕಾರಣಕ್ಕೂ ಈ ರಾಸಾಯನಿಕಗಳು ಹೊರಗೆ ಸೋರಿಕೆಯಾಗದಂತೆ ಎಸ್ಕಾರ್ಟ್ ಮೂಲಕ ನಿಗಾವಹಿಸಲಾಗುತ್ತಿದೆ ಎಂದು ಅಬಕಾರಿ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

***ಮಾದಕ ವಸ್ತುಗಳ ವಿರುದ್ಧ ಜಾಗೃತಿ ಅಭಿಯಾನ:*** ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಮಾತನಾಡಿ, ಶಾಲಾ–ಕಾಲೇಜುಗಳು ಹಾಗೂ ಹಾಸ್ಟೆಲ್‌ಗಳಲ್ಲಿ ಮಾದಕ ದ್ರವ್ಯಗಳ ವಿರುದ್ಧ ವ್ಯಾಪಕ ಜಾಗೃತಿ ಮೂಡಿಸಲು ಕ್ಯೂಆರ್ ಕೋಡ್ ಆಧಾರಿತ ವ್ಯವಸ್ಥೆ ರೂಪಿಸಿ ಪ್ರಚಾರ ಕೈಗೊಳ್ಳಬೇಕು. ರೈಲ್ವೆ ನಿಲ್ದಾಣ, ಸಿಟಿ ಬಸ್ ನಿಲ್ದಾಣ ಮತ್ತು ಬಿಎಂಸಿಆರ್ಸಿ ಆಸ್ಪತ್ರೆ ಮುಂತಾದ ಜನನಿಬಿಡ ಪ್ರದೇಶಗಳಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರು, ಚಾಲಕರು ಮತ್ತು ನಿರ್ವಾಹಕರಲ್ಲಿ ಜಾಗೃತಿ ಮೂಡಿಸಬೇಕು. ಮುಂಬರುವ ದಿನಗಳಲ್ಲಿ ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿಯೂ ಈ ಅಭಿಯಾನ ಹಮ್ಮಿಕೊಳ್ಳಬೇಕು ಎಂದು ತಿಳಿಸಿದರು.

# ಕಾಂಗ್ರೆಸ್ ಸಂಸದರ ವಜಾಗೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ



ರಾಯಚೂರಲ್ಲಿ ಬಿಜೆಪಿ ಕಾರ್ಯಕರ್ತರು, ಮಣಿಪುರದಲ್ಲಿ ಕಾಂಗ್ರೆಸ್ ಸಂಸದರು ವಿದ್ಯಾರ್ಥಿನಿಯರ ಮೇಲೆ ನಡೆಸಿರುವ ದೌರ್ಜನ್ಯ ಖಂಡಿಸಿ ಸಂಸದರ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ರಾಯಚೂರು, ಅ. 16: ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ದೌರ್ಜನ್ಯದ ಆರೋಪದ ಹಿನ್ನೆಲೆಯಲ್ಲಿ ಇನ್ನರ್ ಮಣಿಪುರ ಕ್ಷೇತ್ರದ ಕಾಂಗ್ರೆಸ್ ಸಂಸದ ಅಂಗೊಚಾ ಬಿಮೋಲ್ ಅಕೋಯಿಜಂ ಅವರನ್ನು ಸಂಸದ ಸ್ಥಾನದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಹಿಳೆಯರಿಗೆ ಸೂಕ್ತ ಗೌರವ ಮತ್ತು ನ್ಯಾಯ ಒದಗಿಸುವಲ್ಲಿ ಕಾಂಗ್ರೆಸ್ ವಿಫಲವಾಗಿದೆ ಎಂದು ಪ್ರತಿಭಟನಕಾರರು ಆರೋಪಿಸಿದರು. ಪ್ರಕರಣದ ಕುರಿತು ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಮುಖಂಡ ಬಸವರಾಜ್ ಮಾತನಾಡಿ, ಸೋನಿಯಾ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರೂ ಮಹಿಳೆಯರೇ. ಹಾಗಾದರೆ ಸಾಮಾನ್ಯ ಕುಟುಂಬಗಳ ಹೆಣ್ಣು ಮಕ್ಕಳು ಮಹಿಳೆಯರಲ್ಲವೇ? ಅವರಿಗೆ ನ್ಯಾಯ ಸಿಗಬಾರದೇ ಎಂದು ಪ್ರಶ್ನಿಸಿದರು. ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ದೌರ್ಜನ್ಯದ ಆರೋಪದ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷ ಮೌನ ವಹಿಸಿರುವುದೇಕೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೆಣ್ಣು ಮಕ್ಕಳನ್ನು ಭೋಗದ ವಸ್ತುವಿನಂತೆ ಕಾಣುವುದನ್ನು ಸಹಿಸಲು ಸಾಧ್ಯವಿಲ್ಲ. ಸಾಮಾನ್ಯ ಕುಟುಂಬಗಳ ಹೆಣ್ಣು ಮಕ್ಕಳು ಅನ್ಯಾಯದ ವಿರುದ್ಧ ಧ್ವನಿ ಎತ್ತಬಾರದೇ? ಇದೇ ಘಟನೆ ರಾಜಕಾರಣಿಗಳ ಮನೆಯ ಹೆಣ್ಣು ಮಕ್ಕಳಿಗೆ ಸಂಭವಿಸಿದ್ದರೆ ಅವರು ಸುಮ್ಮನಿರುತ್ತಿದ್ದರೇ ಎಂದು ಅವರು ಪ್ರಶ್ನಿಸಿದರು.

# ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಹಗೆತನ, ಯುದ್ಧ ಕಳವಳಕಾರಿ ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಭಾರತ ಅಸಮಾಧಾನ

**ನ್ಯೂಯಾರ್ಕ್, ಅ.16:** ಮಧ್ಯಪ್ರಾಚ್ಯದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಗೆತನ ಮತ್ತು ಯುದ್ಧದ ವಾತಾವರಣದ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ.

ನಾಗರಿಕ ಮೂಲಸೌಕರ್ಯಗಳು, ವಾಣಿಜ್ಯ ಹಡಗುಗಳು ಮತ್ತು ವಿಶ್ವಸಂಸ್ಥೆಯ ಶಾಂತಿಪಾಲಕರ ಮೇಲಿನ ನಿರಂತರ ದಾಳಿಗಳನ್ನು ಭಾರತವು ಕಟುವಾಗಿ ಖಂಡಿಸಿದೆ.

ವಿಶ್ವಸಂಸ್ಥೆಗೆ ಭಾರತದ ಖಾಯಂ ಪ್ರತಿನಿಧಿಯಾದ ರಾಯಭಾರಿ ಹರೀಶ್ ಪರ್ವತನೇನಿ ಅವರು ಅಕ್ಟೋಬರ್ 15ರಂದು ನಡೆದ ಭದ್ರತಾ ಮಂಡಳಿಯ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ಮಧ್ಯಪ್ರಾಚ್ಯದ ಸುರಕ್ಷತೆ ಮತ್ತು ಸ್ಥಿರತೆಯಲ್ಲಿ ಭಾರತಕ್ಕೆ ಅತ್ಯಂತ ಹೆಚ್ಚಿನ ಹಿತಾಸಕ್ತಿ ಇದೆ ಎಂದು ಸ್ಪಷ್ಟಪಡಿಸಿದರು.

ಕಳೆದ ತಿಂಗಳು ನವದೆಹಲಿಯಲ್ಲಿ ನಡೆದ ಬ್ರಿಕ್ಸ್ ನಾಯಕರ ಶೃಂಗಸಭೆಯನ್ನು ಉಲ್ಲೇಖಿಸಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ನಾವಿಕರ ತುರ್ತು ನೆರವು ಜಾಲ ಸ್ಥಾಪಿಸುವ ಪ್ರಸ್ತಾಪ ಮುಂದಿಟ್ಟಿದ್ದರು ಎಂದು ಸ್ಮರಿಸಿದರು. ಈ ಜಾಲವು ಸಂಬಂಧಪಟ್ಟ ದೇಶಗಳ




ಸಮುದ್ರ ವ್ಯವಹಾರಗಳ ಅಧಿಕಾರಿಗಳು ಮತ್ತು ರಾಯಭಾರ ಕಚೇರಿಗಳನ್ನು ಸಂಪರ್ಕಿಸಲಿದೆ. ಅಗತ್ಯವಿದ್ದಾಗ ತುರ್ತು ಸಂದೇಶ ರವಾನೆ, ವೈದ್ಯಕೀಯ ನೆರವು, ಕುಟುಂಬದವರೊಂದಿಗೆ ಸಂಪರ್ಕ ಹಾಗೂ ಸ್ಥಳಾಂತರಕ್ಕೆ ಸಹಾಯ ಮಾಡುವ ಉದ್ದೇಶವನ್ನು ಇದು ಹೊಂದಿದೆ ಎಂದರು.

ಯೆಮನ್ ವಿಚಾರದಲ್ಲಿ, ಆ ದೇಶದ ಏಕತೆ, ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಕಾಪಾಡುವ ಬದ್ಧತೆಯನ್ನು ಭಾರತ ಪುನರುಚ್ಚರಿಸಿದೆ. ಯೆಮನ್‌ನ ಆಂತರಿಕ ವ್ಯವಹಾರಗಳಲ್ಲಿ ಯಾವುದೇ ಹಸ್ತಕ್ಷೇಪವನ್ನು ಭಾರತ ವಿರೋಧಿಸುತ್ತದೆ ಎಂದು ತಿಳಿಸಿದರು.

### ಸ್ನೇಹಿತರ ಗುಂಪಿಗೆ ಕೈಜೋಡಿಸಿದ 23 ರಾಷ್ಟ್ರಗಳು

ವಾಣಿಜ್ಯ ಹಡಗುಗಳು ಮತ್ತು ನಾವಿಕರ ಮೇಲಿನ ದಾಳಿಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಭಾರತ ಮತ್ತು ಲೈಬೀರಿಯಾ ಕಳೆದ ತಿಂಗಳು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಹಡಗುಗಳು ಮತ್ತು ನಾವಿಕರ ಸುರಕ್ಷತೆಗಾಗಿ ಸ್ನೇಹಿತರ ಗುಂಪು ಎಂಬ ವೇದಿಕೆಯನ್ನು ಆರಂಭಿಸಿವೆ. ಈ ಉಪಕ್ರಮಕ್ಕೆ 23 ಸದಸ್ಯ ರಾಷ್ಟ್ರಗಳು ಭಾರತ ಮತ್ತು ಲೈಬೀರಿಯಾದೊಂದಿಗೆ ಕೈಜೋಡಿಸಿವೆ. ಪದೇಪದೇ ನಡೆಯುತ್ತಿರುವ ದಾಳಿಗಳನ್ನು ತಡೆಯಲು ಮತ್ತು ನಾವಿಕರ ಹಕ್ಕುಗಳನ್ನು ರಕ್ಷಿಸಲು ಹೆಚ್ಚಿನ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಈ ರಾಷ್ಟ್ರಗಳು ಬೆಂಬಲ ನೀಡಲು ಸಿದ್ಧವಾಗಿವೆ ಎಂದು ಹರೀಶ್ ಪರ್ವತನೇನಿ ಹೇಳಿದರು. ವಿಶ್ವದ ವಾಣಿಜ್ಯ ಹಡಗುಗಳಲ್ಲಿ ಸುಮಾರು 20 ಲಕ್ಷ ನಾವಿಕರು ಕಾರ್ಯನಿರ್ವಹಿಸುತ್ತಿದ್ದು, ಜಾಗತಿಕ ವ್ಯಾಪಾರದ ಐದನೇ ನಾಲ್ಕು ಭಾಗದಷ್ಟು ವಹಿವಾಟು ಸಮುದ್ರ ಮಾರ್ಗದ ಮೂಲಕ ನಡೆಯುತ್ತದೆ. ಈ ಹಿನ್ನೆಲೆಯಲ್ಲಿ ಸ್ನೇಹಿತರ ಗುಂಪು ಎಲ್ಲರನ್ನೂ ಒಳಗೊಳ್ಳುವ, ಸ್ವಯಂಪ್ರೇರಿತ ಹಾಗೂ ಕಾರ್ಯಪ್ರಧಾನ ವೇದಿಕೆಯಾಗಿದೆ. ಸಹಕಾರವನ್ನು ಮತ್ತಷ್ಟು ಬಲಪಡಿಸುವುದು ಮತ್ತು ಪ್ರಾಯೋಗಿಕ ಕ್ರಮಗಳನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ ಎಂದು ವಿವರಿಸಿದರು. ವಾಣಿಜ್ಯ ಹಡಗುಗಳ ಮೇಲಿನ ದಾಳಿಗಳು ಮತ್ತು ಹಾರ್ಮುಜ್ ಜಲಸಂಧಿಯ ಬಿಕ್ಕಟ್ಟಿನತ್ತ ಜಾಗತಿಕ ಗಮನ ಕೇಂದ್ರೀಕೃತವಾಗಿರುವುದರಿಂದ ಗಾಜಾ ಪಟ್ಟಿಯಲ್ಲಿನ ಗಂಭೀರ ಮಾನವೀಯ ಬಿಕ್ಕಟ್ಟಿನ ಕಡೆಗಿನ ಗಮನ ಬೇರೆಡೆಗೆ ತಿರುಗಬಾರದು ಎಂದು ಭಾರತ ಒತ್ತಿಹೇಳಿದೆ. ಭಯೋತ್ಪಾದನೆಗೆ ಎಲ್ಲಿಯೂ ಸಮರ್ಥನೆ ಇಲ್ಲ. 2023ರ ಅಕ್ಟೋಬರ್ 7ರಂದು ನಡೆದ ದಾಳಿಗಳನ್ನು ಭಾರತ ಯಾವುದೇ ಅಸ್ಪಷ್ಟತೆಯಿಲ್ಲದೆ ಖಂಡಿಸಿದೆ ಎಂದು ಹೇಳಿದರು. ಮಾನವೀಯ ನೆರವು, ಸಂವಾದ ಮತ್ತು ರಾಜತಾಂತ್ರಿಕ ಪ್ರಯತ್ನಗಳಿಗೆ ಭಾರತ ನಿರಂತರ ಬೆಂಬಲ ನೀಡಲಿದೆ. ಮಾತುಕತೆಯ ಮೂಲಕ ಎರಡು ರಾಷ್ಟ್ರಗಳ ಪರಿಹಾರವನ್ನು ಸಾಧಿಸುವ ನಿಲುವಿಗೂ ಬದ್ಧವಾಗಿದೆ. ನಾಗರಿಕರ ಜೀವಹಾನಿ ಮತ್ತು ನಾಗರಿಕ ಮೂಲಸೌಕರ್ಯಗಳ ನಾಶವನ್ನು ತಡೆಯಲು ಅಂತರರಾಷ್ಟ್ರೀಯ ಸಮುದಾಯ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

# ಭಾರತದ ಮೇಲೆ ಶೇ.100 ಸುಂಕ 10 ದಿನದಲ್ಲಿ ಟ್ರಂಪ್ ತೀರ್ಮಾನ

ವಾಷಿಂಗ್ಟನ್, ಅ.16: ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸರಕುಗಳ ಮೇಲೆ ಶೇ.100ರಷ್ಟು ಭಾರಿ ಆಮದು ಸುಂಕ ಹೇರಬೇಕೇ ಅಥವಾ ಬೇಡವೇ ಎಂಬುದರ ಕುರಿತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದಿನ 10 ದಿನಗಳ ಒಳಗೆ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ. ಅಮೆರಿಕದ ಉತ್ಪನ್ನಗಳಿಗೆ ಭಾರತದಲ್ಲಿ ಹೆಚ್ಚಿನ ತೆರಿಗೆ ವಿಧಿಸಲಾಗುತ್ತಿದೆ ಎಂಬುದು ಟ್ರಂಪ್ ಅವರ ದೀರ್ಘಕಾಲದ ಆರೋಪವಾಗಿದೆ. ವ್ಯಾಪಾರ ಸಮತೋಲನವನ್ನು ಕಾಯ್ದುಕೊಳ್ಳಲು ಭಾರತದ ಮೇಲೆ ಕಠಿಣ ಕ್ರಮ ಅಗತ್ಯ ಎಂಬುದು ಅವರ ಪ್ರತಿಪಾದನೆಯಾಗಿದೆ.



ಮುಂದಿನ 10 ದಿನಗಳಲ್ಲಿ ಟ್ರಂಪ್ ತಮ್ಮ ಆರ್ಥಿಕ ಸಲಹೆಗಾರರೊಂದಿಗೆ ಉನ್ನತ ಮಟ್ಟದ ಸಭೆ ನಡೆಸಲಿದ್ದು, ಈ ಶೇ. 100ರಷ್ಟು ಸುಂಕದ ಕರಡು ಪ್ರಸ್ತಾವನೆಗೆ ಅಂತಿಮ ಮೊಹರು ಒತ್ತುವ ಸಾಧ್ಯತೆಯಿದೆ. ಒಂದು ವೇಳೆ ಈ ದಂಡನಾತ್ಮಕ ಸುಂಕ ಜಾರಿಗೆ ಬಂದರೆ, ಭಾರತದಿಂದ ರಫ್ತಾಗುವ ಆಟೋಮೊಬೈಲ್ ಬಿಡಿಭಾಗಗಳು, ಜವಳಿ, ಔಷಧೀಯ ಉತ್ಪನ್ನಗಳು ಮತ್ತು ಕೃಷಿ ಉತ್ಪನ್ನಗಳ ಮೇಲೆ ತೀವ್ರವಾದ ಆರ್ಥಿಕ ಪೆಟ್ಟು ಬೀಳಲಿದೆ.

ಭಾರತದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಈ ಪರಿಸ್ಥಿತಿಯನ್ನು ಹತ್ತಿರದಿಂದ ಗಮನಿಸುತ್ತಿದ್ದು, ಯಾವುದೇ ರೀತಿಯ ಹಠಾತ್ ವ್ಯಾಪಾರ ನಿರ್ಬಂಧ ಎದುರಾದರೆ ಅದನ್ನು ತಡೆಯಲು ರಾಜತಾಂತ್ರಿಕ ಹಾಗೂ ಪರ್ಯಾಯ ವ್ಯಾಪಾರ ತಂತ್ರಗಳನ್ನು ಸಿದ್ಧಪಡಿಸಿಕೊಳ್ಳುತ್ತಿದೆ.

ಟ್ರಂಪ್ ಅವರ ಈ ನಡೆ ಬರಿ ಚುನಾವಣಾ ವಿಷಯ ಅಥವಾ ಬೆದರಿಕೆಯೋ ಅಥವಾ ನಿಜವಾಗಿಯೂ ಜಾರಿಯಾಗುವ ನೀತಿಯೋ ಎಂಬುದು ಮುಂದಿನ 10 ದಿನಗಳ ಅವರ ನಡೆ ಹಾಗೂ ಅಧಿಕೃತ ಹೇಳಿಕೆಯಿಂದ ಸ್ಪಷ್ಟವಾಗಲಿದೆ.

# ಢಾಕಾದಲ್ಲಿ ದುರ್ಗಾಪೂಜೆ ವೇಳೆ ಜಗನ್ನಾಥ ವಿವಿಯಲ್ಲಿ ಬೀಫ್ ಪಾರ್ಟಿ ಕಿರಿಕ್ ದೇಗುಲದ ಬಳಿ ಗೋಮಾಂಸ ಬೇಯಿಸಲು ಯತ್ನ; ಕ್ಯಾಂಪಸ್‌ನಲ್ಲಿ ಉದ್ವಿಗ್ನತೆ

ಢಾಕಾ (ಬಾಂಗ್ಲಾದೇಶ), ಅ.16: ಢಾಕಾದಲ್ಲಿರುವ ಜಗನ್ನಾಥ ವಿಶ್ವವಿದ್ಯಾಲಯದ ಆವರಣದಲ್ಲಿ ಅಕ್ಟೋಬರ್‌ನಲ್ಲಿ ದುರ್ಗಾಪೂಜೆಯ (ನವರಾತ್ರಿ) ಆರಂಭದ ದಿನಗಳಲ್ಲಿ ದನದ ಮಾಂಸದ ಅಡುಗೆ ಮತ್ತು ಗೋಹತ್ಯೆಗೆ ಸಂಬಂಧಿಸಿದಂತೆ ತೀವ್ರ ವಿವಾದ ಮತ್ತು ಉದ್ವಿಗ್ನತೆ ಉಂಟಾಗಿದೆ.

ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿರುವ ಜಗನ್ನಾಥ ವಿಶ್ವವಿದ್ಯಾಲಯದ ಇಸ್ಲಾಮಿಕ್ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದ 17ನೇ ಬ್ಯಾಚ್‌ನ ವಿದ್ಯಾರ್ಥಿ ಗುಂಪೊಂದು ಕ್ಯಾಂಪಸ್‌ನ ಮುಕ್ತಮಂಚ್ (ಮುಕ್ತ ಸಭಾಂಗಣ) ಬಳಿ 'ಬೀಫ್ ಖಿಚಡಿ' (ದನದ ಮಾಂಸದ ಅಡುಗೆ) ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಸ್ಥಳವು ವಿಶ್ವವಿದ್ಯಾಲಯದ ಆವರಣದಲ್ಲಿರುವ ದೇವಸ್ಥಾನ ಮತ್ತು ದುರ್ಗಾಪೂಜೆ ಪೆಂಡಾಲ್‌ನ ಸಮೀಪದಲ್ಲಿದ್ದ ಕಾರಣ, ಹಿಂದೂ ವಿದ್ಯಾರ್ಥಿಗಳು



ತಮ್ಮ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು. ಈ ವಿವಾದದ ಬೆನ್ನಲ್ಲೇ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಕ್ಯಾಂಪಸ್ ಒಳಗೆ ಪ್ರಾಣಿಬಲಿ ಅಥವಾ ಮುಕ್ತವಾಗಿ ಅಡುಗೆ ಮಾಡುವುದನ್ನು ನಿಷೇಧಿಸಿ ಆದೇಶ ಹೊರಡಿಸಿತು. ಏತನ್ಮಧ್ಯೆ, ಆಡಳಿತ ಮಂಡಳಿಯ ನಿಷೇಧವನ್ನು ವಿರೋಧಿಸಿ ಮತ್ತೊಂದು ವಿದ್ಯಾರ್ಥಿ ಸಂಘಟನೆಯು ಕ್ಯಾಂಪಸ್‌ನಲ್ಲಿ ಹಸುವನ್ನು ಕೊಂದು ಪ್ರತಿಭಟನಾತ್ಮಕವಾಗಿ ಗೋಮಾಂಸದ ಔತಣಕೂಟ ಏರ್ಪಡಿಸಲು ನಿರ್ಧರಿಸಿತು.

ಈ ವಿಷಯ ತೀವ್ರ ಸ್ವರೂಪ ಪಡೆದುಕೊಂಡಾಗ, ವಿಶ್ವವಿದ್ಯಾಲಯದ ಪ್ರಾಕ್ಟರ್ ಮತ್ತು ದೇವಸ್ಥಾನದ ಸಮಿತಿಯ ಮುಖ್ಯಸ್ಥರು ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿದರು. ದೇವಸ್ಥಾನದ ಸಮಿತಿಯು, "ದೇವಸ್ಥಾನದ ಮುಂಭಾಗದಲ್ಲಿ ಅಥವಾ ಪೂಜೆಗೆ ಅಡ್ಡಿಯಾಗುವಂತೆ ಈ ಕಾರ್ಯ ಮಾಡಬಾರದು, ಕ್ಯಾಂಪಸ್‌ನ ಬೇರೆಡೆ ಮುಕ್ತ ಮೈದಾನದಲ್ಲಿ (ಆರ್ಟ್ಸ್ ಬಿಲ್ಡಿಂಗ್ ಬಳಿ) ನಡೆಸಲು ನಮ್ಮ ಅಭ್ಯಂತರವಿಲ್ಲ" ಎಂದು ಸ್ಪಷ್ಟಪಡಿಸಿತು.

ಮಾತುಕತೆಯ ನಂತರ ಈ ಪ್ರತಿಭಟನಾತ್ಮಕ ಕಾರ್ಯಕ್ರಮವನ್ನು ದೇವಸ್ಥಾನದಿಂದ ದೂರವಿರುವ ಕಲೆ ವಿಭಾಗದ ಸಮೀಪದ ಮುಕ್ತ ಮೈದಾನಕ್ಕೆ ಸ್ಥಳಾಂತರಿಸಲು ವಿದ್ಯಾರ್ಥಿಗಳು ಒಪ್ಪಿಕೊಂಡಿದ್ದಾರೆ.

# ಜರ್ಮನಿಯಲ್ಲಿ ಮೂವರು ಭಾರತೀಯರ ಭೀಕರ ಸಾವು: ಕೊಲೆ ಶಂಕೆ

**ಬೋಚುಮ್, ಅ.16:** ಜರ್ಮನಿಯಲ್ಲಿ ನಡೆದ ಭೀಕರ ಘಟನೆಯೊಂದರಲ್ಲಿ ಮೂವರು ಮಲಯಾಳಿಗಳು (ಕೇರಳದವರು) ದುರಂತ ಸಾವಿಗೀಡಾಗಿದ್ದಾರೆ. ಜರ್ಮನಿಯ ಬೋಚುಮ್ ನಗರದಲ್ಲಿ ನಡೆದ ಭೀಕರ ಅಗ್ನಿ ದುರಂತ ಕೇವಲ ಆಕಸ್ಮಿಕ ಅಪಘಾತವಲ್ಲ, ಬದಲಿಗೆ ಒಬ್ಬ ಕಿಡಿಗೇಡಿಯಿಂದ ನಡೆದ ಪೂರ್ವಯೋಜಿತ ಹತ್ಯೆ ಎಂದು ಪೊಲೀಸರು ಶಂಕಿಸಿದ್ದಾರೆ.



ಕೊಲ್ಲಂ ಜಿಲ್ಲೆಯ ಚೆಮ್ಮಕ್ಕಡ್ ಮೂಲದ ಅಂಜಲಿ ಶೀಲಾ ಜಾಯ್ (25), ಇಡುಕ್ಕಿ ಜಿಲ್ಲೆಯ ಕತ್ತಪ್ಪನ ಮೂಲದ ನೋವಾ ಸಾಬು (25) ಮತ್ತು ಕಾಲಡಿ ಮೂಲದ ಸ್ವಿನ್ ಜಾನಿ (26) ಮೃತ ದುರ್ದೈವಿಗಳು. ಈ ಘಟನೆಗೆ ಸಂಬಂಧಿಸಿದಂತೆ ಅದೇ ಕಟ್ಟಡದಲ್ಲಿ ವಾಸವಿದ್ದ 41 ವರ್ಷದ ರೊಮೇನಿಯಾ ದೇಶದ ಪ್ರಜೆಯನ್ನು ಜರ್ಮನ್ ಪೊಲೀಸರು ಕೊಲೆ ಆರೋಪದ ಮೇಲೆ ಬಂಧಿಸಿದ್ದು, ಆತನೇ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿರುವುದಾಗಿ ಪೊಲೀಸರು ಶಂಕಿಸಿದ್ದಾರೆ.

ಮಂಗಳವಾರ ಬೆಳಗಿನ ಜಾವ ಸುಮಾರು 4:15ರ ಸುಮಾರಿಗೆ ಬೋಮ್ ಹಫ್ಸ್ಟೆಡೆ ಜಿಲ್ಲೆಯ ಪೋಸ್ಟ್ರಾಸ್ಸ್‌ನಲ್ಲಿರುವ ಬಹುಮಹಡಿ ಕಟ್ಟಡದಲ್ಲಿ ಈ ಅಗ್ನಿ ಅವಘಡ ಸಂಭವಿಸಿದೆ. ನೆಲಮಹಡಿಯಲ್ಲಿರುವ ಹಜಾರದಲ್ಲಿ ಇರಿಸಲಾಗಿದ್ದ ಮಕ್ಕಳ ಸ್ಟ್ರೋಲರ್ಗಳಿಗೆ (ಗಾಲಿ ಕುರ್ಚಿಗಳು) ಕಿಡಿಗೇಡಿ ಬೆಂಕಿ ಹಚ್ಚಿದ್ದು, ಬೆಂಕಿಯು ಕಟ್ಟಡದ ಮರದ ಮೆಟ್ಟಿಲುಗಳಿಗೆ ವೇಗವಾಗಿ ಹರಡಿಕೊಂಡು ದುರಂತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಘಟನೆಗೆ ಕಾರಣನಾದ 41 ವರ್ಷದ ಆರೋಪಿಯನ್ನು ಬಂಧಿಸಿರುವ ಪೊಲೀಸರು ತೀವ್ರ ವಿಚಾರಣೆಗೊಳಪಡಿಸಿದ್ದು, ಬೆಂಕಿಯ ಅನಾಹುತದಲ್ಲಿ ಗಾಯಗೊಂಡಿರುವ ಐದು ಜನ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಿವೃತ್ತ ಎಸ್‌ಐ ಸಾಬು ಅವರ ಪುತ್ರಿಯಾಗಿರುವ ನೋವಾ ಸಾಬು, ಜುಲೈ 3ರಂದಷ್ಟೇ ಜರ್ಮನಿಗೆ ತೆರಳಿದ್ದರು ಮತ್ತು ಅಲ್ಲಿ ಅರೆಕಾಲಿಕ ಜಿಮ್ ಟ್ರೈನರ್ ಆಗಿ ಕೆಲಸ ಮಾಡುತ್ತಿದ್ದರು. ಇನ್ನು ಕಾಲಡಿ ಮೂಲದ ಸ್ವಿನ್ ಜಾನಿ ಅವರು ಉನ್ನತ ವ್ಯಾಸಂಗಕ್ಕಾಗಿ ಕೇವಲ ಎರಡು ವಾರಗಳ ಹಿಂದಷ್ಟೇ ಜರ್ಮನಿಗೆ ಹೋಗಿದ್ದರು.

# ಝೆಲೆನ್‌ಸ್ಕಿ ನಮ್ಮೊಂದಿಗೆ ವ್ಯವಹರಿಸಲು ಸೂಕ್ತ ವ್ಯಕ್ತಿಯಲ್ಲ: ಡೊನಾಲ್ಡ್ ಟ್ರಂಪ್ ಟೀಕೆ





ವಾಷಿಂಗ್ಟನ್, ಅ.16: ಅಮೆರಿಕದೊಂದಿಗೆ ವ್ಯವಹರಿಸಲು ಝೆಲೆನ್‌ಸ್ಕಿ ಸೂಕ್ತ ವ್ಯಕ್ತಿಯಲ್ಲ. ರಷ್ಯಾ–ಉಕ್ರೇನ್ ಯುದ್ಧವನ್ನು ಕೊನೆಗೊಳಿಸಲು ಅವರು ಸಿದ್ಧರಿಲ್ಲ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟೀಕಿಸಿದ್ದಾರೆ.

ಶಾಂತಿಯ ಬಗ್ಗೆ ಉಕ್ರೇನಿಯನ್ ಅಧ್ಯಕ್ಷರ ಒಲವು ಪ್ರಶ್ನಾರ್ಹವಾಗಿದೆ. ಅವರು ಬಿಕ್ಕಟ್ಟನ್ನು ಇತ್ಯರ್ಥಪಡಿಸಲು ಬಯಸುವುದಾಗಿ ಹೇಳುತ್ತಾರೆ, ಆದರೆ ಹಾಗೆ ನಡೆದುಕೊಳ್ಳುತ್ತಿಲ್ಲ.. ನನಗೆ ಝೆಲೆನ್‌ಸ್ಕಿ ಅಷ್ಟು ಇಷ್ಟವಿಲ್ಲ. ಅವರು ಆ ದೇಶವನ್ನು ನಾಶಪಡಿಸಿದ್ದಾರೆ. ಪುಟಿನ್‌ಗಿಂತ ಝೆಲೆನ್‌ಸ್ಕಿ ಅವರೊಂದಿಗೆ ವ್ಯವಹರಿಸುವುದು ಹೆಚ್ಚು ಕಷ್ಟ ಎಂದು ಭಾವಿಸುತ್ತೇನೆ' ಎಂದು ಟ್ರಂಪ್ ಹೇಳಿದ್ದಾರೆ. ಅಲ್ಲದೆ, 2014ರಲ್ಲಿ ರಷ್ಯವು ಕ್ರಿಮಿಯಾವನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ಒಳಗೊಂಡಂತೆ ಯುದ್ಧದ ನಿರ್ವಹಣೆಯ ವಿಚಾರದಲ್ಲಿ ಒಬಾಮಾ ಮತ್ತು ಬೈಡನ್ ಆಡಳಿತವನ್ನು ಟೀಕಿಸಿದರು.

ಉಕ್ರೇನ್ ಪುನಃ ರಷ್ಯದ ತೈಲ ಸಂಸ್ಕರಣಾಗಾರಗಳ ಮೇಲೆ ದಾಳಿ ನಡೆಸಿರುವುದನ್ನು 'ನಾಚಿಕೆಗೇಡಿನ ಸಂಗತಿ' ಎಂದು ಟ್ರಂಪ್ ಬಣ್ಣಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆಗಳನ್ನು ಹೆಚ್ಚಿಸುವುದೇ ಅವರು (ಝೆಲೆನ್‌ಸ್ಕಿ) ಮಾಡುವ ಪ್ರತಿಯೊಂದು ಕೆಲಸದ ಉದ್ದೇಶವಾಗಿದೆ. ಡೀಸೆಲ್ ಇಂಧನವನ್ನು ಉತ್ಪಾದಿಸುವ ತೈಲ ಸಂಸ್ಕರಣಾಗಾರಗಳ ಮೇಲೆ ದಾಳಿ ಮಾಡುವ ಮೂಲಕ, ನೀವು ಜಗತ್ತಿಗೆ ಯಾವುದೇ ರೀತಿಯ ಉಪಕಾರ ಮಾಡುತ್ತಿಲ್ಲ ಎಂದು ಟ್ರಂಪ್ ವಾಗ್ದಾಳಿ ನಡೆಸಿದ್ದಾರೆ.

# ಹೌತಿಗಳ ದಾಳಿ ಹಿಮ್ಮೆಟ್ಟಿಸಿದ ಯಮನ್ ಸರಕಾರಿ ಪಡೆ



ಏಡನ್, ಅ.16: ಯಮನ್‌ನ ತೈಜ್‌ನಲ್ಲಿರುವ ಧಾಹಿಹ್ ಮತ್ತು ಹಿಸ್ನ್ ಕಹ್ಲಾನ್ ರಂಗಗಳಲ್ಲಿ ಹೌತಿಗಳು ನಡೆಸಿದ ಎರಡು ದಾಳಿಗಳನ್ನು ಯಮನ್ ಸರಕಾರಿ ಪಡೆಗಳು ಹಿಮ್ಮೆಟ್ಟಿಸಿದ್ದು, ಹೂತಿ ಗುಂಪಿಗೆ ಭಾರೀ ನಷ್ಟವನ್ನುಂಟು ಮಾಡಿವೆ ಎಂದು ಸರಕಾರಿ ಮಾಧ್ಯಮಗಳು ತಿಳಿಸಿವೆ. ನೈಋತ್ಯ ಯಮನ್‌ನ ತೈಜ್ ಪ್ರಾಂತದ ಅಲ್–ಮಸ್ರಖ್ ಜಿಲ್ಲೆಯ ಜಬಲ್ ಅಲ್–ದಾಹಿಹ್ ಪ್ರದೇಶದಲ್ಲಿ ಸರಕಾರಿ ಪಡೆಗಳು ಮತ್ತು ಹೌತಿಗಳ ನಡುವೆ ಚಕಮಕಿಗಳು ನಡೆಯುತ್ತಿವೆ ಎಂದು ವರದಿಯಾಗಿದೆ. ಈ ಮಧ್ಯೆ, ಸೌದಿ ಅರೇಬಿಯಾದ ಕೆಂಪು ಸಮುದ್ರದ ನಗರವಾದ ಯಾನ್ಬು ಕಡೆಗೆ ಉಡಾಯಿಸಲಾದ ಬ್ಯಾಲಿಸ್ಟಿಕ್ ಕ್ಷಿಪಣಿ, ಕೆಂಪು ಸಮುದ್ರದ ಮೇಲೆ ಎರಡು ಕ್ರೂಸ್ ಕ್ಷಿಪಣಿಗಳು ಮತ್ತು ದಕ್ಷಿಣ ಹಾಗೂ ರಿಯಾದ್ ಪ್ರದೇಶಗಳಲ್ಲಿ ಮೂರು ಡ್ರೋನ್‌ಗಳನ್ನು ತಡೆದು ಧ್ವಂಸಗೊಳಿಸಿರುವುದಾಗಿ ಸೌದಿ ನೇತೃತ್ವದ ಒಕ್ಕೂಟ ತಿಳಿಸಿದೆ.

# ಪಾಕ್ ಸೇರಿ 29 ದೇಶಗಳ ಪೈಲಟ್‌ಗಳಿಗೆ ಇಸ್ರೇಲ್ ನಿರ್ಬಂಧ

**ಟೆಲ್‌ಅವೀವ್, ಅ.16:** ಟೆಲ್ ಅವೀವ್‌ಗೆ ಮತ್ತು ಅಲ್ಲಿಂದ ಕಾರ್ಯನಿರ್ವಹಿಸುವ ವಿಮಾನಗಳಲ್ಲಿ ಕೆಲವು ನಿರ್ದಿಷ್ಟ ದೇಶಗಳ ವಿಮಾನ ಸಿಬ್ಬಂದಿಯನ್ನು ನಿರ್ಬಂಧಿಸುವ ಇಸ್ರೇಲ್‌ನ ನಿಯಮಗಳಿಗೆ ಬದ್ಧವಾಗಿರಲು ಏರ್ ಫ್ರಾನ್ಸ್ (ಫ್ರಾನ್ಸ್), ಯುನೈಟೆಡ್ ಏರ್‌ಲೈನ್ಸ್ (ಅಮೆರಿಕ) ಮತ್ತು ಸ್ಮಾರ್ಟ್‌ವಿಂಗ್ಸ್ (ಜೆಕ್ ಗಣರಾಜ್ಯ) ಸಂಸ್ಥೆಗಳು ಮುಂದಾಗಿವೆ.

ವಿಮಾನಯಾನ ಮಾಹಿತಿ ಸಂಸ್ಥೆ 'ಸಿಎಚ್–ಏವಿಯೇಷನ್' ಪ್ರಕಾರ, ಇಸ್ರೇಲ್ ವಿಧಿಸಿರುವ ಈ ನಿರ್ಬಂಧಗಳಿಂದಾಗಿ ವಿಮಾನ ಸೇವೆಗಳನ್ನು ಒದಗಿಸದಂತೆ ತಡೆಯಬಹುದಾದ 29 ದೇಶಗಳ ಪಟ್ಟಿಯಲ್ಲಿ ಪಾಕಿಸ್ತಾನವೂ ಸೇರಿದೆ. ಇಸ್ರೇಲ್‌ನೊಂದಿಗೆ ರಾಜತಾಂತ್ರಿಕ ಬಾಂಧವ್ಯ ಹೊಂದಿಲ್ಲದ ದೇಶಗಳು ಈ ಪಟ್ಟಿಯಲ್ಲಿದ್ದು, ವರದಿಗಳ ಪ್ರಕಾರ ಈ ನಿಯಮಗಳು ಸಂಬಂಧಪಟ್ಟ ದೇಶಗಳ ಪೌರತ್ವ ಅಥವಾ ದ್ವಿಪೌರತ್ವ ಹೊಂದಿರುವ ವಿಮಾನ ಸಿಬ್ಬಂದಿಗೆ ಅನ್ವಯಿಸುತ್ತವೆ.

# ಅಪಘಾತದಲ್ಲಿ: ಜೆಇಎಂ ಕಮಾಂಡರ್ ಅಸಿಮ್, ಪತ್ನಿ, ಪುತ್ರ ಸಾವು

ಲಾಹೋರ್, ಅ.16: ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಜೈಶ್–ಎ–ಮೊಹಮ್ಮದ್‌ನ (ಜೆಇಎಂ) ಕಾರ್ಯಾಚರಣಾ ಕಮಾಂಡರ್ ಮುಹಮ್ಮದ್ ಅಸಿಮ್, ಪತ್ನಿ ಹುಮಾ ಅಸಿಮ್ ಮತ್ತು ಪುತ್ರ ತಲ್ಹಾ ಅಸಿಮ್ ಲಾಹೋರ್‌ನಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಲಾಹೋರ್‌ನ ಗರ್ಹಿ ಶಾಹು ಪ್ರದೇಶದ ಅಲ್ಲಾಮಾ ಇಕ್ಬಾಲ್ ರಸ್ತೆಯಲ್ಲಿ ಟ್ರೇಲರ್ ವ್ಯಾನ್ ಕಾರಿಗೆ ಹಿಂದಿನಿಂದ ಢಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ. ಢಿಕ್ಕಿಯ ತೀವ್ರತೆಗೆ ಕಾರು ಟ್ರೇಲರ್ ಅಡಿಯಲ್ಲಿ ಸಿಲುಕಿಕೊಂಡಿತ್ತು. ಮೃತದೇಹಗಳನ್ನು ಹೊರತೆಗೆಯಲು ರಕ್ಷಣಾ ಸಿಬ್ಬಂದಿ ಕಾರಿನ ಅವಶೇಷಗಳನ್ನು ಕತ್ತರಿಸಬೇಕಾಯಿತು ಎಂದು ವರದಿಯಾಗಿದೆ.

# ನ್ಯೂಜಿಲೆಂಡ್ ಪ್ರವಾಸಕ್ಕೆ ಭಾರತ ತಂಡ ಪ್ರಕಟ

**ಮುಂಬಯಿ, ಅ.16:** ಮುಂಬರುವ ನ್ಯೂಜಿಲೆಂಡ್ ಪ್ರವಾಸಕ್ಕಾಗಿ ಬಿಸಿಸಿಐ ಏಕದಿನ ಹಾಗೂ ಟೆಸ್ಟ್ ತಂಡಗಳನ್ನು ಅಧಿಕೃತವಾಗಿ ಪ್ರಕಟಿಸಿದೆ. ಈ ಬಾರಿಯ ಸರಣಿಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹಂಚಿಕೊಳ್ಳಲಾಗಿದ್ದು, 50 ಓವರ್‌ಗಳ ಮಾದರಿಯಲ್ಲಿ ಶುಭಮನ್ ಗಿಲ್ ಮತ್ತು ಶ್ರೇಯಸ್ ಅಯ್ಯರ್ ತಂಡವನ್ನು ಮುನ್ನಡೆಸಲಿದ್ದಾರೆ.

ಪ್ರಕಟವಾಗಿರುವ ವೇಳಾಪಟ್ಟಿಯಂತೆ, ನ್ಯೂಜಿಲೆಂಡ್ ವಿರುದ್ಧದ ಐದು ಪಂದ್ಯಗಳ ಏಕದಿನ ಸರಣಿಯ ಮೊದಲ ಮೂರು ಪಂದ್ಯಗಳಿಗೆ ಆರಂಭಿಕ ಆಟಗಾರ ಶುಭಮಾನ್ ಗಿಲ್ ನಾಯಕರಾಗಿ ಮುಂದುವರಿಯಲಿದ್ದಾರೆ. ಶ್ರೇಯಸ್ ಅಯ್ಯರ್ ಉಪನಾಯಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಆದರೆ, ಸರಣಿಯ ಕೊನೆಯ ಎರಡು ಪಂದ್ಯಗಳಿಗೆ ನಾಯಕತ್ವದ ಜವಾಬ್ದಾರಿಯು ಶ್ರೇಯಸ್ ಅಯ್ಯರ್ ಹೆಗಲಿಗೇರಲಿದ್ದು, ಇಶಾನ್ ಕಿಶನ್ ಉಪನಾಯಕರಾಗಿ ಜವಾಬ್ದಾರಿ ಹಂಚಿಕೊಳ್ಳಲಿದ್ದಾರೆ. ಗಿಲ್ ಮೇಲಿನ ಕೆಲಸದೊತ್ತಡವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಬಿಸಿಸಿಐ ಈ ಹೆಜ್ಜೆ ಇಟ್ಟಿದೆ ಎಂದು ತಿಳಿದುಬಂದಿದೆ. ನಾಯಕ ಗಿಲ್ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲೂ ತಂಡವನ್ನು ಮುನ್ನಡೆಸಲಿದ್ದಾರೆ.

**ರೋಹಿತ್–ಕೊಹ್ಲಿ ಲಭ್ಯತೆ!:** ಟೆಸ್ಟ್ ಮತ್ತು ಟಿ20 ಕ್ರಿಕೆಟ್‌ಗೆ ವಿದಾಯ ಘೋಷಿಸಿರುವ ಭಾರತದ ಅನುಭವಿ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಏಕದಿನ ಸರಣಿಯ ಐದು ಪಂದ್ಯಗಳಿಗೂ ಲಭ್ಯವಿರಲಿದ್ದಾರೆ. ಇದು ತಂಡದ ಬ್ಯಾಟಿಂಗ್ ಬಲವನ್ನು ಮತ್ತಷ್ಟು ಹೆಚ್ಚಿಸಿದೆ. ಮತ್ತೊಂದೆಡೆ, ವಿಕೆಟ್‌ಕೀಪರ್ ಬ್ಯಾಟರ್ ಕುಮಾರ್ ಕುಶಾಗ್ರಾ ಅವರು ಏಕದಿನ ತಂಡಕ್ಕೆ ಮೊದಲ ಬಾರಿಗೆ




ಕರೆ ಪಡೆದಿದ್ದು, ಅಂತಿಮ ಎರಡು ಪಂದ್ಯಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇವರೊಂದಿಗೆ ಋತುರಾಜ್ ಗಾಯಕ್ವಾಡ್, ನಿತೀಶ್ ಕುಮಾರ್ ರೆಡ್ಡಿ ಹಾಗೂ ನಮನ್ ಧೀರ್ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ವೇಗಿ ಜಸ್ಪ್ರೀತ್ ಬೂಮ್ರಾ ಅವರಿಗೆ ಏಕದಿನ ಸರಣಿಯಿಂದ ವಿಶ್ರಾಂತಿ ನೀಡಲಾಗಿದ್ದು, ಟೆಸ್ಟ್ ತಂಡಕ್ಕೆ ಮರಳಿದ್ದಾರೆ.

**ಟೆಸ್ಟ್ ತಂಡಕ್ಕೆ ಆಕಾಶ್ ದೀಪ್ ವಾಪಸ್ ನ್ಯೂಜಿಲೆಂಡ್ ವಿರುದ್ಧದ ಎರಡು ಪಂದ್ಯಗಳ** ಟೆಸ್ಟ್ ಸರಣಿಗೆ ಶುಭಮಾನ್ ಗಿಲ್ ನಾಯಕರಾಗಿದ್ದು, ಅನುಭವಿ ಕೆ.ಎಲ್. ರಾಹುಲ್ ಉಪನಾಯಕರಾಗಿ ಆಯ್ಕೆಯಾಗಿದ್ದಾರೆ. ಬಂಗಾಳದ ವೇಗದ ಬೌಲರ್ ಆಕಾಶ್ ದೀಪ್ ಅವರು ಟೆಸ್ಟ್ ತಂಡಕ್ಕೆ ಮರಳಿದ್ದು, ಜಸ್ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರೊಂದಿಗೆ ವೇಗದ ದಾಳಿಯ ಹೊಣೆ ಹೊರಲಿದ್ದಾರೆ. ವಿಕೆಟ್‌ಕೀಪರ್‌ಗಳಾಗಿ ರಿಷಬ್ ಪಂತ್ ಹಾಗೂ ಧ್ರುವ ಜುರೆಲ್ ಸ್ಥಾನ ಪಡೆದಿದ್ದಾರೆ. ಆದಾಗ್ಯೂ, ರಿಷಬ್ ಪಂತ್ ಅವರ ಅಂತಿಮ ಆಟವು ಬಿಸಿಸಿಐ ಸೆಂಟರ್ ಆಫ್ ಎಕ್ಸಲೆನ್ಸ್‌ನ ಫಿಟ್‌ನೆಸ್ ಕ್ಲಿಯರೆನ್ಸ್‌ಗೆ ಒಳಪಟ್ಟಿರುತ್ತದೆ.

**ಭಾರತದ ಏಕದಿನ ತಂಡ (ಮೊದಲ ಮೂರು ಪಂದ್ಯಗಳಿಗೆ):** ಶುಭ್‌ಮಾನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್ (ಉಪನಾಯಕ), ಕೆಎಲ್ ರಾಹುಲ್ (ವಿಕೆಟ್‌ಕೀಪರ್), ನಿತೀಶ್ ಕುಮಾರ್ ರೆಡ್ಡಿ, ಅಕ್ಸರ್ ಪಟೇಲ್, ನಮನ್ ಧೀರ್, ಅನ್ಶುಲ್ ಕಂಬೋಜ್, ಗುರ್‌ನೂರ್ ಬ್ರಾರ್, ರುತುರಾಜ್ ಗಾಯಕ್ವಾಡ್, ಅರ್ಶ್‌ದೀಪ್ ಸಿಂಗ್, ಇಶಾನ್ ಕಿಶನ್ (ವಿಕೆಟ್‌ಕೀಪರ್), ಮೊಹಮ್ಮದ್ ಸಿರಾಜ್, ಪ್ರಸಿದ್ ಕೃಷ್ಣ (ಫಿಟ್‌ನೆಸ್ ಕ್ಲಿಯರೆನ್ಸ್‌ಗೆ ಒಳಪಟ್ಟು), ಕುಲ್‌ದೀಪ್ ಯಾದವ್.

**ಭಾರತದ ಏಕದಿನ ತಂಡ (ನಾಲ್ಕನೇ ಮತ್ತು ಐದನೇ ಪಂದ್ಯಗಳಿಗೆ):** ಶ್ರೇಯಸ್ ಅಯ್ಯರ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ತಿಲಕ್ ವರ್ಮಾ, ಇಶಾನ್ ಕಿಶನ್ (ವಿಕೆಟ್‌ಕೀಪರ್ ಮತ್ತು ಉಪನಾಯಕ), ನಿತೀಶ್ ಕುಮಾರ್ ರೆಡ್ಡಿ, ಅಕ್ಸರ್ ಪಟೇಲ್, ನಮನ್ ಧೀರ್, ಅಕ್ವಿಬ್ ನಬಿ, ಗುರ್‌ನೂರ್ ಬ್ರಾರ್, ರುತುರಾಜ್ ಗಾಯಕ್ವಾಡ್, ಅರ್ಶ್‌ದೀಪ್ ಸಿಂಗ್, ಕುಮಾರ್ ಕುಶಾಗ್ರ (ವಿಕೆಟ್‌ಕೀಪರ್), ಮೊಹಮ್ಮದ್ ಸಿರಾಜ್, ಯಶ್ ಠಾಕೂರ್, ಕುಲ್‌ದೀಪ್ ಯಾದವ್.

**ಟೆಸ್ಟ್ ತಂಡ:** ಶುಭ್‌ಮಾನ್ ಗಿಲ್ (ನಾಯಕ), ಯಶಸ್ವಿ ಜೈಸ್ವಾಲ್, ಕೆಎಲ್ ರಾಹುಲ್ (ಉಪನಾಯಕ), ದೇವದತ್ ಪಡಿಕ್ಕಲ್, ರಿಷಭ್ ಪಂತ್ (ವಿಕೆಟ್‌ಕೀಪರ್, ಫಿಟ್‌ನೆಸ್ ಕ್ಲಿಯರೆನ್ಸ್‌ಗೆ ಒಳಪಟ್ಟು), ಧ್ರುವ್ ಜುರೆಲ್ (ವಿಕೆಟ್‌ಕೀಪರ್), ರವೀಂದ್ರ ಜಡೇಜಾ, ಅನ್ಶುಲ್ ಕಂಬೋಜ್, ಜಸ್ಪ್ರೀತ್ ಬುಮ್ರಾ, ಪ್ರಸಿದ್ ಕೃಷ್ಣ, ಆಕಾಶ್

# ಕ್ರಿಕೆಟ್ ಪ್ರೇಮಿಗಳಿಗೆ ಬಿಎಂಆರ್‌ಸಿಎಲ್ ಗುಡ್‌ನ್ಯೂಸ್

## ಇಂದು ಟಿ20 ಪಂದ್ಯದ ನಂತರ ಮನೆಗೆ ತೆರಳುವವರಿಗೆ ಮೆಟ್ರೋ ರೈಲು ಸೇವೆ

**ಬೆಂಗಳೂರು, ಅ.16:** ಕ್ರಿಕೆಟ್ ಪ್ರೇಮಿಗಳಿಗೆ ಬಿಎಂಆರ್‌ಸಿಎಲ್ ಗುಡ್‌ನ್ಯೂಸ್ ನೀಡಿದೆ. ನಾಳೆ ಮಧ್ಯರಾತ್ರಿವರೆಗೂ ನಮ್ಮ ಮೆಟ್ರೋ ಸಂಚಾರ ನಡೆಸಲಿದೆ ಎಂದು ಮಾಹಿತಿ ನೀಡಿದೆ.

ಅಕ್ಟೋಬರ್ 17ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತ ಹಾಗೂ ವೆಸ್ಟ್ ಇಂಡೀಸ್ ನಡುವೆ ಟಿ20 ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ. ಕ್ರಿಕೆಟ್ ಪಂದ್ಯ ವೀಕ್ಷಿಸಿ ಮನೆಗೆ ಮರಳುವ ಕ್ರೀಡಾಭಿಮಾನಿಗಳಿಗೆ ಯಾವುದೇ ತೊಂದರೆಯಾಗದಂತೆ ನಮ್ಮ ಮೆಟ್ರೋ ರೈಲು ಸೇವೆಗಳ ಸಮಯವನ್ನು ವಿಸ್ತರಿಸಿ ಬಿಎಂಆರ್‌ಸಿಎಲ್ ಆದೇಶ ಹೊರಡಿಸಿದೆ.

ಕ್ರಿಕೆಟ್ ಪಂದ್ಯ ಮುಗಿದ ಬಳಿಕ ಪ್ರಯಾಣಿಕರ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು, ನಾಳೆ ಎಲ್ಲಾ ಟರ್ಮಿನಲ್ ನಿಲ್ದಾಣಗಳಿಂದ ಕೊನೆಯ ರೈಲು ಸೇವೆಯನ್ನು ರಾತ್ರಿ 11:00 ಗಂಟೆಯಿಂದ ಮರುದಿನ ಮುಂಜಾನೆ 01:15 ಗಂಟೆಯವರೆಗೆ ವಿಸ್ತರಿಸಲಾಗಿದೆ.

**ವಿವಿಧ ಪ್ರಮುಖ ಮಾರ್ಗಗಳ ಕೊನೆಯ ರೈಲು ಸಮಯದ ವಿವರ ಇಲ್ಲಿದೆ:** ವೈಟ್‌ಫೀಲ್ಡ್ (ಕಾಡುಗೋಡಿ): ಮಧ್ಯರಾತ್ರಿ 12:00 ಗಂಟೆಗೆ



ಕೊನೆಯ ರೈಲು ಹೊರಡಲಿದೆ. ಸಿಲ್ಕ್ ಇನ್‌ಸ್ಟಿಟ್ಯೂಟ್ ಮತ್ತು ಮಾದವಾರ: ಮರುದಿನ ಮುಂಜಾನೆ 12:15 ಗಂಟೆಗೆ ಕೊನೆಯ ರೈಲು ಸಂಚಾರ ಮಾಡಲಿದೆ. ಬೊಮ್ಮಸಂದ್ರ: ಮಧ್ಯರಾತ್ರಿ 12:00 ಗಂಟೆಗೆ ಕೊನೆಯ ರೈಲು ಇರಲಿದೆ. ಆರ್.ವಿ. ರಸ್ತೆ : ಮರುದಿನ ಮುಂಜಾನೆ 1:30 ಗಂಟೆಗೆ ಕೊನೆಯ ರೈಲು ಸಂಚಾರ ಮಾಡಲಿದೆ. ನಾಡಪ್ರಭು ಕೆಂಪೇಗೌಡ ನಿಲ್ದಾಣ (ಮೆಜೆಸ್ಟಿಕ್): ಮೆಜೆಸ್ಟಿಕ್‌ನಿಂದ ಎಲ್ಲಾ ನಾಲ್ಕು ದಿಕ್ಕುಗಳಿಗೆ ಹೊರಡುವ ಕೊನೆಯ ರೈಲು ಮರುದಿನ ಮುಂಜಾನೆ 1:00 ಗಂಟೆಗೆ ಹೊರಡಲಿದೆ.

**ಪ್ರಯಾಣಿಕರ ಅನುಕೂಲಕ್ಕಾಗಿ ವಿಶೇಷ ಕ್ಯುಆರ್ ಕೋಡ್:** ಪಂದ್ಯ ವೀಕ್ಷಿಸಿ ವಾಪಸ್ಸಾಗುವಾಗ ಟೋಕನ್ ಪಡೆಯಲು ಸರತಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸಲು ಪ್ರಯಾಣವನ್ನು ಸುಗಮಗೊಳಿಸಲಾಗಿದೆ. ಪ್ರಯಾಣಿಕರು ಎರಡು–ಮಾರ್ಗದ ಪ್ರಯಾಣಕ್ಕಾಗಿ ಡಿಜಿಟಲ್ ಟಿ20 ಪಂದ್ಯದ ಟಿಕೆಟ್‌ಗಳಲ್ಲೇ 'ನಮ್ಮ ಮೆಟ್ರೋ ಕ್ಯುಆರ್ ಕೋಡ್' ಅಳವಡಿಸಲಾಗಿದೆ. ಇದರ ಮೂಲಕ ಅಭಿಮಾನಿಗಳು ಸುಲಭವಾಗಿ ಮೆಟ್ರೋ ಪ್ರಯಾಣ ಮಾಡಬಹುದು. ಕ್ರೀಡಾಂಗಣದಲ್ಲಿ ಪ್ರವೇಶ/ನಿರ್ಗಮನ ಗೇಟ್‌ಗಳ ಆಧಾರದ ಮೇಲೆ ನಿಗದಿತ ಮೆಟ್ರೋ ನಿಲ್ದಾಣಗಳನ್ನು ಬಳಸುವಂತೆ ಬಿಎಂಆರ್‌ಸಿಎಲ್ ಕೋರಿದೆ. ಕಬ್ಬನ್ ರಸ್ತೆ ಮೂಲಕವಿರುವ ಗೇಟ್‌ಗಳಿಗೆ ಕಬ್ಬನ್ ಪಾರ್ಕ್ ಮೆಟ್ರೋ ನಿಲ್ದಾಣ ಹಾಗೂ ಲಿಂಕ್ ರಸ್ತೆ ಮೂಲಕವಿರುವ ಗೇಟ್‌ಗಳಿಗೆ ಸಮೀಪವಿರುವ ಮಹಾತ್ಮ ಗಾಂಧಿ ರಸ್ತೆ ಮೆಟ್ರೋ ನಿಲ್ದಾಣವನ್ನು ಬಳಸಲು ಸಲಹೆ ನೀಡಲಾಗಿದೆ. ಯಾವುದೇ ಅಹಿತಕರ ಘಟನೆಗಳನ್ನು ತಡೆಯಲು ಪ್ರಯಾಣಿಕರ ಸುರಕ್ಷತೆಯ ಹಿತದೃಷ್ಟಿಯಿಂದ ನಿಲ್ದಾಣದ ಪ್ರವೇಶ ಬಿಂದುಗಳನ್ನು ನಿಯಂತ್ರಿಸುವ ಅಥವಾ ತಾತ್ಕಾಲಿಕವಾಗಿ ಮುಚ್ಚುವ ಹಕ್ಕನ್ನು ಃಒಖಅಐ ಕಾಯ್ದುಕೊಂಡಿದೆ.